# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಬುಧವಾರ, ಮೇ 29, 2024

ಸಂಪುಟ : 51 ಸಂಚಿಕೆ : 15 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com






ಚಿತ್ರ: ರಫೀಕ್, ಜನತಾವಾಣಿ

## ಬೆಳ್ಳಾನೆ ಎರಡೆತ್ತು ಬೆಳ್ಳಿಯ ಬಾರಕೋಲು...

ಜಿಲ್ಲೆಯಲ್ಲಿ ಕಳೆದೊಂದು ವಾರದಿಂದ ಮುಂಗಾರು ಪೂರ್ವ ಮಳೆ ಉತ್ತಮವಾಗಿದ್ದ ಪರಿಣಾಮ ಕೃಷಿ ಚಟುವಟಿಕೆಗಳು ಗರಿಗೆದರಿವೆ. ಜಿಲ್ಲೆಯ ಕೆಲವೆಡೆ ಬಿತ್ತನೆ ಆರಂಭವಾಗಿದ್ದರೆ, ಉಳಿದೆಡೆ ಭೂಮಿ ಹದ ಮಾಡುವ ಕಾರ್ಯಗಳೂ ನಡೆಯುತ್ತಿವೆ. ನ್ಯಾಮತಿ ಬಳಿಯ ಜಮೀನಿನಲ್ಲಿ ಕೃಷಿಕ ಉಳುಮೆಯಲ್ಲಿ ನಿರತನಾಗಿರುವ ಚಿತ್ರವಿದು.

# ನಗರೀಕರಣದಿಂದ ರಾತ್ರಿ ತಾಪಮಾನ ಶೇ.60ಕ್ಕೆ ಏರಿಕೆ

ನವದೆಹಲಿ, ಮೇ 28 – ನಗರೀಕರಣದ ಕಾರಣದಿಂದಾಗಿ ದೇಶದ 140 ಪ್ರಮುಖ ನಗರಗಳಲ್ಲಿ ರಾತ್ರಿ ತಾಪಮಾನ ಶೇ.60ರವರೆಗೆ ಹೆಚ್ಚಾಗಿದೆ ಎಂದು ಐ.ಐ.ಟಿ. ಭುವನೇಶ್ವರ್ ನಡೆಸಿದ ಇತ್ತೀಚಿನ ಅಧ್ಯಯನ ತಿಳಿಸಿದೆ.


ಅಹಮದಾಬಾದ್, ಜೈಪುರ ಹಾಗೂ ರಾಜಕೋಟ್‌ಗಳಲ್ಲಿ ನಗರೀಕರಣದ ಪ್ರಭಾವ ಅತಿ ಹೆಚ್ಚಾಗಿ ಕಂಡು ಬಂದಿದೆ. ನಂತರದ ಸ್ಥಾನದಲ್ಲಿ ದೆಹಲಿ ರಾಜಧಾನಿ ವಲಯ ಹಾಗೂ ಪುಣೆ ಇವೆ. ನಗರಗಳು ತಾಪ ಹಿಡಿದಿಟ್ಟುಕೊಳ್ಳುವ ದ್ವೀಪಗಳಂತಾಗಿವೆ. ರಸ್ತೆ ಹಾಗೂ ಪಾದಚಾರಿ ಮಾರ್ಗ ನಿರ್ಮಾಣಕ್ಕೆ ಕಾಂಕ್ರೀಟ್ ಬಳಸಲಾಗುತ್ತಿದೆ. ಈ ಕಾಂಕ್ರೀಟ್‌ಗಳು ಬೆಳಿಗ್ಗೆ ತಾಪಮಾನ ಹಿಡಿದಿಟ್ಟುಕೊಂಡು, ಸಂಜೆ ಹೊರ ಬಿಡುತ್ತಿವೆ. ಇದರಿಂದಾಗಿ ರಾತ್ರಿ ವೇಳೆ ತಾಪಮಾನ ಹೆಚ್ಚಾಗುತ್ತಿದೆ.

ಪರಿಸರ ಬದಲಾವಣೆ, ಮಳೆ ಪ್ರಮಾಣದಲ್ಲಿ ಬದಲಾವಣೆ ಹಾಗೂ ಮಾಲಿನ್ಯಗಳೂ ತಾಪಮಾನ ಹೆಚ್ಚಾಗಲು ಕಾರಣವಾಗಿವೆ ಎಂದು ನೇಚರ್ ಸಿಟೀಸ್ ನಿಯತಕಾಲಿಕದಲ್ಲಿ ಪ್ರಕಟಿಸಲಾದ ಅಧ್ಯಯನ ತಿಳಿಸಿದೆ. 2003ರಿಂದ 2020ರ ನಡುವೆ ತಾಪಮಾನದಲ್ಲಿ ಆದ ಬದಲಾವಣೆಗಳ ಅಧ್ಯಯನ ಮಾಡಿ ಈ ವರದಿ ರೂಪಿಸಲಾಗಿದೆ.

ಬಹುತೇಕ ಎಲ್ಲ ನಗರಗಳಲ್ಲಿ ದಶಕದಲ್ಲಿ ತಾಪಮಾನ ಸರಾಸರಿ 0.53 ಡಿಗ್ರಿ ಸೆಲ್ಸಿಯಸ್ (3ನೇ ಪುಟಕ್ಕೆ)

# ರೈತರಿಂದ ವಿಚಾರವಂತಿಕೆಯ ಹೋರಾಟ ಅಗತ್ಯ

## ರೈತರ ಸಭೆಯಲ್ಲಿ ಮುಖಂಡ ಕುರುಬೂರು ಶಾಂತಕುಮಾರ್



ದಾವಣಗೆರೆ, ಮೇ 28- ಬಗರ್ ಹುಕ್ಕುಂ ಸಾಗುವಳಿ ಪತ್ರ ವಿಳಂಬ, ಬರ ಪರಿಹಾರ ತಾರತಮ್ಯ ಸೇರಿದಂತೆ ಜಿಲ್ಲಾವಾರು ಸಮಸ್ಯೆಗಳನ್ನು ಕ್ರೋಢೀಕರಿಸಿ ರಾಜ್ಯಾದ್ಯಂತ ಹೋರಾಟ ನಡೆಸಲು ರಾಜ್ಯ ರೈತ ಸಂಘಟನೆಗಳ ಒಕ್ಕೂಟ ನಿರ್ಧರಿಸಿದೆ.

ನಗರದ ಕೃಷಿ ಉತ್ಪನ್ನ ಮಾರುಕಟ್ಟೆ ಸಭಾಂಗಣದಲ್ಲಿ ಮಂಗಳವಾರ ಮಧ್ಯಾಹ್ನ ನಡೆದ ಪ್ರಾಯೋಗಿಕ ಸಭೆಯಲ್ಲಿ ಚರ್ಚೆ ನಡೆಸಿದ ರೈತ ಮುಖಂಡರು, ಮುಂದಿನ ದಿನಗಳಲ್ಲಿ ಮತ್ತಷ್ಟು ಸಭೆಗಳನ್ನು ನಡೆಸಿ, ಚರ್ಚಿಸಲು ನಿರ್ಧರಿಸಿದರು. ಇದರ ಅಂಗವಾಗಿ ಬರುವ ಜೂನ್ 10ರಂದು ಬೆಳಗಾವಿಯಲ್ಲಿ ಸಭೆ ನಡೆಸಲು ತೀರ್ಮಾನಿಸಲಾಯಿತು.

ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ದೇಶದ ಬೆಳವಣಿಗೆ, ಕಾನೂನು, ಆಡಳಿತ ಹೀಗೆ ಸಾಕಷ್ಟು ಬದಲಾವಣೆಗಳಾಗುತ್ತವೆ. ಈ ಬದಲಾವಣೆ ಗಳನ್ನು ಅರಿತು ವಿಚಾರವಂತಿಕೆಯಿಂದ ಹೋರಾಟ ಮಾಡಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಿದೆ ಎಂದರು.

ರಾಜ್ಯದಲ್ಲಿನ 225 ಶಾಸಕರ ಪೈಕಿ 126 ಶಾಸಕರು ರೌಡಿ ಹಿನ್ನೆಲೆ ಉಳ್ಳವರು. ಅಂತವರನ್ನು (4ನೇ ಪುಟಕ್ಕೆ)

## ಭಾವಪೂರ್ಣ ಶ್ರದ್ಧಾಂಜಲಿ



ಕಾಯಿಪೇಟೆಯ
ಶ್ರೀ ಬಸವೇಶ್ವರ ದೇವಸ್ಥಾನ ಸೇವಾ ಸಂಘದ ಅಧ್ಯಕ್ಷರೂ,
ಶ್ರೀ ಬಸವೇಶ್ವರರ ಸದ್ಭಕ್ತರೂ ಆದ
**ಶ್ರೀ ಮಾಗಾನಹಳ್ಳಿ ಚಂದ್ರಶೇಖರಪ್ಪನವರು**
ಅವರು ದಿನಾಂಕ 25.5.2024ರಂದು ಶಿವಾಧೀನರಾಗಿದ್ದು, ಶ್ರೀಯುತರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.

ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

**ಸಮಸ್ತ ಸದ್ಭಕ್ತರು ಮತ್ತು ಪದಾಧಿಕಾರಿಗಳು**
**ಕಾಯಿಪೇಟೆ ಶ್ರೀ ಬಸವೇಶ್ವರ ದೇವಸ್ಥಾನ ಸೇವಾ ಸಂಘ (ರಿ.)** ಕಾಯಿಪೇಟೆ, ದಾವಣಗೆರೆ.





## ಪ್ಯಾನ್ - ಆಧಾರ್ ಜೋಡಣೆಗೆ ಸೂಚನೆ

ನವದೆಹಲಿ, ಮೇ 28 – ಹೆಚ್ಚಿನ ದರದ ತೆರಿಗೆ ಕಡಿತ ತಪ್ಪಿಸುವ ಸಲು ವಾಗಿ ಮೇ 31ರ ಒಳಗೆ ತೆರಿಗೆ ಪಾವತಿದಾರರು ಪ್ಯಾನ್ ಹಾಗೂ ಆಧಾರ್ ಜೋಡಣೆ ಮಾಡಬೇಕು ಎಂದು ಆದಾಯ ತೆರಿಗೆ ಇಲಾಖೆ ತಿಳಿಸಿದೆ. ಆಧಾರ್ ಜೊತೆ ಪ್ಯಾನ್ ಜೋಡಣೆ ಮಾಡದೇ ಇದ್ದರೆ, ಸಾಮಾನ್ಯಕ್ಕಿಂತ ಎರಡು (4ನೇ ಪುಟಕ್ಕೆ)

## ಬಂಗಾರದ ವೇಸ್ಟೇಜ್ ನಿಯಮ ಜಾರಿ ಮುಂದೂಡಿಕೆ

ನವದೆಹಲಿ, ಮೇ 28 – ಬಂಗಾರ, ಬೆಳ್ಳಿ ಹಾಗೂ ಪ್ಲಾಟಿನಂ ಇರುವ ಆಭರಣಗಳ ರಫ್ತಿಗೆ ಸಂಬಂಧಿಸಿದ ವೇಸ್ಟೇಜ್ ಪ್ರಮಾಣ ಕುರಿತ ಹೊಸ ನಿಯಮಗಳ ಜಾರಿಯನ್ನು ಕೇಂದ್ರ ಸರ್ಕಾರ ಜುಲೈ 31, 2024ರವರೆಗೆ ತಡೆ ಹಿಡಿದಿದೆ. ನೂತನ ಮಾನದಂಡಗಳ ಬಗ್ಗೆ ಕಳವಳಗಳು ವ್ಯಕ್ತವಾದ ಹಿನ್ನೆಲೆಯಲ್ಲಿ ಸರ್ಕಾರ ಹೊಸ ನಿಯಮಗಳ ಜಾರಿ ತಡೆದಿದೆ. ಸಮಾಲೋಚನೆ ನಡೆಸದೇ ಹೊಸ ನಿಯಮಗಳನ್ನು ಜಾರಿಗೆ ತರಲಾಗಿದೆ ಎಂದು ಉದ್ಯಮದವರು ಆಕ್ಷೇಪಿಸಿದ್ದರು.



## ಮಲೇಬೆನ್ನೂರಿನಲ್ಲಿ ಇಂದಿನಿಂದ ಬಿತ್ತನೆ ಬೀಜ ವಿತರಣೆ

ರೈತ ಸಂಪರ್ಕ ಕೇಂದ್ರದಲ್ಲಿ ಇಂದು ಬೆಳಿಗ್ಗೆ 11 ಗಂಟೆಯಿಂದ ರೈತರಿಗೆ ಮೆಕ್ಕೆಜೋಳ, ತೊಗರಿ, ಹಲಸಂದಿ ಮತ್ತು ಸೋಯಾಬಿನ್ ಬಿತ್ತನೆ ಬೀಜಗಳನ್ನು ವಿತರಣೆ ಮಾಡಲಾಗುವುದು. ಮುಂಗಾರು ಹಂಗಾಮಿನ ಬಿತ್ತನೆಗಾಗಿ ಈ ಬೀಜಗಳನ್ನು ವಿತರಿಸುತ್ತಿದ್ದು, ಆಸಕ್ತ ರೈತರು ಬೀಜ ಖರೀದಿಸಲು ಪಹಣಿ ಮತ್ತು ಆಧಾರ್ ಕಾರ್ಡ್‌ಗಳನ್ನು ತರುವಂತೆ ಕೃಷಿ ಅಧಿಕಾರಿ ಇನಾಯತ್ ತಿಳಿಸಿದ್ದಾರೆ.

## ನಗರದಲ್ಲಿ ನಾಳೆ ಪರಿಸರ ಸಂರಕ್ಷಣೆ ಬೀದಿ ನಾಟಕ

ದಾವಣಗೆರೆ, ಮೇ 28- ನಗರದ ದವನ್ ಕಾಲೇಜಿನ ವತಿಯಿಂದ ಪರಿಸರ ಸಂರಕ್ಷಣೆ ಎಂಬ ಬೀದಿ ನಾಟಕ ಪ್ರದರ್ಶನವನ್ನು ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿ ನಾಡಿದ್ದು ದಿನಾಂಕ 30ರ ಗುರುವಾರ ಮಧ್ಯಾಹ್ನ 12.30ಕ್ಕೆ ಹಮ್ಮಿಕೊಳ್ಳಲಾಗಿದೆ.

ಕಾಲೇಜಿನ ಪ್ರಥಮ ಬಿಸಿಎ ಸಿ ವಿಭಾಗದ ವಿದ್ಯಾರ್ಥಿಗಳಿಂದ ಈ ನಾಟಕ ಪ್ರದರ್ಶನ ನಡೆಯಲಿದೆ.

# ಚನ್ನಗಿರಿ ಠಾಣೆ ಪ್ರಕರಣ ; ಆದಿಲ್ ನಿವಾಸಕ್ಕೆ ವಿನಯ್ ಭೇಟಿ : ಸಾಂತ್ವನ



ದಾವಣಗೆರೆ, ಮೇ 28- ಚನ್ನಗಿರಿ ಪಟ್ಟಣದ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಾಟ, ವಾಹನಗಳ ಜಖಂ, ಪೊಲೀಸ್ ಸಿಬ್ಬಂದಿಗೆ ಗಾಯ ಸೇರಿದಂತೆ ಗಲಾಟೆ ನಡೆದಿರುವುದು ದುರಾದೃಷ್ಟಕರ. ಅದೇ ರೀತಿಯಲ್ಲಿ ಆದಿಲ್ ಸಾವಿಗೆ ನ್ಯಾಯ ಸಿಗಬೇಕು ಎಂದು ದಾವಣಗೆರೆ ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಹಾಗೂ ಇನ್‌ಸೈಟ್ಸ್ ಐಎಎಸ್ ಸಂಸ್ಥೆಯ ಸಂಸ್ಥಾಪಕ ಜಿ. ಬಿ. ವಿನಯ್ ಕುಮಾರ್ ಒತ್ತಾಯಿಸಿದ್ದಾರೆ.

ಚನ್ನಗಿರಿ ಪಟ್ಟಣದ ಟಿಪ್ಪು ನಗರದಲ್ಲಿರುವ ಆದಿಲ್ ನಿವಾಸಕ್ಕೆ ಭೇಟಿ ನೀಡಿ, ಕುಟುಂಬಸ್ಥರಿಗೆ ಸಾಂತ್ವನ ಹೇಳಿದ ಬಳಿಕ ಮಾಧ್ಯಮದವರ ಜೊತೆ ಮಾತನಾಡಿದ ಅವರು, ಎಫ್‌ಐಆರ್ ದಾಖಲಿಸದೇ ಆದಿಲ್ ಅವರನ್ನು ಯಾಕೆ ವಶಕ್ಕೆ ಪಡೆಯಲಾಯಿತು ? ಎಂಬ ಪ್ರಶ್ನೆ ಎಲ್ಲರಲ್ಲಿಯೂ ಮೂಡಿದೆ. ಯಾಕೆ ಗಲಭೆ ನಿಯಂತ್ರಣ ಮಾಡಲು ಆಗಲಿಲ್ಲ? ಜೀಪ್ ಧ್ವಂಸ ಮಾಡಿದ್ದು, ಕಲ್ಲು ತೂರಾಟ ಮಾಡಿದ್ದು ಸರಿಯಲ್ಲ. ಪೊಲೀಸರ ಮೇಲೆ ಕಲ್ಲು ತೂರಾಟ ಮಾಡಿದ್ದು ತಪ್ಪು. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು ಎಂದು ಹೇಳಿದರು.

ಅಮಾಯಕರನ್ನು ಯಾವುದೇ ಕಾರಣಕ್ಕೂ ಪೊಲೀಸರು ಬಂಧಿಸಬಾರದು. ಎಷ್ಟೋ ಜನರು ಗಲಾಟೆ ಆಗುತ್ತಿರುವಾಗ ನೋಡಲು ಬಂದಿರುತ್ತಾರೆ. ಪೊಲೀಸರು ಗಲಾಟೆಯಲ್ಲಿ ಭಾಗಿಯಾಗದವರನ್ನು ಅರೆಸ್ಟ್ ಮಾಡುವುದು ಸೂಕ್ತವಲ್ಲ. ಚನ್ನಗಿರಿ ಸಮೃದ್ಧಿ ತಾಣ. ಶಾಂತಿಯ ನೆಲವಾಗಿತ್ತು. ಆದರೆ, ಈ ಘಟನೆ ನಡೆದಿದ್ದು ಸರಿಯಲ್ಲ ಎಂದರು.

ಈ ಘಟನೆ ವೈಭವೀಕರಣ ಸರಿಯಲ್ಲ. ಸುಳ್ಳು ಸುದ್ದಿ ಬಗ್ಗೆ ಯಾರೂ ಕಿವಿಗೊಡಬಾರದು. ಲಾಕಪ್ ಡೆತ್ ಆಗಿದೆಯೋ, ಇಲ್ಲವೋ ಗೊತ್ತಿಲ್ಲ. ಈ ಬಗ್ಗೆ ತನಿಖೆಯಾದ ಬಳಿಕ ಸತ್ಯಾಂಶ ಹೊರಬರಲಿದೆ. ಸುಳ್ಳು ವದಂತಿ ಹರದಡಿದಾಗ ಜನರು ಆವೇಗ, ಆವೇಶಗೊಳ್ಳುವುದು ಸಹಜ. ಕಾನೂನು ಕೈಗೆ ತೆಗೆದುಕೊಂಡಿದ್ದು ತಪ್ಪು. ಇದನ್ನು ಸಮರ್ಥಿಸಿಕೊಳ್ಳಲು ಆಗದು ಎಂದು ವಿನಯ್ ಕುಮಾರ್ ಅಭಿಪ್ರಾಯಪಟ್ಟರು.

ಗಲಾಟೆ ಕುರಿತಂತೆ ಇಡೀ ಸಮುದಾಯ ವನ್ನೇ ಟಾರ್ಗೆಟ್ ಮಾಡುವುದು ಸರಿಯಲ್ಲ. ಹಿಂದೂಪರ ಸಂಘಟನೆಗಳು ಪ್ರತಿಭಟನೆ ನಡೆಸಿವೆ. ಪೊಲೀಸರ ಮೇಲೆ ಹೆಚ್ಚಿನ ಒತ್ತಡ ಇದ್ದಾಗ ಅಮಾಯಕರನ್ನು ಬಂಧಿಸುವ ಸಾಧ್ಯತೆ ಇರುತ್ತದೆ ಎಂದು ಹೇಳಿದರು.

ಆದಿಲ್ ಸಾವು ಹಾಗೂ ಪೊಲೀಸ್ ಠಾಣೆ ಮುಂದೆ ನಡೆದ ಅಹಿತಕರ ಘಟನೆಗಳ ಕುರಿತಂತೆ ಪಾರದರ್ಶಕ ತನಿಖೆ ನಡೆಯಬೇಕು. ಈ ರೀತಿಯ ಘಟನೆಗಳು ಮರುಕಳಿಸದಂತೆ ಪೊಲೀಸರು ಎಚ್ಚರಿಕೆ ವಹಿಸಬೇಕು. ಕೆಲವರು ವಿನಾಕಾರಣ ಬಂಧಿಸುವ ಸಾಧ್ಯತೆ ಇರುವುದರಿಂದ ಮನೆ ಬಿಟ್ಟು ಹೋಗಿರುತ್ತಾರೆ. ಗಲಾಟೆ ಮಾಡಿರುವವರು ಮನೆ ಬಿಟ್ಟು ಹೋಗಿರುತ್ತಾರೆ. ಸಮಾಜದಲ್ಲಿ ಪೊಲೀಸರು ಸ್ನೇಹಿತರಂತೆ ಎಂದು ತಿಳಿಸಿದರು.

# ಚಾಟ್‌ಜಿಪಿಟಿ ಮನುಷ್ಯ ಚಿಂತನೆ ಹಂತಕ್ಕೆ ಬರದು : ಲೆಕುನ್

ನವದೆಹಲಿ, ಮೇ 28 - ತರ್ಕ ಹಾಗೂ ಯೋಜನೆಯ ವಿಷಯಕ್ಕೆ ಬಂದಾಗ ಚಾಟ್‌ಜಿಪಿಟಿ ಹಾಗೂ ಜೆಮಿನಿಯಂತಹ ಕೃತಕ ಬುದ್ಧಿವಂತಿಕೆ (ಎ.ಐ.) ಚಾಟ್‌ಬಾಟ್‌ಗಳು ಮನುಷ್ಯರ ಹಂತಕ್ಕೆ ಬರಲು ಸಾಧ್ಯವಾಗುವುದಿಲ್ಲ ಎಂದು ಮೆಟಾ ಮುಖ್ಯ ಎ.ಐ. ವಿಜ್ಞಾನಿ ಯಾನ್ ಲೆಕುನ್ ಅಭಿಪ್ರಾಯಪಟ್ಟಿದ್ದಾರೆ.

ಚಾಟ್‌ಜಿಪಿಟಿ ಹಾಗೂ ಜೆಮಿನಿಗಳು ಬೃಹತ್ ಭಾಷಾ ಮಾದರಿ (ಎಲ್.ಎಲ್.ಎಂ.) ಬಳಸಿಕೊಳ್ಳುತ್ತವೆ. ಭಾಷೆ ಆಧರಿಸಿದ ಈ ತಂತ್ರಜ್ಞಾನ ತರ್ಕದ ಬಗ್ಗೆ ಹೊಂದಿರುವ ತಿಳುವಳಿಕೆ ಕಡಿಮೆ. ಭೌತಿಕ ಜಗತ್ತು ಅರ್ಥವಾಗುವುದಿಲ್ಲ. ಯೋಜನೆ ರೂಪಿಸಲು ಸಾಧ್ಯವಾಗುವುದಿಲ್ಲ ಎಂದು ಲೆಕುನ್ ಹೇಳಿದ್ದಾರೆ.

ಅಲ್ಲದೇ, ಚಾಟ್‌ಜಿಪಿಟಿ ಮುಂತಾದವು ತಮ್ಮ ಬಳಿ ಇರುವ ಮಾಹಿತಿಯನ್ನು ಆಧರಿಸಿ ಉತ್ತರ ನೀಡುತ್ತವೆ. ಹೀಗಾಗಿ ಇವುಗಳು ಅಸುರಕ್ಷಿತ ಎಂದೂ ಲೆಕುನ್ ಅಭಿಪ್ರಾಯ ಪಡುತ್ತಾರೆ. ಇಷ್ಟೆಲ್ಲ ಮಿತಿಗಳಿದ್ದರೂ ಚಾಟ್‌ಜಿಪಿಟಿ ಹಾಗೂ ಜೆಮಿನಿಯಂತಹ ಎಲ್.ಎಲ್.ಎಂ.ಗಳು ಕೆಲ ವಲಯಗಳಲ್ಲಿ ಹೆಚ್ಚು ಉಪಯುಕ್ತವಾಗಿವೆ ಎಂದವರು ಅಭಿಪ್ರಾಯ ಪಡುತ್ತಾರೆ.


ಮೆಟಾ ಫಂಡಮೆಂಟಲ್ ಎ.ಐ. ಸರ್ಚ್ ಲ್ಯಾಬ್ (ಎಫ್.ಐ.ಐ.ಆರ್.)ನಲ್ಲಿ ಸಾಮಾನ್ಯ ಜ್ಞಾನ ಹೊಂದಬಹುದಾದ ಹಾಗೂ ಸುತ್ತಲಿನ ಜಗತ್ತನ್ನು ನೋಡಿ ಅರ್ಥ ಮಾಡಿಕೊಳ್ಳುವ ಎ.ಐ. ತಂತ್ರಜ್ಞಾನದ ಪ್ರಯೋಗ ನಡೆಯುತ್ತಿದೆ. ಆದರೆ, ಈ ರೀತಿಯ ತಂತ್ರಜ್ಞಾನ ಫಲ ನೀಡುವ ಬಗ್ಗೆ ಪ್ರಶ್ನೆಗಳಿವೆ. ಹೂಡಿಕೆದಾರರು ಈ ಬಗ್ಗೆ ಆಸಕ್ತಿ ತೋರುವ ಬಗ್ಗೆಯೂ ಸವಾಲುಗಳಿವೆ ಎಂದು ಲೆಕುನ್ ತಿಳಿಸಿದ್ದಾರೆ.

ಕೃತಕ ಸಾಮಾನ್ಯ ಬುದ್ಧಿವಂತಿಕೆ (ಎ.ಜಿ.ಐ.) ಅಭಿವೃದ್ಧಿ ಪಡಿಸುವಲ್ಲಿ ವೈಜ್ಞಾನಿಕ ಸವಾಲುಗಳಿವೆ ಎಂದವರು ಹೇಳಿದ್ದಾರೆ.

# ಹೊನ್ನಾಳಿ : ಭೀಕರ ಬರಗಾಲದಲ್ಲೂ ಭಕ್ತರ ಭಕ್ತಿಗೆ ಬರಗಾಲವಿಲ್ಲ

### ಸುಂಕದಕಟ್ಟೆಯ ಶ್ರೀ ನರಸಿಂಹಸ್ವಾಮಿ ಮತ್ತು ಶ್ರೀ ಮಂಜುನಾಥ ಸ್ವಾಮಿ ದೇವಸ್ಥಾನದ ಹುಂಡಿಯಲ್ಲಿ 46,07,765 ಹಣ ಸಂಗ್ರಹ





ಹುಂಡಿಯಲ್ಲಿ ಚಲಾವಣೆಯಲ್ಲಿಲ್ಲದ 500 ರೂ. ಮುಖಬೆಲೆಯ ಹಳೆಯ ನೋಟು

ಹೊನ್ನಾಳಿ, ಮೇ 28 - ತಾಲ್ಲೂಕಿನ ಸುಂಕದಕಟ್ಟೆಯ ಮುಜರಾಯಿ ಇಲಾಖೆ ವ್ಯಾಪ್ತಿಗೆ ಬರುವ ಶ್ರೀ ನರಸಿಂಹಸ್ವಾಮಿ ಮತ್ತು ಶ್ರೀ ಮಂಜುನಾಥ ಸ್ವಾಮಿ ದೇವಸ್ಥಾನದ ಹುಂಡಿ ಎಣಿಕೆಯಲ್ಲಿ ರೂ. 46,07,765 ಹಣ ಸಂಗ್ರಹವಾಗಿದೆ ಎಂದು ತಹಶೀಲ್ದಾರ್ ಪುರಂದರ ಹೆಗ್ಡೆ ತಿಳಿಸಿದರು.

ಸುಂಕದಕಟ್ಟೆಯ ದೇವಸ್ಥಾನದ ಸಮುದಾಯ ಭವನದಲ್ಲಿ ಹುಂಡಿ ಹಣ ಎಣಿಕೆಯನ್ನು ವೀಕ್ಷಿಸಿ ಅವರು ಮಾತನಾಡಿದರು. ಸುಂಕದಕಟ್ಟೆಯ ರಥೋತ್ಸವದ ನಂತರ ಮೊದಲನೇ ಬಾರಿಗೆ ಹಣ ಎಣಿಕೆ ಮಾಡುತ್ತಿದ್ದು, ಭೀಕರ ಬರಗಾಲದಲ್ಲೂ ಹೆಚ್ಚಿನ ಹಣವನ್ನು ಭಕ್ತರು ದೇವರ ಹುಂಡಿಗೆ ಸಮರ್ಪಿಸಿ ತಮ್ಮ ಭಕ್ತಿಯನ್ನು ಮೆರೆದಿದ್ದಾರೆ ಎಂದರು.

ದೇವಸ್ಥಾನ ಸಮಿತಿಯ ಅಧ್ಯಕ್ಷ ಎಸ್.ಕೆ. ನರಸಿಂಹಮೂರ್ತಿ 2023ರ ಅಕ್ಟೋಬರ್ ತಿಂಗಳಲ್ಲಿ ಹಣ ಎಣಿಕೆ ಸಂದರ್ಭದಲ್ಲಿ 49,70,095 ಹಣ ಸಂಗ್ರಹವಾಗಿದ್ದು, ಈ ಹಣವನ್ನು ಕೆನರಾ ಬ್ಯಾಂಕಿನಲ್ಲಿ ಜಮಾ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ರಾಜ್ಯದಲ್ಲಿ ಭೀಕರ ಬರಗಾಲವಿದ್ದರೂ ಭಕ್ತರ ಭಕ್ತಿಗೆ ಬರಗಾಲವಿಲ್ಲ ಎಂಬುದಕ್ಕೆ ಇಷ್ಟು ದೊಡ್ಡ ಮೊತ್ತದ ಹಣ ಸಂಗ್ರಹವಾಗಿರುವುದೇ ಸಾಕ್ಷಿಯೆಂದು ರಾಜಸ್ವ ನಿರೀಕ್ಷಕ ಕುಂದೂರು ರಮೇಶ್ ಹರ್ಷ ವ್ಯಕ್ತಪಡಿಸಿದರು. ಹುಂಡಿಯ ಹಣ ಎಣಿಕೆ ಸಂದರ್ಭದಲ್ಲಿ 500 ರೂ. ಮುಖಬೆಲೆಯ ಚಲಾವಣೆಯಲ್ಲಿಲ್ಲದ ಹಳೆಯ ನೋಟೊಂದು ಕಂಡುಬಂತು.

ಈ ಸಂದರ್ಭದಲ್ಲಿ ದೇವಸ್ಥಾನದ ಪ್ರಧಾನ ಅರ್ಚಕ ರಾಜು ಸ್ವಾಮಿ, ಸಮಿತಿಯ ಸದಸ್ಯರಾದ ಎಸ್.ಕೆ. ಕರಿಯಪ್ಪ, ಎಸ್.ಎಚ್. ಚಂದ್ರಮ್ಮ, ಡಿ.ಟಿ. ಗೌರಮ್ಮ, ಎಸ್.ಎನ್. ಪ್ರಸನ್ನಕುಮಾರ್, ಅಣ್ಣಪ್ಪ ಕೆನರಾ ಬ್ಯಾಂಕ್ ಸಿಬ್ಬಂದಿ ರಾಮಣ್ಣ, ಸತ್ಯನಾರಾಯಣ್, ಮನೋಜ್, ಸಂತೋಷ್, ರಾಜಸ್ವ ನಿರೀಕ್ಷಕರಾದ ಜಯಪ್ರಕಾಶ್, ದಿನೇಶ್ ಬಾಬು, ಗ್ರಾಮ ಆಡಳಿತಾಧಿಕಾರಿಗಳಾದ ದೊಡ್ಡೇಶ್, ಬಸವರಾಜ್, ಸಂತೋಷ್, ಅರ್ಜುನ್, ವೀರೇಶ್, ಚಂದ್ರಕಲಾ, ಅನಿತಾ, ಶಿಲ್ಪ ಮತ್ತು ಗ್ರಾಮ ಸಹಾಯಕರು ಉಪಸ್ಥಿತರಿದ್ದರು.



## ಕೆರೆಯಾಗಳಹಳ್ಳಿಯಲ್ಲಿ ಮನೆ ಹಾನಿ ಶಾಸಕ ಬಸವಂತಪ್ಪ ಪರಿಶೀಲನೆ

ದಾವಣಗೆರೆ, ಮೇ 28 - ಮಾಯಕೊಂಡ ಕ್ಷೇತ್ರದ ವ್ಯಾಪ್ತಿಯಲ್ಲಿ ಇತ್ತೀಚಿಗೆ ಸುರಿದ ಮಳೆ, ಗಾಳಿಯಿಂದ ಮನೆಗಳಿಗೆ ಹಾನಿಯಾದ ಗ್ರಾಮಗಳಿಗೆ ಶಾಸಕ ಕೆ.ಎಸ್. ಬಸವಂತಪ್ಪ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಕ್ಷೇತ್ರದ ವ್ಯಾಪ್ತಿಯ ಕೆರೆಯಾಗಳಹಳ್ಳಿ ಗ್ರಾಮದಲ್ಲಿ ಭಾರೀ ಮಳೆ, ಗಾಳಿಗೆ ಕಂಡೆಪ್ಪರ ಚಂದ್ರಪ್ಪ, ಸುಶೀಲಮ್ಮ ಎಂಬುವರ ಮನೆ ಕುಸಿದು ಬಿದ್ದು ಸಂಪೂರ್ಣವಾಗಿ ಹಾನಿಯಾಗಿದ್ದು, ವಿಷಯ ತಿಳಿದ ಶಾಸಕ ಕೆ.ಎಸ್. ಬಸವಂತಪ್ಪ ಸೋಮವಾರ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಉಪ ತಹಸೀಲ್ದಾರ್ ಅವರಿಗೆ ಕರೆ ಮಾಡಿ ಈ ಬಡ ಕುಟುಂಬಕ್ಕೆ ಆದಷ್ಟು ಬೇಗ ಪರಿಹಾರ ಒದಗಿಸುವಂತೆ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಊರಿನ ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

## ಬಂಜಾರ ಸೇವಾ ಸಂಘದಿಂದ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಮೇ 28- ಬಂಜಾರ ಸೇವಾ ಸಂಘದ ವತಿಯಿಂದ 2023-24ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಮಕ್ಕಳಿಗೆ 'ಪ್ರತಿಭಾ ಪುರಸ್ಕಾರ' ಹಾಗೂ ಈ ಸಾಲಿನಲ್ಲಿ ನಿವೃತ್ತಿಯಾದ ಬಂಜಾರ ನೌಕರರಿಗೆ ಸನ್ಮಾನ ಮಾಡಲಿದ್ದಾರೆ. ಎಸ್ಸೆಸ್ಸೆಲ್ಸಿಯಲ್ಲಿ ಶೇ.85 ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಗಳಿಸಿದ ಜಿಲ್ಲೆಯ ಬಂಜಾರ ಜನಾಂಗದ ವಿದ್ಯಾರ್ಥಿಗಳಿಗೆ 'ಪ್ರತಿಭಾ ಪುರಸ್ಕಾರ' ನೀಡಲಾಗುವುದು. ಅರ್ಹ ವಿದ್ಯಾರ್ಥಿಗಳು ಜೂನ್ 10ರೊಳಗಾಗಿ 9071280369, 9743483659 ಈ ವ್ಯಾಟ್ಸಾಪ್ ಸಂಖ್ಯೆಗೆ ಕಳುಹಿಸಬೇಕು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಸಿದ್ದವೀರಪ್ಪ ಬಡಾವಣೆಯ 10, 11, ಮತ್ತು 12ನೇ ಕ್ರಾಸ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ರೈತರ ಸಂಕಷ್ಟಕ್ಕೆ ಸ್ಪಂದಿಸಿದ ಬೆಸ್ಕಾಂ ಎಇಇ






**ಫಲಶೃತಿ**

ದಾವಣಗೆರೆ, ಮೇ 28- ತಾಲ್ಲೂಕಿನ ನೇರ್ಲಿಗೆ ಗ್ರಾಮದ ದಂಬಳಿ ಮಾದೇಶ್ವರಪ್ಪ ಅವರ ಜಮೀನಿನಲ್ಲಿ ಹಾದು ಹೋದ ಬೀಳುವ ಸ್ಥಿತಿಯಲ್ಲಿದ್ದ 11 ಕೆ.ವಿ ವಿದ್ಯುತ್ ಲೈನ್‌ನ ಕಂಬಗಳನ್ನು ಆನಗೋಡು ಬೆಸ್ಕಾಂ ಅಧಿಕಾರಿಗಳು ಶನಿವಾರ ಸರಿಪಡಿಸಿದ್ದಾರೆ.

ಬೀಳುವ ಸ್ಥಿತಿಯಲ್ಲಿದ್ದ ವಿದ್ಯುತ್ ಕಂಬಗಳು, ರೈತರಿಗೆ ಕೃಷಿ ಚಟುವಟಿಕೆಯಲ್ಲಿ ತೊಡಗಲು ಭಯ ತರಿಸಿದ್ದವು. ಈ ಹಿನ್ನೆಲೆ 'ಬೀಳುತ್ತಿರುವ ಕಂಬದಿಂದ ಕೃಷಿಗೆ ಅಡ್ಡಿ' ಎಂಬ ಶೀರ್ಷಿಕೆಯಡಿ ಮೇ 24ರಂದು 'ಜನತಾವಾಣಿ'ಯಲ್ಲಿ ಸುದ್ದಿ ಪ್ರಕಟಗೊಂಡಿತ್ತು. ಈ ವರದಿಯಿಂದ ಎಚ್ಚೆತ್ತುಕೊಂಡ ಬೆಸ್ಕಾಂ ಅಧಿಕಾರಿಗಳು, ರೈತರ ಕೃಷಿ ಕಾರ್ಯಕ್ಕೆ ವಿಘ್ನವಾಗಿದ್ದ ಲೈಟ್ ಕಂಬಗಳನ್ನು ಸರಿಪಡಿಸಿದ್ದರಿಂದ ರೈತರಲ್ಲಿ ಹಾಗೂ ನೇರ್ಲಿಗೆ ಗ್ರಾಮಸ್ಥರಲ್ಲಿ ಸಂತಸ ತಂದಿದೆ. ತಾಲ್ಲೂಕಿನ ಆನಗೋಡು ಬೆಸ್ಕಾಂ ವ್ಯಾಪ್ತಿಯಲ್ಲಿ ಬರುವ ನೇರ್ಲಿಗೆ ಗ್ರಾಮದಿಂದ ಕೊಡಗನೂರಿಗೆ ಹೋಗುವ ಮಾರ್ಗದ ದೊಡ್ಡರಂಗವ್ವನಹಳ್ಳಿಯ ಜಮೀನುಗಳಿಗೆ ಹೋದ ಎಲ್ಲ ವಿದ್ಯುತ್ ಕಂಬಗಳನ್ನು ಸರಿಪಡಿಸಿದ್ದಾರೆ ಎಂದು ರೈತರು 'ಜನತಾವಾಣಿ'ಗೆ ತಿಳಿಸಿದ್ದಾರೆ.

# ಪರಿಷತ್ : ವ್ಯಕ್ತಿಗಳ ಸಾಧನೆಯ ಆಧಾರಿತ ಚುನಾವಣೆ



**ಹೊನ್ನಾಳಿಯಲ್ಲಿ ಮಾಜಿ ಶಾಸಕ ಉಡುಪಿಯ ಕೆ. ರಘುಪತಿ ಭಟ್**

ಹೊನ್ನಾಳಿ, ಮೇ 28 - ನೈರುತ್ಯ ಪದವೀಧರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಗೆ ಸ್ಪರ್ಧಿಸಿರುವ ನನಗೆ ಸಾಧನೆಯ ಆಧಾರದ ಮೇಲೆ ಮತ ನೀಡಿ ಬೆಂಬಲಿಸುವಂತೆ ಮಾಜಿ ಶಾಸಕ ಉಡುಪಿಯ ಕೆ. ರಘುಪತಿ ಭಟ್ ಹೇಳಿದರು.

ಅವರು, ಹೊನ್ನಾಳಿ ವಾಲ್ಮೀಕಿ ಸಮುದಾಯ ಭವನದಲ್ಲಿ ಇಂದು ನಡೆದ ನೈರುತ್ಯ ಪದವೀಧರ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಹಾಗೂ ಬಿಜೆಪಿ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿರುವುದಾಗಿ ಹೇಳಿದರು.

ಉಡುಪಿಯಲ್ಲಿ ಮೂರು ಬಾರಿ ಶಾಸಕನಾಗಿ, ಜಿಲ್ಲಾ ಬಿಜೆಪಿ ಅಧ್ಯಕ್ಷರಾಗಿ ಪಕ್ಷವನ್ನು ತಳ ಮಟ್ಟದಿಂದ ಕಟ್ಟಿ ಬೆಳೆಸಿದವನಾಗಿದ್ದು, ಕಳೆದ ಬಾರಿ ಕ್ಷೇತ್ರದ ಕಾರ್ಯಕರ್ತನಿಗೆ ಉಡುಪಿ ವಿಧಾನಸಭೆ ಟಿಕೆಟ್ ನೀಡಿದ್ದರಿಂದ ಅವರ ಗೆಲುವಿಗೆ ಶ್ರಮಿಸಿದ್ದನ್ನು ಸಭೆಯಲ್ಲಿ ಸ್ಮರಿಸಿದರು.

ವಿಧಾನ ಪರಿಷತ್ ಚುನಾವಣೆಯಲ್ಲಿ ಪಕ್ಷ ಬೇರೆಯವರಿಗೆ ಚುನಾವಣೆಯಲ್ಲಿ ಅವಕಾಶ ಕಲ್ಪಿಸಿದೆ. ಪಕ್ಷೇತರ ಅಭ್ಯರ್ಥಿಯಾದ ನನ್ನ ಕ್ರಮ ಸಂಖ್ಯೆ 7ಕ್ಕೆ ಮತ ನೀಡಿ ಬೆಂಬಸಲಿಸುವಂತೆ ಮನವಿ ನೀಡಿದರು.

ಸವಳಂಗ, ನ್ಯಾಮತಿ ಮೂಲಕ ಇಂದು ಪ್ರವಾಸ ಆರಂಭಿಸಿರುವ ತಾವು ಹೊನ್ನಾಳಿ ಚನ್ನಗಿರಿಯಲ್ಲೂ ಉತ್ತಮ ಬೆಂಬಲ ವ್ಯಕ್ತವಾಗುತ್ತಿದೆ. ತಮ್ಮ ಕ್ಷೇತ್ರದಲ್ಲಿ ಸಾಧಕ ಶಿಕ್ಷಕ ಪ್ರಶಸ್ತಿ, ಸಾಧಕ ಶಾಲೆ ಪ್ರಶಸ್ತಿ ನೀಡಿ ಶಿಕ್ಷಣ ಪ್ರಗತಿಗೆ ಮುಂದಾಗಿದ್ದು, ಹೀಗೆ ಹಲವಾರು ಕ್ಷೇತ್ರಗಳಲ್ಲಿ ಸೇವೆಸಲ್ಲಿಸಿರುವ ನನ್ನನ್ನು ಬೆಂಬಲಿಸಬೇಕೆಂದರು.

ಸಮಾರಂಭದಲ್ಲಿ ಹೊನ್ನಾಳಿ ನಾರಾಯಣ್, ಬಿಂಬ ಮಂಜುನಾಥ, ಮದನಭಾವಿ ಶಾಂತ ವೀರಪ್ಪ, ಲಾಯರ್‌ಮಂಜುನಾಥ, ಅಶ್ವಿನಿ, ವಾಸಪ್ಪ, ಗುರುದತ್, ಕತ್ತಿಗೆ ನಾಗರಾಜ್, ಯೊಗೇಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಡಿಪ್ಲೋಮಾ ರಂಗಶಿಕ್ಷಣಕ್ಕೆ ಅರ್ಜಿ

ಸಾಣೇಹಳ್ಳಿ, ಮೇ 28- ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ಇಲ್ಲಿನ ಶ್ರೀ ಶಿವಕುಮಾರ ರಂಗಪ್ರಯೋಗ ಶಾಲೆಯಲ್ಲಿ 2024-25ನೇ ಸಾಲಿನ ರಂಗಶಿಕ್ಷಣಕ್ಕೆ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಸುಸಜ್ಜಿತ ರಂಗ ಶಾಲೆಗೆ ಸೇರ ಬಯಸುವ ಆಸಕ್ತರು ಕನಿಷ್ಠ ಎಸ್‌ಎಸ್‌ಎಲ್‌ಸಿ ವಿದ್ಯಾರ್ಹತೆ ಹಾಗೂ ಪದವಿ ಹೊಂದಿರಬೇಕು. ರಂಗಶಾಲೆಯ ವೆಬ್‌ಸೈಟ್ ಆದ www.theatreschoolsanehlli.org ಅಲ್ಲಿ ಅರ್ಜಿ ಡೌನ್‌ಲೋಡ್ ಮಾಡಿಕೊಂಡು ಜೂನ್ 25ರ ಒಳಗಾಗಿ 'ಪ್ರಾಚಾರ್ಯರು, ಶ್ರೀ ಶಿವಕುಮಾರ ರಂಗಪ್ರಯೋಗ ಶಾಲೆ, ಸಾಣೇಹಳ್ಳಿ-577-515 ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ. ಈ ವಿಳಾಸದ ರಂಗಶಾಲೆಗೆ ಅರ್ಜಿ ಸಲ್ಲಿಸಲು ಪ್ರಕಟಣೆ ತಿಳಿಸಿದೆ. ಮಾಹಿತಿಗಾಗಿ 9448398144 ಅಥವಾ 8861043553 ಸಂಪರ್ಕಿಸಿ.

## ಶಿಸ್ತು, ಶ್ರದ್ಧೆಯಿಂದ ವಿದ್ಯೆ ಒಲಿಯಲಿದೆ




**ರಾಣೇಬೆನ್ನೂರಿನ ಕಾರ್ಯಕ್ರಮದಲ್ಲಿ ಆವರಗೊಳ್ಳದ ಶ್ರೀಗಳು**

ರಾಣೇಬೆನ್ನೂರು, ಮೇ 28 - ಶಿಸ್ತು, ಶ್ರದ್ಧೆ ಹಾಗೂ ಗುರುಗಳಲ್ಲಿ ನಂಬಿಕೆ, ನಿಷ್ಠೆ ಇದ್ದರೆ ವಿದ್ಯೆ ಒಲಿಯಲಿದೆ. ವಿದ್ಯಾರ್ಥಿಗಳು ಈ ಎಲ್ಲವುಗಳನ್ನು ಮೈಗೂಡಿಸಿಕೊಂಡು ತಮ್ಮ ಮುಂದಿನ ಬದುಕನ್ನೂ ಬಂಗಾರವಾಗಿಸಿಕೊಳ್ಳಬೇಕು ಎಂದು ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಮಹಾಸ್ವಾಮೀಜಿ ನುಡಿದರು.

ಶ್ರೀಗಳು ಇಲ್ಲಿನ ಪಟ್ಟಣಶೆಟ್ಟಿ ಓಣಿಯ ಆವರಗೊಳ್ಳ ಗುರು ಕಾರುಣ್ಯ ಮಂದಿರದಲ್ಲಿ ದಾವಣಗೆರೆ ಮಿರಾಕಲ್ ಸಂಸ್ಥೆ ಎರಡು ತಿಂಗಳು ಇಲ್ಲಿ ನಡೆಸಿದ ಬೇಸಿಗೆ ಶಿಬಿರಾರ್ಥಿಗಳ ಬೀಳ್ಕೊಡುಗೆ ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದರು.

ಸಂಪನ್ಮೂಲ ವ್ಯಕ್ತಿಗಳಾದ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಜಿ.ಬಿ. ಮಾಸಣಗಿ, ಇಸಿಓ ಡಿ.ಬಿ. ಸುನೀತಾ, ಇಂದಿರಾಗಾಂಧಿ ವಸತಿ ಶಾಲೆಯ ಮಂಜುನಾಥ ಬುಕ್ಕಶೆಟ್ಟರ, ವಿಜ್ಞಾನ ಶಿಕ್ಷಕರ ಸಂಘದ ಅಧ್ಯಕ್ಷ ಪ್ರಭು ಎರೇಶಿಮಿ ಅವರು ಎಸ್‌ಎಸ್‌ಎಲ್ ಸಿ ಪೂರ್ವಭಾವಿ ಬೋಧನೆಯ ತರಬೇತಿ ನೀಡಿದರು.

ಪ್ರಾಚಾರ್ಯ ರುದ್ರಗೌಡ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಸವಿತಾ ಲಮಾಣಿ, ವೀಣಾ ಲಮಾಣಿ, ಮಾಲತೇಶ ಗರಡಿಮನಿ, ಮಲ್ಲಿಕಾರ್ಜುನ ಹೊರಕೇರಿ, ಪ್ರಕಾಶ ಶಿವಪುತ್ರಪ್ಪ, ಬನಶಂಕರಿ ಶಿಕ್ಷಣ ಸಂಸ್ಥೆಯ ವೀರೇಶ ಬಣಕಾರ, ಪ್ರಕೃತಿ ಕಲ್ಲಪ್ಪಗೌಡ್ರ, ಶಿವಾನಂದ ಬುಳ್ಳಮ್ಮನವರ ಮತ್ತಿತರರಿದ್ದರು.


## ದ್ವಿತೀಯ ವರ್ಷದ ಪುಣ್ಯಸ್ಮರಣೆ



**ದಿ|| ಶ್ರೀಮತಿ ಕೆ.ಹೆಚ್. ಶಾರದಮ್ಮನವರು**

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು.
ಸದಾ ನಿಮ್ಮ ಚಿರ ನೆನಪಿನಲ್ಲಿರುವ

ಪತಿ : ಶ್ರೀ ಜಿ. ವಿರೂಪಾಕ್ಷಪ್ಪನವರು, ಪ್ರಾಂಶುಪಾಲರು, ಸೈನ್ಸ್ ಅಕಾಡೆಮಿ ಪಿಯು ಕಾಲೇಜು, ದಾವಣಗೆರೆ.
ಮಕ್ಕಳು : ✦ ಡಾ|| ವಿ. ದೀಪ್ತಿ ✦ ಡಾ|| ವಿ. ಚೈತನ್ಯ
ಅಳಿಯಂದಿರು : ✦ ಡಾ|| ಬಿ.ಎಸ್. ರಾಜಶೇಖರ್
✦ ಡಾ|| ಬಿ. ನಿಕೇತನ್
ಮತ್ತು ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

## ಮೂರನೇ ಪುಣ್ಯಸ್ಮರಣೆ



**ಆಲದಹಳ್ಳಿ ಜಗದೀಶ್**

ನಿಧನ: 29.05.2021

ನೀವು ನಮ್ಮನ್ನು ಅಗಲಿ ಇಂದಿಗೆ ಮೂರು ವರ್ಷಗಳಾದವು.
ಸದಾ ನಿಮ್ಮ ಮಾರ್ಗದರ್ಶನ ನಮ್ಮ ಹೃದಯಗಳಲ್ಲಿ ಹಚ್ಚ ಹಸಿರಾಗಿದೆ,
ಅನುಕ್ಷಣವು ನಿಮ್ಮ ಸ್ಮರಣೆಯೇ ನಮಗೆ ದಿವ್ಯ ಚೇತನ.
ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುವೆವು.

ಪತ್ನಿ : ಶ್ರೀಮತಿ ಸವಿತಾ ಜಗದೀಶ್
ಮಕ್ಕಳು : ಮಂಜು ಭಾರ್ಗವಿ, ಶ್ರೇಯಾ, ಅಳಿಯ : ಕಾರ್ತಿಕ್
♦ ಶ್ರೀಮತಿ ಆಲದಹಳ್ಳಿ ನಿರ್ಮಲಾ ಕೊಟ್ರೇಶಪ್ಪ ಮತ್ತು ಮಕ್ಕಳು
♦ ಆಲದಹಳ್ಳಿ ಸಿದ್ದರಾಮೇಶ್ವರ ಮತ್ತು ಮಕ್ಕಳು
♦ ಆಲದಹಳ್ಳಿ ಶಿವಕುಮಾರ್ ಮತ್ತು ಮಕ್ಕಳು
♦ ಆಲದಹಳ್ಳಿ ಸಹೋದರರು,ಸಹೋದರಿಯರು ಮತ್ತು ಬಂಧು-ಮಿತ್ರರು, ಬಸಾಪುರ.


# ಚನ್ನಗಿರಿ ಪ್ರಕರಣ : ಪೊಲೀಸರ ಅಮಾನತ್ತು ಆದೇಶ ವಾಪಸ್ ಪಡೆಯಲು ಒತ್ತಾಯ

ದಾವಣಗೆರೆ, ಮೇ 28- ಚನ್ನಗಿರಿಯಲ್ಲಿ ನಡೆದ ಆದಿಲ್ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಅಲ್ಲಿನ ಡಿವೈಎಸ್ಪಿ, ಸಿಪಿಐ ಹಾಗೂ ಪಿಎಸ್‌ಐ ಅವರನ್ನು ಅಮಾನತ್ತು ಮಾಡಿರುವ ಆದೇಶವನ್ನು ಕೂಡಲೇ ವಾಪಸ್ ಪಡೆಯಬೇಕೆಂದು ಪೊಲೀಸ್ ಕುಟುಂಬಗಳ ಕಲ್ಯಾಣ ಸಂಘ- ಕರ್ನಾಟಕದ ಅಧ್ಯಕ್ಷ ಹೊನ್ನಾಳಿಯ ಗುರುಪಾದಯ್ಯ ಮಠದ್ ಅವರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಟ್ಕಾ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಠಾಣೆಗೆ ನುಗ್ಗಿ ಧಾಂದಲೆ ನಡೆಸಿ, ಹಲ್ಲೆ ನಡೆಸಿ, ಪೊಲೀಸ್ ವಾಹನಗಳನ್ನು ಜಖಂಗೊಳಿಸಿದವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಇದರಂತೆ ಬೆಳ್ತಂಗಡಿ ಪೊಲೀಸ್ ಠಾಣೆಗೆ ನುಗ್ಗಿ ದಾಂಧಲೆ ನಡೆಸಿ, ಪೊಲೀಸರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಕರ್ತವ್ಯಕ್ಕೆ ಅಡ್ಡಿಪಡಿಸಿರುವ ಅಲ್ಲಿನ ಶಾಸಕ ಹರೀಶ್ ಪೂಂಜಾ ವಿರುದ್ಧ ಶೀಘ್ರವೇ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು.

ಕಾನೂನು ರಕ್ಷಿಸುವ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ಬೇಸರಗೊಂಡಿದ್ದಾರೆ. ಕಾನೂನು ಪರಿಪಾಲನೆ ಮಾಡುತ್ತಿರುವ ಪೊಲೀಸರಿಗೆ ಆತ್ಮಸ್ಥೈರ್ಯ ತುಂಬುವುದು, ಸೂಕ್ತ ಭದ್ರತೆ ನೀಡುವುದು ಸರ್ಕಾರದ ಮತ್ತು ಆ ಭಾಗದ ಜನಪ್ರತಿನಿಧಿಗಳ, ಪ್ರಜ್ಞಾವಂತ ನಾಗರಿಕರ ಕರ್ತವ್ಯವಾಗಿದೆ ಎಂದು ಹೇಳಿದರು.

ಇಂತಹ ಘಟನೆಗಳು ನಡೆದಾಗ ಸರ್ಕಾರ ಸಂಬಂಧಪಟ್ಟ ಪೊಲೀಸ್ ಠಾಣೆಯ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವುದು, ಅಮಾನತ್ತು ಮಾಡುವುದು ಸರ್ವೇ ಸಾಮಾನ್ಯವಾಗಿದೆ. ಈ ರೀತಿ ಕ್ರಮಗಳು ಪೊಲೀಸರ ಕರ್ತವ್ಯ ನಿರ್ವಹಣೆಯ ಮೇಲೆ ಋಣಾತ್ಮಕ ಪರಿಣಾಮ ಬೀರುತ್ತವೆ. ಅವರ ಆತ್ಮಸ್ಥೈರ್ಯ ಕುಗ್ಗಿದಂತಾಗಿ ಸಾಮಾಜಿಕ ವ್ಯವಸ್ಥೆಯ ಮೇಲೆ ದುಷ್ಪರಿಣಾಮ ಬೀರುತ್ತದೆ. ಅಲ್ಲದೇ ಸಮಾಜ ಘಾತುಕ ಶಕ್ತಿಗಳಿಗೆ, ಪುಂಡ, ಪೋಕರಿಗಳಿಗೆ ಮತ್ತು ಕಾನೂನು ಬಾಹಿರ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ ಎಂದರು.

ಗೃಹ ಸಚಿವರು ಚನ್ನಗಿರಿಯಲ್ಲಿ ನಡೆದ ಆದಿಲ್ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಗಳ ಅಮಾನತ್ತು ವಾಪಾಸ್ ಪಡೆಯಬೇಕು. ಪೊಲೀಸ್ ಠಾಣೆ ಮೇಲೆ ದಾಳಿ ಮಾಡಿ, ಪೊಲೀಸರ ವಾಹನಗಳನ್ನು ಜಖಂಗೊಳಿಸಿದವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು. ಕಾನೂನು ಉಲ್ಲಂಘನೆ ಮಾಡಿ, ದುಂಡಾವರ್ತನೆ ತೋರುವ ಜನಪ್ರತಿನಿಧಿಗಳು ಮತ್ತು ಕಿಡಿಗೇಡಿಗಳು, ಸಮಾಜ ಘಾತುಕ ಶಕ್ತಿಗಳಿಗೆ ಕಠಿಣ ಸಂದೇಶಗಳನ್ನು ನೀಡಬೇಕೆಂದು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ವಿನಯ್ ಎಂ. ವಗ್ಗರ್, ಆರುಂಡಿ ನಾಗರಾಜ್, ಹನುಮಂತಪ್ಪ ಸೊರಟೂರು, ಧನಂಜಯ ಉಪಸ್ಥಿತರಿದ್ದರು.

# ಅಕ್ರಮ ಹಣ ವರ್ಗಾವಣೆ : ಸಿಐಡಿ ತನಿಖೆಗೆ ಆದೇಶ

## ರಾಜೀನಾಮೆ ನೀಡಲು ಸಚಿವ ನಾಗೇಂದ್ರ ನಕಾರ



ಬೆಂಗಳೂರು, ಮೇ 28 – ವಾಲ್ಮೀಕಿ ನಿಗಮದಲ್ಲಿ ಅಕ್ರಮವಾಗಿ ಹಣ ವರ್ಗಾವಣೆಯಾಗಿರುವ ಬಗ್ಗೆ ಸಿ.ಐ.ಡಿ. ತನಿಖೆಗೆ ಆದೇಶಿಸಲಾಗಿದೆ. ಈ ವಿಷಯದಲ್ಲಿ ನನ್ನ ಪಾತ್ರ ಏನೂ ಇಲ್ಲ. ಹೀಗಾಗಿ ರಾಜೀನಾಮೆ ನೀಡುವುದಿಲ್ಲ ಎಂದು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಬಿ. ನಾಗೇಂದ್ರ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಿಂದ ಉಪ ಖಾತೆಗೆ ಸುಮಾರು 87 ಕೋಟಿ ವರ್ಗಾವಣೆ ಮಾಡಲಾಗಿತ್ತು. ಈಗಾಗಲೇ 23 ಕೋಟಿ ಹಣ ವಾಪಸ್ ಪಡೆದುಕೊಳ್ಳಲಾಗಿದೆ. ಉಳಿದ ಹಣ ವಾಪಸ್ ಪಡೆಯಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದರು.

ನಿಗಮದ ಅಧೀಕ್ಷಕ ಚಂದ್ರಶೇಖರ್ ಅವರು ಆತ್ಮಹತ್ಯೆ ಮಾಡಿಕೊಂಡಿದ್ದರು. ನಿಗಮದಲ್ಲಿ 85 ಕೋಟಿ ರೂಪಾಯಿ ಅವ್ಯವಹಾರ ನಡೆದಿದೆ ಎಂದು ನಿಗಮದ ಅಧಿಕಾರಿಗಳ ವಿರುದ್ಧ 5 ಪುಟಗಳ ಮರಣ ಪತ್ರ ಬರೆದಿಟ್ಟಿದ್ದರು.

ಯೂನಿಯನ್ ಬ್ಯಾಂಕ್ ವ್ಯವಸ್ಥಾಪಕರಾದ ಸುಚಿಸ್ಮಿತಾ ಅವರು ಅವ್ಯವಹಾರದಲ್ಲಿ ಭಾಗಿಯಾಗಿದ್ದಾರೆ. ನಿಗಮದ 183.53 ಕೋಟಿ ರೂ ಅನುದಾನವನ್ನು ಬೇರೆ ಬೇರೆ ಖಾತೆಗೆ ವರ್ಗಾವಣೆ ಮಾಡಿದ್ದಾರೆ. ನಿಗಮದ ವ್ಯವಸ್ಥಾಪಕ ನಿರ್ದೇಶಕರು ಅನುದಾನವನ್ನು ಒತ್ತಾಯಪೂರ್ವಕವಾಗಿ ವರ್ಗಾಯಿಸಿದ್ದಾರೆ. ನಿಗಮದಲ್ಲಿ 85 ಕೋಟಿ ರೂಪಾಯಿ ಅವ್ಯವಹಾರವಾಗಿದೆ ಎಂದು ಮರಣ ಪತ್ರದಲ್ಲಿ ತಿಳಿಸಿದ್ದರು.

ಈ ಬಗ್ಗೆ ಪ್ರತಿಕ್ರಿಯಿಸಿರುವ ಸಚಿವ ನಾಗೇಂದ್ರ, ಪ್ರಕರಣವನ್ನು ಸಿಐಡಿಗೆ ವಹಿಸಲಾಗಿದೆ. ಹಣ ವರ್ಗಾವಣೆ ಮಾಡಿದ್ದು ನನ್ನ ಗಮನಕ್ಕೂ ಬಂದಿಲ್ಲ ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ಜೆ.ಜಿ. ಪದ್ಮನಾಭ ಕೂಡ ದೂರು ನೀಡಿದ್ದಾರೆ. ಬ್ಯಾಂಕ್ ಅಧಿಕಾರಿಗಳು ಕೂಡ ಹಣ ವರ್ಗಾವಣೆ ನಮ್ಮ ಗಮನಕ್ಕೆ ತಂದಿಲ್ಲ ಎಂದು ಹೇಳಿದ್ದಾರೆ ಎಂದು ವಿವರಿಸಿದರು.

ಸುಮಾರು 87 ಕೋಟಿ ರೂ. ವರ್ಗಾವಣೆ ಮಾಡಲಾಗಿತ್ತು. ಈಗಾಗಲೇ 23 ಕೋಟಿ ರೂ. ಹಣ ವಾಪಸ್ ಪಡೆದುಕೊಳ್ಳಲಾಗಿದೆ. ಯೂನಿಯನ್ ಬ್ಯಾಂಕ್ ಹಿರಿಯ ಅಧಿಕಾರಿಗಳ ಜೊತೆಗೆ ಮಾತನಾಡಿದ್ದೇವೆ. ಉಳಿದ 50 ಕೋಟಿ ರೂ. ಕೂಡ ಇಂದು ಸಂಜೆಯ ಒಳಗೆ ವಾಪಸ್ ಪಡೆದುಕೊಳ್ಳುತ್ತೇವೆ ಎಂದರು.

ವ್ಯವಸ್ಥಾಪಕರ ಸಹಿಯನ್ನು ಪರೀಕ್ಷೆಗೆ ಕಳಿಸಿದ್ದೇವೆ. ಅದು ಅವರ ಸಹಿಯೇ ಅಂತ ಗೊತ್ತಾದರೆ ಅವರನ್ನೂ ಕೂಡ ವಜಾ ಮಾಡುತ್ತೇವೆ. ಇದರಲ್ಲಿ ಯಾರ ಕೈವಾಡ ಇದೆ ಎಂಬುದನ್ನು ಪತ್ತೆ ಹಚ್ಚುತ್ತೇವೆ. ಇಂದು ಸಂಜೆಯೊಳಗೆ ಬ್ಯಾಂಕ್ ಅಧಿಕಾರಿಗಳಿಗೆ ಗಡುವು ನೀಡಿದ್ದೇವೆ. ಅಷ್ಟೂ ಹಣ ನಿಗಮದ ಖಾತೆಗೆ ವಾಪಸ್ ಬರಬೇಕು ಅಂತ ಗಡುವು ನೀಡಿದ್ದೇವೆ. ಗಡುವು ಮೀರಿದರೆ ಬ್ಯಾಂಕ್ ಹಿರಿಯ ಅಧಿಕಾರಿಗಳ ಮೇಲೂ ಕೂಡ ಎಫ್‌ಐಆರ್ ದಾಖಲು ಮಾಡುತ್ತೇವೆ ಎಂದು ಹೇಳಿದರು.

ಹಣ ವರ್ಗಾವಣೆಗೆ ಸಚಿವ ನಾಗೇಂದ್ರ, ಮೌಖಿಕ ಆದೇಶ ನೀಡಿದ್ದರು ಎಂದು ಮರಣ ಪತ್ರದಲ್ಲಿ ಬರೆದಿರುವುದನ್ನು ಸಚಿವರು ತಳ್ಳಿ ಹಾಕಿದ್ದು, ಚಂದ್ರಶೇಖರ್ ಯಾರು ಎಂಬುದೇ ನನಗೆ ಗೊತ್ತಿಲ್ಲ ಎಂದಿದ್ದಾರೆ.

ಈ ನಡುವೆ, ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿರುವ ಬಿಜೆಪಿ, ಕೂಡಲೇ ಸಚಿವ ನಾಗೇಂದ್ರ ಅವರನ್ನು ವಜಾ ಮಾಡಬೇಕು ಎಂದು ಆಗ್ರಹಿಸಿದೆ. ಪ್ರತಿಪಕ್ಷ ನಾಯಕ ಆರ್. ಅಶೋಕ್, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಸಚಿವ ನಾಗೇಂದ್ರ ವಜಾಗೊಳಿಸುವಂತೆ ಒತ್ತಾಯಿಸಿದ್ದಾರೆ.

# ಹಾವೇರಿ ಸಮಾನ ಮನಸ್ಕರ ನಡೆ ಹಾಸನದತ್ತ ಆರೋಪಿ ಬಂಧಿಸಿ, ಶಿಕ್ಷೆಗೊಳಪಡಿಸಬೇಕು



## ಸಂಸದ ಪ್ರಜ್ವಲ್ ರೇವಣ್ಣ ಪ್ರಕರಣದ ವಿರುದ್ಧ ಕಿಡಿ ಕಾರಿದ ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ

ಹಾವೇರಿ,ಮೇ 28- ಸಂಸದ ಪ್ರಜ್ವಲ್ ರೇವಣ್ಣ, ತನ್ನ ರಾಜಕೀಯ ಅಧಿಕಾರ ದುರ್ಬಳಕೆ, ಕುಟುಂಬದ ದರ್ಪ, ಹಣ ಮತ್ತು ಜಾತಿ ಪ್ರಾಬಲ್ಯದ ಕಾರಣದಿಂದ ನೂರಾರು ಮಹಿಳೆಯರನ್ನು ದುರುಪಯೋಗಪಡಿಸಿಕೊಂಡಿರುವ ಹಗರಣ ಬೆಳಕಿಗೆ ಬಂದು ತಿಂಗಳಾದರೂ ಆರೋಪಿಯ ಬಂಧನವಾಗಿಲ್ಲ ಇದು ಖಂಡನೀಯ, ಕೂಡಲೇ ಬಂಧಿಸುವಂತೆ ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ ಆಗ್ರಹಿಸಿದರು.

ಸಮಾನ ಮನಸ್ಕ ಜನಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಹಾಸನದಲ್ಲಿ ನಾಡಿದ್ದು ದಿನಾಂಕ 30 ರಂದು ನಡೆಯುವ ರಾಜ್ಯಮಟ್ಟದ ಹೋರಾಟದ ಪೋಸ್ಟರ್‌ಗಳನ್ನು ನಗರದ ಪತ್ರಿಕಾ ಭವನದಲ್ಲಿ ಬಿಡುಗಡೆ ಮಾಡಿ ಪೂಜಾರ ಮಾತನಾಡಿದರು.

ವಿಕೃತ ಲೈಂಗಿಕ ಹಗರಣದ ವಿಡಿಯೋಗಳು ಮತ್ತು ಚಿತ್ರಗಳನ್ನು ಸಾರ್ವಜನಿಕರಿಗೆ ಪೆನ್ ಡ್ರೈವ್, ಸಾಮಾಜಿಕ ಮಾಧ್ಯಮ ಮತ್ತಿತರೆ ಸಾಧನಗಳ ಮೂಲಕ ಹಂಚಿದ ಮತ್ತು ಅವುಗಳನ್ನು ಸಂಗ್ರಹಿಸಿಕೊಂಡು ಮಹಿಳೆಯರ ಖಾಸಗಿತನ, ಕುಟುಂಬ ಮತ್ತು ಬದುಕಿನ ಮೇಲೆ ದಾಳಿ ಮಾಡಿದ ಪ್ರತಿಯೊಬ್ಬರನ್ನೂ ಬಂಧಿಸಿ, ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಬಸವರಾಜ ಪೂಜಾರ ಒತ್ತಾಯಿಸಿದರು.

ಈ ಹಗರಣದಲ್ಲಿ ಲೈಂಗಿಕ ದುರ್ಬಳಕೆಗೆ ಒಳಗಾಗಿರುವ ಹಾಗೂ ಪ್ರಕರಣ ದಾಖಲಿಸಲು ಮುಂದಾಗುವ ಮಹಿಳೆಯರ ಗೋಪ್ಯತೆ ಕಾಪಾಡಲು ಅವರಿಗೆ ಬೇಕಾದ ಮನೋವೈದ್ಯಕೀಯ ಆಪ್ತ ಸಮಾಲೋಚನೆ, ಕಾನೂನು ಸಲಹೆ, ಸೂಕ್ತ ರಕ್ಷಣೆ, ಪುನರ್ವಸತಿ ಮತ್ತು ಪರಿಹಾರವನ್ನು ತುರ್ತಾಗಿ ಒದಗಿಸುವಂತೆ ಲಿಂಗತ್ವ ಅಲ್ಪಸಂಖ್ಯಾತ ಸಂಘಟನೆಯ ರಾಜ್ಯ ಕಾರ್ಯದರ್ಶಿ ಕೆ.ಸಿ. ಅಕ್ಷತಾ ಒತ್ತಾಯಿಸಿದರು.

ವಿಶೇಷ ತನಿಖಾ ತಂಡವು ಈ ಪ್ರಕರಣದಲ್ಲಿ ಯಾವುದೇ ರಾಜಕೀಯ ಪಕ್ಷಗಳ ಪ್ರಭಾವಕ್ಕೆ ಒಳಗಾಗದೇ ನಿಷ್ಪಕ್ಷಪಾತವಾಗಿ ತನಿಖೆ ನಡೆಸುವಂತೆ ಹಾಗೂ ಅವರು ನಿರ್ಭೀತಿಯಿಂದ ಕಾರ್ಯ ನಿರ್ವಹಿಸಲು ಅವಶ್ಯ ಅನುಕೂಲ ಹಾಗೂ ಅಧಿಕಾರವನ್ನು ರಾಜ್ಯ ಸರ್ಕಾರ ಕೊಡಬೇಕು ಎಂದು ಒತ್ತಾಯಿಸಲಾಯಿತು.

ಸಭೆಯಲ್ಲಿ ಎಐಟಿಯುಸಿ ಜಿಲ್ಲಾ ಅಧ್ಯಕ್ಷ ಹೊನ್ನಪ್ಪ ಮರೆಮ್ಮನವರ, ಸುರೇಶ ಚಲವಾದಿ, ಶಿವಬಸಪ್ಪ ಗೋವಿ, ಬಸವರಾಜ ಹಾದಿಮನಿ, ಬಸವರಾಜ ಶೆಟ್ಟಿ, ವಿಭೂತಿ ನಾಯಕ, ಅಶೋಕ ಮರೆಣ್ಣನವರ, ಎನ್.ಆರ್. ಅಬಲೂರ, ಸಿದ್ದು ಮರೆಮ್ಮನವರ, ಲಕ್ಷ್ಮಣ ಕೆಂಗಳಪ್ಪನವರ ಮತ್ತಿತರರಿದ್ದರು.

# ನಿಯಮಾವಳಿ ಅನುಷ್ಠಾನಕ್ಕೆ ವಕ್ಫ್‌ಗೆ ಸೂಚನೆ

ದಾವಣಗೆರೆ, ಮೇ 28- ರಾಜ್ಯ ವಕ್ಫ್ ಮಂಡಳಿಯಲ್ಲಿ ನೋಂದಣಿಯಾದ ಜಿಲ್ಲೆಯ ಎಲ್ಲಾ ವಕ್ಫ್ ಸಂಸ್ಥೆಗಳು, ರಾಜ್ಯ ಉಚ್ಚ ನ್ಯಾಯಾಲಯ ಹೊರಡಿಸಿದ ಆದೇಶದಂತೆ ವಕ್ಫ್ ಮಂಡಳಿಯ ಮಾದರಿ ನಿಯಮಾವಳಿಯ ನಮೂನೆ-42 ಬೈಲಾ ಅಂಗೀಕರಿಸಿವುದು ಕಡ್ಡಾಯ ಎಂದು ಜಿಲ್ಲಾ ವಕ್ಫ್ ಅಧಿಕಾರಿಗಳು ತಿಳಿಸಿದ್ದಾರೆ. ಈತನಕ ಮಾದರಿ ನಿಯಮಾವಳಿ ಪಾಲಿಸದ ವಕ್ಫ್ ಸಂಸ್ಥೆಗಳು ನಿಯಮಾವಳಿಯ ನಮೂನೆ-42 ರ ಸಂಬಂಧಪಟ್ಟ ದಾಖಲೆಯೊಂದಿಗೆ ಜಿಲ್ಲಾ ವಕ್ಫ್ ಕಛೇರಿಯ ಮೂಲಕ ಪ್ರಸ್ತಾವನೆ ಸಲ್ಲಿಸಬೇಕೆಂದು ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪುತ್ರಿ ರಕ್ಷಣೆಗಾಗಿ ಕೆ.ಸಿ.ಆರ್. ಅಧಿಕಾರ ದುರ್ಬಳಕೆ

## ಇ.ಡಿ.ಯಿಂದ ಕವಿತಾ ರಕ್ಷಿಸಲು ಬಿಜೆಪಿ ನಾಯಕ ಸಂತೋಷ್ ಬಂಧನದ ಹುನ್ನಾರ

## ಮಾಜಿ ಪೊಲೀಸ್ ಅಧಿಕಾರಿ ತಪ್ಪೊಪ್ಪಿಗೆ ಹೇಳಿಕೆ

ಹೈದರಾಬಾದ್, ಮೇ 28 – ಬಿಜೆಪಿ ನಾಯಕರು ಬಿ.ಆರ್.ಎಸ್. ಶಾಸಕರನ್ನು ಸೆಳೆಯಲು ಯತ್ನಿಸುತ್ತಿದ್ದಾರೆ ಎಂಬ ಪ್ರಕರಣವನ್ನು ತೆಲಂಗಾಣದ ಮಾಜಿ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ (ಕೆ.ಸಿ.ಆರ್.) ಅವರು ತಮ್ಮ ಪುತ್ರಿ ಕೆ. ಕವಿತಾ ರಕ್ಷಿಸಲು ದುರ್ಬಳಕೆ ಮಾಡಿಕೊಂಡಿದ್ದರು ಎಂದು ಮಾಜಿ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಫೋನ್ ಕದ್ದಾಲಿಕೆ ಪ್ರಕರಣದಲ್ಲಿ ಬಂಧಿತ ಮಾಜಿ ಡಿ.ಸಿ.ಪಿ. ಪಿ. ರಾಧಾ ಕಿಶನ್ ರಾವ್ ಅವರು ನ್ಯಾಯಾಲಯದಲ್ಲಿ ತಪ್ಪೊಪ್ಪಿಗೆ ಹೇಳಿಕೆ ನೀಡಿದ್ದು, ಅದರಲ್ಲಿ ಕೆ.ಸಿ.ಆರ್. ವಿರುದ್ಧ ಆರೋಪ ಮಾಡಿದ್ದಾರೆ.

ಬಿಜೆಪಿ ನಾಯಕರು ಶಾಸಕರನ್ನು ಸೆಳೆದಿದ್ದಾರೆಂಬ ಪ್ರಕರಣವನ್ನು ಬಲಗೊಳಿಸಿ, ಆ ಮೂಲಕ ಅಕ್ರಮ ಹಣ ಪ್ರಕರಣದಲ್ಲಿ ಸಿಲುಕಿದ್ದ ತಮ್ಮ ಪುತ್ರಿ ಕೆ. ಕವಿತಾರನ್ನು ರಕ್ಷಿಸಿಕೊಳ್ಳುವ ಪ್ರಯತ್ನ ನಡೆಸಿದ್ದರು ಎಂದು ರಾಧಾ ಕಿಶನ್ ರಾವ್ ತಿಳಿಸಿದ್ದಾರೆ.

ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವ ರನ್ನು ಬಂಧಿಸಲು ಕೆ.ಸಿ.ಆರ್. ಬಯಸಿದ್ದರು. ಇದಕ್ಕಾಗಿ ಅವರು ವಿಶೇಷ ತನಿಖಾ ತಂಡವೊಂದನ್ನು ರಚಿಸಿದ್ದರು. ಸಂತೋಷ್ ಬಂಧಿಸುವ ಮೂಲಕ ಪ್ರಕರಣವನ್ನು ಬಲಗೊಳಿಸಿ, ಬಿಜೆಪಿ ಸಂಧಾನಕ್ಕೆ ಬರುವಂತೆ ಮಾಡಬೇಕು. ಆ ಮೂಲಕ ಕವಿತಾರನ್ನು ಜಾರಿ ನಿರ್ದೇಶನಾ ಲಯದ ಪ್ರಕರಣದಿಂದ ಮುಕ್ತಗೊಳಿಸ ಬೇಕು ಎಂದು ಕೆ.ಸಿ.ಆರ್. ಬಯಸಿದ್ದರು.



ಆದರೆ, ಕೆಲ ಪೊಲೀಸ್ ಅಧಿಕಾರಿಗಳ ಅದಕ್ಷತೆಯಿಂದಾಗಿ ಒಬ್ಬ ಪ್ರಮುಖ ವ್ಯಕ್ತಿ ಬಂಧನದಿಂದ ತಪ್ಪಿಸಿಕೊಂಡಿದ್ದರು. ನಂತರ ಈ ಪ್ರಕರಣ ಹೈಕೋರ್ಟ್ ಮೆಟ್ಟಿಲೇರಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರನ್ನೂ ಬಂಧಿಸದಂತೆ ಹೈಕೋರ್ಟ್ ಆದೇಶಿಸಿತ್ತು. ನಂತರ ಪ್ರಕರಣ ವನ್ನು ಸಿ.ಬಿ.ಐ.ಗೆ ಹಸ್ತಾಂತರಿಸಲಾಗಿತ್ತು ಎಂದು ರಾಧಾ ಕಿಶನ್ ರಾವ್ ಹೇಳಿದ್ದಾರೆ.

ಎಸ್.ಐ.ಟಿ.ಗೆ ವಹಿಸಿದ್ದ ಕೆಲಸ ನಿರೀಕ್ಷೆಗೆ ತಕ್ಕ ಹಾಗೆ ಆಗಿಲ್ಲ ಎಂದು ಕೆ.ಸಿ.ಆರ್. ತೀವ್ರ ಕೋಪಗೊಂಡಿದ್ದರು ಎಂದೂ ಮಾಜಿ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ತೆಲಂಗಾಣದ ಹಿಂದಿನ ರಾವ್ ನೇತೃತ್ವದ ಬಿ.ಆರ್.ಎಸ್. ಸರ್ಕಾರ ದೂರವಾಣಿ ಕದ್ದಾಲಿಕೆ ಮಾಡಿದೆ ಎಂದು ಆರೋಪಿಸಲಾಗಿತ್ತು. ಕೆಲ ಕಂಪ್ಯೂಟರ್ ವ್ಯವಸ್ಥೆಗಳು ಹಾಗೂ ಅಧಿಕೃತ ಮಾಹಿತಿಯನ್ನು ಹಾಳು ಮಾಡಲಾಗಿದೆ ಎಂದು ದೂರಲಾಗಿತ್ತು.

ದೂರವಾಣಿ ಕದ್ದಾಲಿಕೆ ಪ್ರಕರಣದಲ್ಲಿ ರಾಧಾ ಕಿಶನ್ ರಾವ್ ಅವರನ್ನು ಕಳೆದ ಮಾರ್ಚ್ ತಿಂಗಳಲ್ಲಿ ಬಂಧಿಸಲಾಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅಮಾನತ್ತುಗೊಂಡಿದ್ದ ಡಿ.ಎಸ್.ಪಿ. ಡಿ. ಪ್ರಣೀತ್ ರಾವ್ ಸೇರಿದಂತೆ ಹಲವರು ಭಾಗಿಯಾಗಿದ್ದಾರೆ ಎಂದು ಆರೋಪಿಸಲಾಗಿತ್ತು.

2022ರ ಅಕ್ಟೋಬರ್‌ನಲ್ಲಿ ಮೊಯಿನಾಬಾದ್ ಫಾರಂ ಹೌಸ್‌ನಲ್ಲಿ ಶಾಸಕರ ಸೆಳೆಯುವ ಪ್ರಕರಣದಲ್ಲಿ ಒಂದು ಪ್ರಮುಖ ಕೆಲಸ ಮಾಡಿದ್ದೆ. ಆ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಕೆ. ರಾಜಗೋಪಾಲ ರೆಡ್ಡಿ ಅವರು ಪಕ್ಷಕ್ಕೆ ರಾಜೀನಾಮೆ ನೀಡಿ ಬಿಜೆಪಿಗೆ ಸೇರಿದ್ದರು ಎಂದು ರಾಧಾ ಕಿಶನ್ ರಾವ್ ಹೇಳಿದ್ದಾರೆ.

ಆ ವೇಳೆ ಮುನುಗೋಡು ವಿಧಾನಸಭಾ ಕ್ಷೇತ್ರಕ್ಕೆ ಉಪ ಚುನಾವಣೆ ನಡೆಯುತ್ತಿತ್ತು. ಈ ಚುನಾವಣೆಯನ್ನು ಕೆ.ಸಿ.ಆರ್. ಪ್ರತಿಷ್ಠೆಯಾಗಿ ಪರಿಗಣಿಸಿದ್ದರು. ಈ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಬೇಕೆಂದು ಬಯಸಿದ್ದರು.

ಈ ಸಂದರ್ಭದಲ್ಲಿ ಬಿಜೆಪಿಯ ಕೆಲವರು ಬಿ.ಆರ್.ಎಸ್.ನ ಶಾಸಕರನ್ನು ಸೆಳೆಯಲು ತಮ್ಮನ್ನು ಸಂಪರ್ಕಿಸಿದ್ದಾರೆ ಎಂದು ಬಿ.ಆರ್.ಎಸ್. ಶಾಸಕ ಪೈಲಟ್ ರೋಹಿತ್ ರೆಡ್ಡಿ ಅವರು ಕೆ.ಸಿ.ಆರ್.ಗೆ ಮಾಹಿತಿ ನೀಡಿದ್ದರು.

ಈ ವಿಷಯದ ಬಗ್ಗೆ ಗುಪ್ತಚರ ದಳ ನಿಗಾ ವಹಿಸಬೇಕು ಎಂದು ಕೆ.ಸಿ.ಆರ್. ತಿಳಿಸಿದ್ದರು. ಅದರಂತೆ ಪ್ರಣೀತ್ ಕುಮಾರ್ ಅವರು ಆಡಿಯೋ ಕ್ಲಿಪ್ ಒಂದನ್ನು ಕದ್ದಾಲಿಕೆ ಮಾಡಿ ಕೆ.ಸಿ.ಆರ್.ಗೆ ನೀಡಿದ್ದರು. ಶಾಸಕ ರೋಹಿತ್ ರೆಡ್ಡಿ ಮೂಲಕ ಬಲೆ ಬೀಸಲು ಕೆ.ಸಿ.ಆರ್. ತಿಳಿಸಿದ್ದರು ಎಂದು ತಪ್ಪೊಪ್ಪಿಗೆ ಹೇಳಿಕೆಯಲ್ಲಿ ತಿಳಿಸಲಾಗಿದೆ.

ತಪ್ಪೊಪ್ಪಿಗೆ ಹೇಳಿಕೆಯಲ್ಲಿನ ಎಲ್ಲ ಆರೋಪಗಳನ್ನು ಪಕ್ಷ ತಳ್ಳಿ ಹಾಕುತ್ತದೆ ಎಂದು ಬಿ.ಆರ್.ಎಸ್. ನಾಯಕ ಹಾಗೂ ಮಾಜಿ ಸಂಸದ ವಿನೋದ್ ಕುಮಾರ್ ಅವರು ಹೇಳಿದ್ದಾರೆ.

## ಸಣ್ಣ ಟೀಕೆಯನ್ನೂ ಸಹಿಸದ ಕೆ.ಸಿ.ಆರ್ : ವಿರೋಧಿಗಳ ಬೆದರಿಸಲು, ಪಕ್ಷದ ಕೆಲಸಕ್ಕೆ ಅಧಿಕಾರಿಗಳ ಬಳಕೆ

ಕೆ.ಸಿ.ಆರ್. ಹಾಗೂ ಅವರ ಕುಟುಂಬದ ಎಲ್ಲಾ ಗುಪ್ತ ಕೆಲಸಗಳಲ್ಲಿ ನಾನು ಭಾಗಿಯಾಗಿದ್ದೆ. ಇದರಲ್ಲಿ ಕೆ.ಸಿ.ಆರ್. ಕುಟುಂಬದ ಸದಸ್ಯರಿಗೆ ತೊಂದರೆ ನೀಡುತ್ತಿದ್ದ ಕೆಲ ವ್ಯಕ್ತಿಗಳನ್ನು ಬೆದರಿಸುವುದೂ ಸೇರಿತ್ತು. ಕೆ.ಸಿ.ಆರ್. ನೇತೃತ್ವದ ಸರ್ಕಾರದ ವಿರುದ್ಧ ಯಾವುದೇ ಪ್ರತಿಭಟನೆ, ಇಲ್ಲವೇ ಆಕ್ರೋಶ ವ್ಯಕ್ತವಾಗದಂತೆ ಹತ್ತಿಕ್ಕುವ ಕೆಲಸದಲ್ಲೂ ಭಾಗಿಯಾಗಿದ್ದೆ. ಸಣ್ಣ ಟೀಕೆ, ಇಲ್ಲವೇ ಭಿನ್ನಮತಕ್ಕೂ ಕೆ.ಸಿ.ಆರ್. ಆಕ್ರೋಶಗೊಳ್ಳುತ್ತಿದ್ದರು ಎಂದು ಮಾಜಿ ಡಿ.ಸಿ.ಪಿ. ಪಿ. ರಾಧಾ, ಕಿಶನ್ ರಾವ್ ಹೇಳಿದ್ದಾರೆ.

ಈ ಹಿಂದೆ ವಿಶೇಷ ಗುಪ್ತಚರ ದಳ (ಎಸ್.ಐ.ಬಿ.) ಮುಖ್ಯಸ್ಥರಾಗಿದ್ದ ಪ್ರಭಾಕರ ರಾವ್ ಅವರು, ಅಮಾನತ್ತುಗೊಂಡ ಡಿ.ಎಸ್.ಪಿ. ಪ್ರಣೀತ್ ರಾವ್ ನೇತೃತ್ವದಲ್ಲಿ ವಿಶೇಷ ತಂಡ ರಚಿಸಿದ್ದರು. ಈ ತಂಡ ವಿರೋಧ ಪಕ್ಷಗಳ ಹಾಗೂ ಅವರ ಸಹಚರರ ಮೇಲೆ ನಿಗಾ ವಹಿಸುತ್ತಿತ್ತು. ಪ್ರತಿಪಕ್ಷಗಳ ಹಣ ವಶ ಹಾಗೂ ಬಿ.ಆರ್.ಎಸ್. ಹಣ ಸಾಗಣೆ ಸೇರಿದಂತೆ, ಹಲವು ಕೆಲಸಗಳ ಗೌಪ್ಯ ಮಾಹಿತಿಗಾಗಿ ಪ್ರಣೀತ್ ರಾವ್ ಜೊತೆ ಕೆಲಸ ಮಾಡುವಂತೆ ಪ್ರಭಾಕರ ರಾವ್ ತಿಳಿಸಿದ್ದರು ಎಂದೂ ರಾಧಾ ಕಿಶನ್ ರಾವ್ ಹೇಳಿದ್ದಾರೆ.

ಬಿ.ಆರ್.ಎಸ್. ಪಕ್ಷ ಹಾಗೂ ಕೆ.ಸಿ.ಆರ್. ಕುಟುಂಬದ ಪರವಾಗಿ ಸಂಘಟಿತ ಕೆಲಸ ಮಾಡುವುದು 2018ರ ವಿಧಾನಸಭಾ ಚುನಾವಣೆಗೆ ಮುಂಚೆ ಆರಂಭವಾಗಿತ್ತು. ಇದು 2019ರ ಲೋಕಸಭಾ ಚುನಾವಣೆ ಹಾಗೂ ಹಲವು ಉಪ ಚುನಾವಣೆಗಳಲ್ಲೂ ಮುಂದುವರೆದಿತ್ತು ಎಂದು ತಪ್ಪೊಪ್ಪಿಗೆ ಹೇಳಿಕೆಯಲ್ಲಿ ತಿಳಿಸಲಾಗಿದೆ.

ವಿಶೇಷ ಗುಪ್ತಚರ ದಳದಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಬಳಸಿಕೊಂಡು ಪ್ರತಿಪಕ್ಷಗಳು ಹಾಗೂ ಕೆ.ಸಿ.ಆರ್.ಗೆ ವಿರುದ್ಧವಾಗಿದ್ದಾರೆ ಎನ್ನಲಾಗುವ ವ್ಯಕ್ತಿಗಳ ಮಾಹಿತಿ ಸಂಗ್ರಹಿಸಲಾಗುತ್ತಿತ್ತು. ಅವರ ದೂರವಾಣಿಗಳ ಕದ್ದಾಲಿಕೆ ಮಾಡಲಾಗುತ್ತಿತ್ತು. ಈ ಎಲ್ಲ ಮಾಹಿತಿಯನ್ನು ದೂರವಾಣಿ ಕದ್ದಾಲಿಕೆ ಪ್ರಕರಣದಲ್ಲಿ ಬಂಧಿತ ಇನ್ಸ್ಪೆಕ್ಟರ್ ಅಧಿಕಾರಿ ಭುಜಂಗ ರಾವ್‌ಗೆ ನೀಡಲಾಗುತ್ತಿತ್ತು. ನಂತರ ಭುಜಂಗ ರಾವ್ ಈ ಮಾಹಿತಿಯನ್ನು ಕೆ.ಸಿ.ಆರ್.ಗೆ ನೀಡುತ್ತಿದ್ದರು.

## ಹಾಲಿ ಸಿಎಂನ ಇಡೀ ಕುಟುಂಬದ ದೂರವಾಣಿ ಕದ್ದಾಲಿಕೆ !

ದೂರವಾಣಿ ಕದ್ದಾಲಿಕೆ ಪ್ರಕರಣದಲ್ಲಿ ಬಂಧಿತ ಇನ್ಸ್ಪೆಕ್ಟರ್ ಪೊಲೀಸ್ ಅಧಿಕಾರಿ ಭುಜಂಗ ರಾವ್ ಅವರೂ ತಪ್ಪೊಪ್ಪಿಗೆ ಹೇಳಿಕೆ ನೀಡಿದ್ದಾರೆ.

ತಮಿಳುನಾಡು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಹಾಗೂ ಹಾಲಿ ತೆಲಂಗಾಣದ ಮುಖ್ಯಮಂತ್ರಿ ಎ. ರೇವಂತ್ ರೆಡ್ಡಿ ಅವರ ಇಡೀ ಕುಟುಂಬ ಮತ್ತು ಬಿಜೆಪಿ ನಾಯಕರಾದ ಬಂಡಿ ಸಂಜಯ್ ಹಾಗೂ ಇ. ರಾಜೇಂದರ್ ಸೇರಿದಂತೆ ಹಲವರ ದೂರವಾಣಿ ಕದ್ದಾಲಿಕೆ ಮಾಡಲಾಗಿತ್ತು ಎಂದವರು ತಿಳಿಸಿದ್ದಾರೆ.

ಈ ರೀತಿಯ ಕದ್ದಾಲಿಕೆ ಭೀತಿಯಿಂದಾಗಿ ಹಲವು ರಾಜಕೀಯ ನಾಯಕರು, ನ್ಯಾಯಾಂಗದವರು ಹಾಗೂ ಅಧಿಕಾರಿಗಳು ನೇರವಾಗಿ ದೂರವಾಣಿ ಕರೆ ಮಾಡುವುದನ್ನು ಬಿಟ್ಟಿದ್ದರು. ಸಾಮಾಜಿಕ ಮಾಧ್ಯಮಗಳ ಮೂಲಕ ಎನ್‌ಕ್ರಿಪ್ಷನ್ ಬಳಸಿ ಕರೆ ಮಾಡುತ್ತಿದ್ದರು. ಆಗ ವಿಶೇಷ ಗುಪ್ತಚರ ದಳ (ಎಸ್.ಐ.ಬಿ.)ದ ಮುಖ್ಯಸ್ಥರಾಗಿದ್ದ ಪ್ರಭಾಕರ ರಾವ್ ಹಾಗೂ ಅಮಾನತ್ತುಗೊಂಡ ಡಿ.ಎಸ್.ಪಿ. ಪ್ರಣೀತ್ ರಾವ್ ಅವರು ಐ.ಪಿ.ಡಿ.ಆರ್. ಮೂಲಕ ಸಾಮಾಜಿಕ ಮಾಧ್ಯಮಗಳ ಸಂಭಾಷಣೆಯ ಮೇಲೂ ಕಣ್ಣಿರಿಸಿರುತ್ತಿದ್ದರು ಎಂದು ಭುಜಂಗ ರಾವ್ ತಪ್ಪೊಪ್ಪಿಗೆ ಹೇಳಿಕೆಯಲ್ಲಿ ತಿಳಿಸಲಾಗಿದೆ.

# ಪರಿಷತ್‌ನ 7 ಸ್ಥಾನಕ್ಕೆ 300 ಆಕಾಂಕ್ಷಿಗಳು ಅಭ್ಯರ್ಥಿಗಳ ಆಯ್ಕೆ ವರಿಷ್ಠರಿಗೆ ಬಿಟ್ಟದ್ದು : ಡಿಕೆಶಿ

ಬೆಂಗಳೂರು, ಮೇ 28 - ವಿಧಾನಸಭೆಯಿಂದ ಪರಿಷತ್ತಿಗೆ ನಡೆಯುತ್ತಿರುವ ಚುನಾವಣೆಯಲ್ಲಿ 7 ಸ್ಥಾನಕ್ಕೆ ನಮ್ಮಲ್ಲಿ 300 ಪ್ರಬಲ ಆಕಾಂಕ್ಷಿಗಳಿದ್ದಾರೆ ಎಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ. ತೆರವಾಗಲಿರುವ 11 ಸ್ಥಾನಗಳಲ್ಲಿ ವಿಧಾನ ಸಭೆಯ ಲ್ಲಿನ ಸಂಖ್ಯಾಬಲದ ಆಧಾರದ ಮೇಲೆ ನಮಗೆ 7 ಸ್ಥಾನ ಲಭ್ಯವಾಗಲಿವೆ, ಇದಕ್ಕೆ ಎಲ್ಲಾ ಸಮುದಾಯ ಮತ್ತು ವಲಯಗಳಿಂದ ಒತ್ತಡ ಇದೆ ಎಂದಿದ್ದಾರೆ.

ಅಭ್ಯರ್ಥಿಗಳ ಆಯ್ಕೆ ಸಂಬಂಧ ವರಿಷ್ಠರ ಅನುಮೋದನೆ ಪಡೆಯಲು ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆಗೂಡಿ ದೆಹಲಿಗೆ ತೆರಳುವುದಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಲ್ಲಾ ವರ್ಗಕ್ಕೂ ನ್ಯಾಯ ಕಲ್ಪಿಸಲು ಸಾಧ್ಯವಿಲ್ಲ. ಒತ್ತಡ ಹೆಚ್ಚಿರುವುದರ ಹಿನ್ನೆಲೆಯಲ್ಲಿ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆಯನ್ನು ವರಿಷ್ಠರಿಗೆ ಬಿಡುತ್ತೇವೆ ಎಂದರು.

ಆದರೆ, ನಾನು ಮತ್ತು ಮುಖ್ಯಮಂತ್ರಿ ಅವರು, ಪಕ್ಷ ಸಂಘಟನೆಗೆ ದುಡಿದವರು ಹಾಗೂ ವಿಧಾನಸಭೆ ಮತ್ತು ಲೋಕಸಭಾ ಚುನಾವಣೆಯಲ್ಲಿ ಕೆಲಸ ಮಾಡಿದ ಮತ್ತು ಪಕ್ಷ ಸಂಘಟನೆಗೆ ಸಹಕಾರಿ ಆಗುವಂತಹವರನ್ನು ಗುರುತಿಸಿ, ಎಂದು ಮನವಿ ಮಾಡುತ್ತೇವೆ. ಅಷ್ಟೇ ಅಲ್ಲ, ಆಕಾಂಕ್ಷಿಗಳ ಪಟ್ಟಿಯನ್ನು ವರಿಷ್ಠರ ಗಮನಕ್ಕೆ ತರುವುದಾಗಿಯೂ ತಿಳಿಸಿದರು.

ರಾಜ್ಯ ನಾಯಕರೊಂದಿಗೆ ಚರ್ಚಿಸಿದ ನಂತರ ವರಿಷ್ಠರು ನಾಳೆ 7 ಅಭ್ಯರ್ಥಿಗಳ ಹೆಸರುಗಳನ್ನು ಪ್ರಕಟಿಸುವ ಸಾಧ್ಯತೆ ಇದೆ ಎಂದು ಶಿವಕುಮಾರ್ ತಿಳಿಸಿದರು.

ವಿಧಾನಸಭೆಯಿಂದ ಪರಿಷತ್ತಿನ 11 ಸ್ಥಾನಗಳಿಗೆ ನಡೆಯುತ್ತಿರುವ ಚುನಾವಣೆಗೆ ನಾಮಪತ್ರ ಸಲ್ಲಿಕೆ ಕಾರ್ಯ ಕಳೆದ ಸೋಮವಾರದಿಂದ ಆರಂಭವಾಗಿದೆ.

ನಾಮಪತ್ರ ಸಲ್ಲಿಕೆಗೆ ಜೂನ್ 3 ಕಡೆಯ ದಿನವಾಗಿದ್ದು, ಅಗತ್ಯ ಬಿದ್ದಲ್ಲಿ ಜೂನ್ 13 ರಂದು ಮತದಾನ ನಡೆಯಲಿದ್ದು, ಅಂದು ಸಂಜೆಯೇ ಮತ ಎಣಿಕೆ ನಡೆದು ಫಲಿತಾಂಶ ಹೊರಬೀಳಲಿದೆ.

# ನಗರೀಕರಣದಿಂದ ರಾತ್ರಿ ತಾಪಮಾನ ಶೇ.60ಕ್ಕೆ ಏರಿಕೆ

**(1ನೇ ಪುಟದಿಂದ)** ಹೆಚ್ಚಾಗಿದೆ. ಪೂರ್ವ ಹಾಗೂ ಮಧ್ಯ ಭಾರತದ ನಗರಗಳಲ್ಲಿ ತಾಪಮಾನ ಹೆಚ್ಚಳ ಗಣನೀಯವಾಗಿ ಕಂಡು ಬಂದಿದೆ. ತಾಪಮಾನ ಹೆಚ್ಚಳ ನಗರಗಳಿಗಷ್ಟೇ ಸೀಮಿತವಾಗಿಲ್ಲ. ಪ್ರತಿ ದಶಕದಲ್ಲಿ ಒಟ್ಟಾರೆ ಭಾರತದಲ್ಲಿ ತಾಪಮಾನ 0.26 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಿದೆ. ಸರಾಸರಿಗೆ ಹೋಲಿಸಿದರೆ ನಗರಗಳಲ್ಲಿ ತಾಪಮಾನ ಹೆಚ್ಚಳ ಶೇ.60ರಷ್ಟು ಏರುಮುಖ ಎಂದೂ ಅಧ್ಯಯನ ತಿಳಿಸಿದೆ.

# ನಗರದಲ್ಲಿ ಇಂದು ವಿಕಾಸ ಸೌಹಾರ್ದ ಕೋ-ಅಪ್ ಬ್ಯಾಂಕ್ ಶಾಖೆ ಉದ್ಘಾಟನೆ

ದಾವಣಗೆರೆ, ಮೇ 28- ನಗರದ ಬಿನ್ನಿ ಕಂಪನಿ ರಸ್ತೆಯಲ್ಲಿ ಶ್ರೀ ಹೊಸಪೇಟೆಯ ವಿಕಾಸ ಸೌಹಾರ್ದ ಕೋ-ಆಪರೇಟಿವ್ ಬ್ಯಾಂಕಿನ ದಾವಣಗೆರೆ ಶಾಖೆ ನಾಳೆ ದಿನಾಂಕ 29 ರ ಬುಧವಾರ ಬೆಳಿಗ್ಗೆ 10.15 ಕ್ಕೆ ಆರಂಭಗೊಳ್ಳಲಿದೆ ಎಂದು ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಪ್ರಸನ್ನ ಹಿರೇಮಠ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗ ರಾಜದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಹೊಸಪೇಟೆ ವಿಕಾಸ ಬ್ಯಾಂಕಿನ ಅಧ್ಯಕ್ಷ ವಿಶ್ವನಾಥ ಚ. ಹಿರೇಮಠ ಅಧ್ಯಕ್ಷತೆ ವಹಿಸುವರು.

ಹೊಸಪೇಟೆಯಲ್ಲಿ ವಿಕಾಸ ಬ್ಯಾಂಕ್ ಪ್ರಾರಂಭವಾಗಿ 27 ವರ್ಷಗಳಾಗಿದ್ದು, ರಾಜ್ಯದಲ್ಲಿ 15 ಶಾಖೆಗಳನ್ನು ಹೊಂದಿದೆ ಎಂದು ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬ್ಯಾಂಕಿನ ನಿರ್ದೇಶಕ ಅನಂತ್ ಜೋಶಿ, ರಮೇಶ್ ಪುರೋಹಿತ್, ಎಂ. ವೆಂಕಪ್ಪ, ಜೆ.ಜಂಬಣ್ಣ, ಚೇತನ್ ಉಪಸ್ಥಿತರಿದ್ದರು.

WAREHOUSE AVAILABLE FOR RENT ON LONG/SHORT/DAILY TERM BASIS AT RAVI MILL PREMISES
Interested Parties may contact at :
M/s R.Hanumanthappa & Son
Hanumanthappa Buildings,
Poona - Bangalore Road, Davangere - 577 002.
Ph. : 258834 / 94498 28834

MOTHERE'S TOUCH SCHOOL
We Are hiring Teachers who are Passionate openings for Nursery Teachers, PE Teacher & Urdu Teacher
REQUIRMENT
* NTC or Bachelor's Degree
* B.PEd for PE Teacher
* Urdu Proficiency for urdu teacher
Contact : 9380474762, 8550850010
2nd main, 2nd cross, saysam layout Nittuvalli, Davangere-2.

# ಭೂಕುಸಿತದ ಮುನ್ಸೂಚನೆ ನೀಡಲು ಸಾಧ್ಯವೇ?



ನವದೆಹಲಿ, ಮೇ 28 - ಪಪುವಾ ನ್ಯೂಗಿನಿಯಾದ ದುರ್ಗಮ ಗ್ರಾಮಗಳಲ್ಲಿ ಕಳೆದ ವಾರ ಸಂಭವಿಸಿದ ಭೂಕುಸಿತದ ಕಾರಣದಿಂದಾಗಿ ಎರಡು ಸಾವಿರದಷ್ಟು ಜನ ಸಾವನ್ನಪ್ಪಿದ್ದಾರೆ ಹಾಗೂ ಸಾವಿರಾರು ಜನ ಕಾಣೆಯಾಗಿದ್ದಾರೆ. ತೀವ್ರ ದುರಂತದ ನಂತರ ಕೆಲವೇ ಮೃತದೇಹಗಳನ್ನು ಮಾತ್ರ ಪತ್ತೆ ಮಾಡಲು ಸಾಧ್ಯವಾಗಿದೆ.

ದುರ್ಗಮ ಪ್ರದೇಶದಲ್ಲಿ ಶೋಧ ಹಾಗೂ ರಕ್ಷಣಾ ಕಾರ್ಯಾಚರಣೆಯೂ ಸವಾಲಿನದ್ದಾಗಿದೆ. ಕೆಲವೊಮ್ಮೆ ಒಂದು ಭೂಕುಸಿತದ ನಂತರ ಅದೇ ಪ್ರದೇಶದಲ್ಲಿ ಮತ್ತೊಂದು ಕುಸಿತ ಉಂಟಾಗುತ್ತದೆ. ಕಲ್ಲು ಬಂಡೆಗಳೂ ಉರುಳುತ್ತವೆ. ಇದರಿಂದ ರಕ್ಷಣಾ ಕಾರ್ಯ ಸವಾಲಿನದ್ದಾಗಿದೆ. ದೊಡ್ಡ ಪ್ರಮಾಣದ ಅರ್ತ್ ಮೂವರ್‌ಗಳು ಹಾಗೂ ಸುಗಮ ರಸ್ತೆ ಇಲ್ಲದಿದ್ದರಂತೂ ಸಮಸ್ಯೆ ಮತ್ತಷ್ಟು ಬಿಗಡಾಯಿಸುತ್ತದೆ. ರಸ್ತೆಗಳನ್ನು ಸರಿಪಡಿಸಿ, ರಕ್ಷಣಾ ಉಪಕರಣಗಳನ್ನು ತೆಗೆದುಕೊಂಡು ಹೋಗುವಷ್ಟರಲ್ಲಿ ಪರಿಸ್ಥಿತಿ ಕೈ ಮೀರಿರುತ್ತದೆ.

ಇದೆಲ್ಲದನ್ನೂ ಮೀರಿ, ಭೂಕುಸಿತದಿಂದ ಕಟ್ಟಡಗಳು ಕೊಚ್ಚಿ ಹೋಗಿರುತ್ತವೆ. ಇಡೀ ಪ್ರದೇಶ ಗುರುತಿಸಲಾಗದಷ್ಟು ಬದಲಾಗಿರುತ್ತದೆ. ಹೀಗಾಗಿ ಯಾರಾದರೂ ಬದುಕಿದ್ದರೆ, ಎಲ್ಲಿದ್ದಾರೆ ಎಂದು ಗುರುತಿಸುವುದು ಕಷ್ಟಸಾಧ್ಯ.

**ಮಳೆ, ಭೂಕಂಪ ಪ್ರಮುಖ ಕಾರಣ**

ಇದೆಲ್ಲ ಕಾರಣಗಳಿಂದಾಗಿ ಭೂಕುಸಿತದ ಮುನ್ಸೂಚನೆ ಪಡೆಯುವುದು ಸಾಧ್ಯವೇ? ಎಂಬ ಪ್ರಶ್ನೆ ಮಹತ್ವದ್ದಾಗಿದೆ. ಬೆಟ್ಟ ಇಲ್ಲವೇ ಪರ್ವತಗಳಲ್ಲಿರುವ ಕಲ್ಲು - ಮಣ್ಣು ಇತ್ಯಾದಿಗಳ ಬಲವನ್ನು ಮೀರಿ ಗುರುತ್ವಾಕರ್ಷಣೆ ಉಂಟಾದಾಗ ಭೂಕುಸಿತ ಉಂಟಾಗುತ್ತದೆ.

ಬೆಟ್ಟ ಇಲ್ಲವೇ ಪರ್ವತಗಳ ಒಂದು ಭಾಗ ಕುಸಿಯಲು ಆರಂಭಿಸುತ್ತದೆ. ಕುಸಿತವಾಗುವ ಕಲ್ಲು ಮಣ್ಣುಗಳ ಪ್ರಮಾಣ ಕೆಲವೇ ಕ್ಯುಬಿಕ್ ಮೀಟರ್‌ಗಳಿಂದ ಹಿಡಿದು ಮಿಲಿಯನ್‌ಗಟ್ಟಲೆ ಇರುವ ಸಾಧ್ಯತೆ ಇದೆ.

ಭೂಕಂಪ ಇಲ್ಲವೇ ಮಳೆ ಅಥವಾ ಎರಡೂ ಸೇರಿಕೊಂಡು ಭೂಕುಸಿತ ಸಂಭವಿಸುವುದು ಸಾಮಾನ್ಯ ವಿದ್ಯಮಾನ. ಭೂಕಂಪವಾದಾಗ ನೆಲ ನಡುಗುವುದರಿಂದ ಇಡೀ ಪ್ರದೇಶ ದುರ್ಬಲವಾಗುತ್ತದೆ. ಮಳೆಯಿಂದಾಗಿ ನೀರು ತುಂಬಿಕೊಂಡು ಕೆಸರಾಗಿ ಇಡೀ ಪ್ರದೇಶ ಕುಸಿತದ ಅಪಾಯ ಎದುರಿಸುತ್ತದೆ. ಪಪುವಾ ನ್ಯೂಗಿನಿಯಾದಂತಹ ಪ್ರದೇಶ ಮಳೆ ಹಾಗೂ ಭೂಕಂಪ ಎರಡರಿಂದಲೂ ಪೀಡಿತವಾಗಿದೆ.

ಕರಾವಳಿಯ ಇಳಿಜಾರಿನಲ್ಲಿ ಸಾಗುವ ನೀರು ಭೂ ಕೊರೆತಕ್ಕೆ ಕಾರಣವಾಗುತ್ತದೆ. ಅಂತರ್ಜಲ ಕಲ್ಲುಗಳನ್ನು ಕರಗಿಸಿ ಇಳಿಜಾರಿಗೆ ಕಾರಣವಾಗುತ್ತದೆ. ಮಾನವ ಚಟುವಟಿಕೆಗಳೂ ಭೂಕುಸಿತ ಹೆಚ್ಚುವಂತೆ ಮಾಡುತ್ತವೆ. ಮರಗಳು ಸಹಜವಾಗಿ ಅಂತರ್ಜಲ ಹಾಗೂ ಹರಿಯುವ ನೀರನ್ನು ಎದುರಿಸಿ ನಿಲ್ಲುತ್ತವೆ. ಮರಗಳನ್ನು ನಾಶಗೊಳಿಸಿದಾಗ ಭೂಕುಸಿತದ ಅಪಾಯ ಹೆಚ್ಚಾಗುತ್ತದೆ. ಗಣಿಗಾರಿಕೆಗಾಗಿ ನಡೆಸುವ ಸ್ಫೋಟಗಳೂ ಸಣ್ಣ ಭೂಕಂಪದಂತಹ ಪರಿಣಾಮ ಬೀರುತ್ತವೆ.

**ಭೂಕುಸಿತದ ಮುನ್ಸೂಚನೆ ಕಷ್ಟ**

ಭೂಕುಸಿತವನ್ನು ಮುಂಚೆಯೇ ಗುರುತಿಸಿ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳುವುದು ಕಷ್ಟ. ಆಸ್ಟ್ರೇಲಿಯಾ ಭೂಖಂಡ ವಿಶ್ವದಲ್ಲೇ ಅತ್ಯಂತ ಸಮತಟ್ಟಿನದು ಎನ್ನಲಾಗುತ್ತದೆ. ಇಲ್ಲಿಯೂ ಸಹ ಭೂಕುಸಿತದ ಅಪಾಯ ಇದೆ. ವಿಮಾ ಕಂಪನಿಗಳು ಭೂಕುಸಿತದ ಪಾಲಿಸಿ ನೀಡುವುದಿಲ್ಲ.

ಭೂಕಂಪ ಹಾಗೂ ಮಳೆಯ ಬಗ್ಗೆ ಮುನ್ಸೂಚನೆ ಪಡೆಯಲು ಸಾಧ್ಯವಾಗುತ್ತಿದೆ. ಇವೆರಡನ್ನೂ ಆಧರಿಸಿ ಭೌಗೋಳಿಕ ಅಧ್ಯಯನ ನಡೆಸಿ ಮುನ್ಸೂಚನೆ ನೀಡಲು ಸಾಧ್ಯವೇ ? ಎಂಬ ಪ್ರಶ್ನೆ ಇದೆ.

ಭೂಮಿಯು ಕಲ್ಲು, ಮಣ್ಣು, ಮರಳು, ಜೇಡಿ ಮಣ್ಣು, ಕೆಸರು ಹೀಗೆ ಹಲವಾರು ಪದರಗಳಿಂದ ರೂಪುಗೊಂಡಿರುತ್ತದೆ. ಹೀಗಾಗಿ ಮಣ್ಣಿನ ಶಕ್ತಿಯನ್ನು ಅಧ್ಯಯನ ಮಾಡಿ ವಿವರಗಳನ್ನು ರೂಪಿಸಲು ಸಾಧ್ಯ.


ಭೂಪ್ರದೇಶ ರೂಪುಗೊಂಡ ವಿನ್ಯಾಸದ ಮೂರು ಆಯಾಮಗಳ ಭೂಪಟ ರೂಪಿಸಿದರೆ ಮಾತ್ರ ಮುನ್ಸೂಚನೆ ಪಡೆಯಲು ಸಾಧ್ಯ. ಆದರೆ, ಯಾವುದೇ ಸೆನ್ಸಾರ್‌ಗಳಿಂದ ಈ ಸೂಕ್ಷ್ಮ ಮಾಹಿತಿ ಸಿಗುವುದಿಲ್ಲ. ಭೂಗೋಳ ಶಾಸ್ತ್ರಜ್ಞರು ಸಿಗುವ ಅಲ್ಪಸ್ವಲ್ಪ ಮಾಹಿತಿ ಆಧರಿಸಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆದರೆ, ಬಂಡೆಗಳಲ್ಲಿರುವ ಬಿರುಕುಗಳನ್ನು ಸುಲಭವಾಗಿ ಗುರುತಿಸಲು ಸಾಧ್ಯವಾಗದು. ಇದರಿಂದಾಗಿ ಮುನ್ಸೂಚನೆ ಸಾಕಷ್ಟು ಅನಿಶ್ಚಿತತೆಗೆ ಸಿಲುಕುತ್ತದೆ.

ಹೀಗಾಗಿ ಭೂಕುಸಿತದ ಸಮಯ ಹೇಳುವುದು ಕಷ್ಟ. ಭೂಕುಸಿತದ ಪ್ರಮಾಣ ಹಾಗೂ ಸುರಕ್ಷಿತ ಸ್ಥಳ ಗುರುತಿಸುವುದು ಕಠಿಣವಾಗಿದೆ.

ಭೂಮಿಯ ಸ್ವರೂಪ, ಅಂತರ್ಜಲ ಹಾಗೂ ಭೂಕಂಪದ ತೀವ್ರತೆಯ ಆಧಾರದ ಮೇಲೆ ಇಂತಿಂತಹ ಭೂಭಾಗ ಅಪಾಯ ಎದುರಿಸುತ್ತದೆ ಎಂದು ಹೇಳಬಹುದು. ಆದರೆ, ಯಾವಾಗ ಭೂಕುಸಿತ ಸಂಭವಿಸುತ್ತದೆ ಎಂದು ಹೇಳಲು ಸಾಧ್ಯವಾಗದು.

ವಿಶ್ವದ ಎಲ್ಲ ತಂತ್ರಜ್ಞಾನ ಹಾಗೂ ಹಣವನ್ನು ಸುರಿದರೂ ಭೂಕುಸಿತದ ಅಂದಾಜು ಸಾಧ್ಯವಾಗದು. ಅದರಲ್ಲೂ ದುರ್ಗಮ ಪ್ರದೇಶಗಳಲ್ಲಂತೂ ಇಂತಹ ಮಾಹಿತಿ ರೂಪಿಸುವುದು ಅಸಾಧ್ಯ.

ಸೋಲಾರ್ ಅಡವಳಿಸಿ, ಆದಾಯದ ಮೂಲ ಕಂಡುಕೊಳ್ಳಿ




35% Discount on Solar Roof Top & Solar Pumps
Contact :
7892789731
Petals Solar
# 11/A, Ground Floor, APMC Yard, 'F' Block, DAVANGERE

# ಶಾಲಾ ಪ್ರವೇಶಕ್ಕೆ ದಾಖಲೆ ಪಡೆಯಲು ನೂಕು-ನುಗ್ಗಲು



## ಹರಿಹರದಲ್ಲಿ ನಿರ್ವಹಣೆ ಇಲ್ಲದೆ ಸೊರಗಿರುವ ಆಧಾರ ಕೇಂದ್ರ

ಹರಿಹರ, ಮೇ 28- ವಿದ್ಯಾರ್ಥಿಗಳ ಶಾಲಾ ಪ್ರವೇಶಕ್ಕೆ ಅಗತ್ಯವಾಗಿರುವ ಆಧಾರ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಪಡೆಯಲು ಪೋಷಕರು ಮತ್ತು ವಿದ್ಯಾರ್ಥಿಗಳು ಹರಸಾಹಸ ಪಡುತ್ತಿದ್ದಾರೆ.

ತಾಲ್ಲೂಕಿನಲ್ಲಿ ಅನುದಾನಿತ ಮತ್ತು ಅನುದಾನರಹಿತ ಪ್ರಾಥಮಿಕ ಶಾಲೆ 226 ಮತ್ತು ಪ್ರೌಢಶಾಲೆ 65 ಇದ್ದು, ಒಂದರಿಂದ ಹತ್ತನೇ ತರಗತಿ ವಿದ್ಯಾರ್ಥಿಗಳಿಗೆ ಶಾಲೆಗೆ ಸೇರುವುದಕ್ಕೆ ಕಡ್ಡಾಯವಾಗಿ ಆದಾಯ, ಜಾತಿ, ಮತ್ತು ಆಧಾರ ಕಾರ್ಡ್ ಪಡೆಯುವಂತೆ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ. ಎಸ್ಸಿ, ಎಸ್ಟಿ, ಓಬಿಸಿ, 3ಬಿ ಸೇರಿದಂತೆ ಇತರೆ ವರ್ಗದ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಹಾಗೂ ಇತರೆ ಸರ್ಕಾರದ ಸೌಲಭ್ಯಗಳನ್ನು ಪಡೆಯಲೂ ಈ ದಾಖಲೆಗಳು ಬೇಕು.

ಹಾಗಾಗಿ ವಿದ್ಯಾರ್ಥಿಗಳು ಮತ್ತು ಪೋಷಕರು ಆದಾಯ, ಜಾತಿ ಮತ್ತು ಆಧಾರ ಕಾರ್ಡನ್ನು ಪಡೆಯುವುದಕ್ಕೆ ತಾಲ್ಲೂಕು ಆಡಳಿತದ ಆವರಣದಲ್ಲಿರುವ ಕೇಂದ್ರದ ಮುಂದೆ ಬೆಳಿಗ್ಗೆ ಯಿಂದ ಸಂಜೆಯವರೆಗೆ ಸುಡುವ ಬಿಸಿಲಿನ ತಾಪವನ್ನು ಲೆಕ್ಕಿಸದೆ, ಜೊತೆಗೆ ಮಲ ಮೂತ್ರ ದುರ್ವಾಸನೆ ಸಹಿಸಿಕೊಂಡು, ಕುಡಿಯುವ ನೀರಿಲ್ಲದೆ, ಕುಳಿತುಕೊಳ್ಳಲು ಆಸನದ ವ್ಯವಸ್ಥೆ ಇಲ್ಲದೇ ಇರುವಂತಹ ಮತ್ತು ಕಟ್ಟಡದ ಮೇಲ್ಛಾವಣಿ ಸಂಪೂರ್ಣ ಹಾಳಾಗಿ ಸಿಮೆಂಟ್ ಕಾಂಕ್ರಿಟ್ ಗಾಳಿಯ ರಭಸಕ್ಕೆ ಮಕ್ಕಳ ಮೇಲೆ ಬೀಳುವಂತಹ ಪರಿಸ್ಥಿತಿ ಇದ್ದರೂ ಸಹ ಸರತಿ ಸಾಲಿನಲ್ಲಿ ನಿಂತುಕೊಂಡು ಪಡೆಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ನಗರದಲ್ಲಿ ಈ ಹಿಂದೆ ತಹಶೀಲ್ದಾರ್ ಕಚೇರಿ, ಅಂಚೆ ಕಚೇರಿ, ಬಿಎಸ್ಸೆನ್ನೆಲ್ ಕಚೇರಿ ಸೇರಿದಂತೆ, ಇತರೆ ಕಡೆಗಳಲ್ಲಿ ಸಾರ್ವಜನಿಕರು ಆಧಾರ್ ಕಾರ್ಡ್ ಪಡೆಯುವುದಕ್ಕೆ ಸರ್ಕಾರ ಅವಕಾಶ ಮಾಡಿಕೊಟ್ಟಿತ್ತು. ಆದರೆ ಈಗ ಬಿಎಸ್ಸೆನ್ನೆಲ್ ಕಚೇರಿ ಬಳಿ ಇರುವ ಕೇಂದ್ರದಲ್ಲಿ ಕೇವಲ 30 ರಿಂದ 40 ಜನರಿಗೆ ಮಾತ್ರ ಅವಕಾಶ ನೀಡಲಾಗುತ್ತದೆ. ಇನ್ನು ಅಂಚೆ ಕಚೇರಿಯ ಆವರಣದಲ್ಲಿದ್ದ ಕೇಂದ್ರವನ್ನು ಸ್ಥಗಿತಗೊಳಿಸಲಾಗಿದೆ.

ತಹಶೀಲ್ದಾರ್ ಕಚೇರಿ ಆವರಣದಲ್ಲಿ ಇರುವ ಕೇಂದ್ರದಲ್ಲಿ ಬೆಳಗ್ಗೆಯಿಂದ ಸಂಜೆಯವರೆಗೆ ಸುಮಾರು 80-90 ಜನರಿಗೆ ಮಾತ್ರ ಆಧಾರ ಕಾರ್ಡ್ ಮಾಡಲಾಗುತ್ತಿದ್ದು, ನಗರ ಮತ್ತು ಗ್ರಾಮೀಣ ಪ್ರದೇಶ ಸೇರಿದಂತೆ ಎರಡು ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಹೊಂದಿರುವ ತಾಲ್ಲೂಕಿನಲ್ಲಿ ಒಂದೇ ಕೇಂದ್ರದ ಮೂಲಕ ದಾಖಲೆ ಪಡೆದುಕೊಳ್ಳಲು ಹರ ಸಾಹಸ ಪಡುವಂತೆ ಆಗಿದೆ. ಆದ್ದರಿಂದ ಇನ್ನೂ ಹೆಚ್ಚಿನ ಕೇಂದ್ರಗಳನ್ನು ತೆರೆಯುವ ಮೂಲಕ ಅನುಕೂಲ ಮಾಡಿಕೊಡಬೇಕಾಗಿದೆ.

ಈ ಸಂಬಂಧ ಆಗುತ್ತಿರುವ ತೊಂದರೆಗಳ ಬಗ್ಗೆ ತಹಶೀಲ್ದಾರ್ ಗುರುಬಸವರಾಜ್ ಅವರ ಗಮನಕ್ಕೆ ಸಾರ್ವಜನಿಕರು ತಂದಾಗ, ಆಧಾರ ಕೇಂದ್ರದ ನಿರ್ವಹಣೆ ನಮ್ಮ ಕಡೆಯಿಂದ ಆಗುತ್ತಿಲ್ಲ.

ಅಟಲ್ ಜನಸ್ನೇಹಿ ಏಜೆನ್ಸಿಗಳವರು ನಿರ್ವಹಣೆ ಮಾಡುತ್ತಾರೆ. ಹಾಗಾಗಿ ನಾನು ಏನು ಮಾಡಲಿಕ್ಕೆ ಆಗೊಲ್ಲ ಎಂದು ಸಮಜಾಯಿಷಿ ಉತ್ತರ ನೀಡುತ್ತಿರುವುದು ಪೋಷಕರು ಮತ್ತು ವಿದ್ಯಾರ್ಥಿಗಳ ಆಕ್ರೋಶಕ್ಕೆ ಕಾರಣವಾಗಿದೆ.

ತಹಶೀಲ್ದಾರ್ ಕಚೇರಿಯ ಆವರಣದಲ್ಲಿ ರುವಂತಹ ಆಧಾರ ಕೇಂದ್ರದ ಬಳಿ ಪ್ರತಿನಿತ್ಯ ನೂರಾರು ಜನರು ಬರುತ್ತಾರೆ. ಇಲ್ಲಿನ ಕಟ್ಟಡ ಸಂಪೂರ್ಣ ಶಿಥಿಲವಾಗಿದ್ದು, ಮೂಲಭೂತ ಸೌಲಭ್ಯಗಳಿಲ್ಲದೇ ಬಹಳಷ್ಟು ತೊಂದರೆಗಳು ಇರುವುದರಿಂದ ಆಧಾರ ಕೇಂದ್ರವನ್ನು ಬೇರೆ ಕಟ್ಟಡಕ್ಕೆ ರವಾನಿಸುವುದಕ್ಕೆ ಮುಂದಾಗಬೇಕಿದೆ ಎಂದು ಹರಿಹರ ತಾಲ್ಲೂಕು ದಲಿತ ಸಂಘರ್ಷ ಸಮಿತಿ ಸಂಚಾಲಕ ಪಿ.ಜೆ. ಮಹಾಂತೇಶ್ ಒತ್ತಾಯಿಸಿದ್ದಾರೆ.

ನಾವೂ ಸಹ ವಿದ್ಯಾರ್ಥಿಗಳಿಗೆ ತೊಂದರೆ ಆಗಬಾರದು ಎಂಬ ನಿಟ್ಟಿನಲ್ಲಿ ಪ್ರಯತ್ನ ಮಾಡು ತ್ತೇವೆ. ಇಲ್ಲಿನ ಕೇಂದ್ರವನ್ನು ಅಟಲ್ ಜನಸ್ನೇಹಿ ಏಜೆನ್ಸಿಯವರು ನಿರ್ವಹಣೆ ಮಾಡುತ್ತಿದ್ದು, ಕೇಂದ್ರದ ಖರ್ಚು ಹೆಚ್ಚಾಗಿದ್ದು, ಸಿಬ್ಬಂದಿಗಳಿಗೆ ಸಂಬಳದ ಸಮಸ್ಯೆ ಇರುವು ದರಿಂದ ಇದನ್ನು ಮುಚ್ಚಬೇಕು ಎಂದು ತೀರ್ಮಾನ ಮಾಡಿದ್ದಾರೆ ಎನ್ನಲಾಗುತ್ತದೆ ಹಾಗೂ ಇಲ್ಲಿನ ಶಿಥಿಲ ವಾದ ಕಟ್ಟಡದಲ್ಲಿ ಕಳೆದ ಹಲವಾರು ವರ್ಷಗಳಿಂದ ಜನರಿಗೆ ಸೇವೆಯನ್ನು ಒದಗಿಸುತ್ತಾ ಬಂದಿದ್ದು, ಬೇರೆ ಕಟ್ಟಡದಲ್ಲಿ ವ್ಯವಸ್ಥೆ ಮಾಡುವಂತೆ ಅನೇಕ ಬಾರಿ ಅಧಿಕಾ ರಿಗಳಲ್ಲಿ ಮನವಿ ಮಾಡಿದ್ದರೂ ಸಹ ಇದುವರೆಗೂ ಯಾವುದೇ ರೀತಿಯ ಪ್ರಯೋಜನ ಆಗಿರುವುದಿಲ್ಲ ಎಂದು ಆಧಾರ ಕೇಂದ್ರದ ನಿರ್ವಾಹಕ ಚಂದ್ರು ಹೇಳುತ್ತಾರೆ.

# ಗೂಂಡಾ ಪ್ರವೃತ್ತಿ ಹೆಚ್ಚಾಗಿದೆ ಕಾನೂನು ವ್ಯವಸ್ಥೆ ಹದಗೆಟ್ಟಿದೆ

### ಸರ್ಕಾರಕ್ಕೆ ಬಿಜೆಪಿ ಮುಖಂಡರಿಂದ ತೀವ್ರ ತರಾಟೆ

ಬೆಂಗಳೂರು, ಮೇ 28 - ಹಾದಿ ಬೀದಿಯಲ್ಲಿ ರಂಪಾಟಗಳು, ಗೂಂಡಾ ಪ್ರವೃತ್ತಿ ಹೆಚ್ಚಾಗಿ ರಾಜ್ಯದ ಕಾನೂನು ಸುವ್ಯವಸ್ಥೆ ಪೂರ್ಣವಾಗಿ ಹದಗೆಟ್ಟಿದೆ ಎಂದು ಬಿಜೆಪಿಯ ಮುಖಂಡರು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ನಗರದ ಸ್ವಾತಂತ್ರ್ಯ ಉದ್ಯಾನವನದ ಬಳಿ ಹಮ್ಮಿಕೊಳ್ಳಲಾಗಿದ್ದ ಬೃಹತ್ ಪ್ರತಿಭಟನೆಯಲ್ಲಿ ಮಾತನಾಡಿದ ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ, ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್, ಮಾಜಿ ಉಪಮುಖ್ಯಮಂತ್ರಿ ಅಶ್ವತ್ಥನಾರಾಯಣ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಗೂಂಡಾಗಳ ರಾಜ್ಯವಾಗಿ ಕರ್ನಾಟಕ ಮಾರ್ಪಾಡಾಗುತ್ತಿದೆ. ಹೆಣ್ಣು ಮಕ್ಕಳು ಧೈರ್ಯವಾಗಿ ಮನೆಯಿಂದ ಹೊರಬರುವ ಪರಿಸ್ಥಿತಿ ಇಲ್ಲ. ಸಾರ್ವಜನಿಕವಾಗಿಯೇ ರೌಡಿಗಳು ಬೀದಿಯಲ್ಲಿ ಕಾಳಗ ಮಾಡುತ್ತಾರೆ. ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿದಿದೆ, ಸರ್ಕಾರ ಇತ್ತ ಗಮನವೇ ಹರಿಸಿಲ್ಲ ಎಂದು ಆರೋಪಿಸಿದರು.

ಒಂದೆಡೆ ಕಾನೂನು ಸುವ್ಯವಸ್ಥೆ ಕುಸಿದರೆ, ಮತ್ತೊಂದೆಡೆ ಅಭಿವೃದ್ಧಿ ಮಾಡದೆ, ಖಜಾನೆ ಲೂಟಿ ಮಾಡುವ ಕೆಲಸಕ್ಕೆ ಅಧಿಕಾರಸ್ಥರು ಕೈಹಾಕಿದ್ದಾರೆ. ಕರ್ನಾಟಕದ ಇತಿಹಾಸದಲ್ಲೇ ಒಬ್ಬ ಅಧಿಕಾರಿ ಲೂಟಿ ಆರೋಪವನ್ನು ಸಹಿಸಲಾಗದೇ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಹಣಕಾಸು ಇಲಾಖೆ ಹೊಣೆ ಹೊತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಇದಕ್ಕೆ ನೇರ ಹೊಣೆ ಆಗುತ್ತಾರೆ ಎಂದು ಆರೋಪಿಸಿದರು.

ನಾವು ಅಧಿಕಾರದಲ್ಲಿ ಇದ್ದಾಗ 40% ಸರ್ಕಾರ, ಪೇ ಸಿಎಂ ಎಂದು ಹಾದಿ ಬೀದಿಯಲ್ಲಿ ಬೊಬ್ಬೆ ಹೊಡೆಯುತ್ತಿದ್ದರು, ಈಗ ನಾವು ಇವರಿಗೆ ಏನೆನ್ನಬೇಕು? ಎಂದು ಪ್ರಶ್ನಿಸಿದರು.

ಅಭಿವೃದ್ಧಿ ಮಾಡದೆ ಇಲಾಖಾ ಹಣವನ್ನು ಬೇರೆ ಬೇರೆ ಖಾತೆಗಳಿಗೆ ವರ್ಗಾಯಿಸಿಕೊಂಡು ದೋಚುವ ದಂಧೆ ನಡೆದಿದೆ. ಇದಕ್ಕೆ ಎಂತಹ ಸಿಎಂ ಎನ್ನಬೇಕು?

ಪಂಚ ಗ್ಯಾರಂಟಿಗಳ ಹೆಸರಿನಲ್ಲಿ ಅಭಿವೃದ್ಧಿ ಕಾರ್ಯ ಸಂಪೂರ್ಣ ಸ್ಥಗಿತಗೊಂಡಿದೆ. ರಾಜ್ಯದ ಯಾವುದೇ ಭಾಗದಲ್ಲಿನ ರಸ್ತೆ ಗುಂಡಿ ಮುಚ್ಚಲೂ ಇವರಲ್ಲಿ ಹಣವಿಲ್ಲ ಎಂದು ಟೀಕಿಸಿದರು.

ಯಾವುದೇ ಅಭಿವೃದ್ಧಿ ಕಾರ್ಯ ಮಾಡಿ ಕೈಬಿಸಿ ಮಾಡಿಕೊಳ್ಳಲು ಆಗದೆ, ನಿಗಮ-ಮಂಡಳಿಗಳಲ್ಲಿನ ಹಣವನ್ನೇ ವರ್ಗಾವಣೆ ಮಾಡಿಕೊಂಡು ದೋಚುವ ಕೆಲಸ ನಡೆದಿದೆ ಎಂದರು.

ಬ್ರ್ಯಾಂಡ್ ಬೆಂಗಳೂರು ಮಾಡುವುದಾಗಿ ಉಪಮುಖ್ಯಮಂತ್ರಿ ಡಿ. ಕೆ.ಶಿವಕುಮಾರ್ ಹೇಳಿ ಒಂದು ವರ್ಷವಾದರೂ ಒಂದು ರೂಪಾಯಿಯನ್ನೂ ಬೆಂಗಳೂರಿಗೆ ಬಿಡುಗಡೆ ಮಾಡಿಲ್ಲ. ರಾಜ್ಯದ ಶೇ. 60 ರಿಂದ 65ರಷ್ಟು ತೆರಿಗೆ ಬೆಂಗಳೂರಿನಿಂದ ಸಂಗ್ರಹವಾಗುತ್ತಿದೆ. ಸಿದ್ದರಾಮಯ್ಯ 'ನಮ್ಮ ತೆರಿಗೆ ನಮ್ಮ ಹಕ್ಕು' ಎಂದು ದೆಹಲಿಯಲ್ಲಿ ಪ್ರತಿಭಟನೆ ಮಾಡಿದ್ದರು, ಈಗ ಬೆಂಗಳೂರಿನ ಜನತೆ 'ಬೆಂಗಳೂರಿನ ತೆರಿಗೆ ಬೆಂಗಳೂರಿಗರ ಹಕ್ಕು' ಎಂದು ಹೋರಾಟ ಮಾಡುವಂತಾಗಿದೆ ಎಂದರು.

ಮಳೆಗಾಲ ಆರಂಭವಾಗುವಾಗಲೇ ರಸ್ತೆಗಳಲ್ಲಿ ಹೊಂಡ ಗುಂಡಿಗಳಾಗಿದೆ, ಎಲ್ಲೆಡೆ ಕಸದ ರಾಶಿ ಬಿದ್ದಿದೆ, ಕಸ ಎತ್ತುವವರಿಗೆ ಜನವರಿಯಿಂದ ಸಂಬಳ ಕೊಟ್ಟಿಲ್ಲ. ಒಣಗಿದ ಮರಗಳನ್ನು ತೆರವುಗೊಳಿಸಲು ಇತ್ತೀಚಿಗೆ ಮುಖ್ಯಮಂತ್ರಿ ಸೂಚಿಸಿದ್ದರು. ಒಂದಾದರೂ ಮರ ತೆರವಾಗಿದ್ದರೆ ತೋರಿಸಿ ಎಂದು ಸವಾಲು ಹಾಕಿದರು.

ಇದು ಅತ್ಯಂತ ಕೆಟ್ಟ-ಭ್ರಷ್ಟ ಸರ್ಕಾರ, ಗುತ್ತಿಗೆದಾರರ ರಕ್ತ ಹೀರುವ ಸರ್ಕಾರ ಎಂದು ಟೀಕಿಸಿದರು.

# ಪ್ಯಾಲೆಸ್ತೇನ್‌ಗೆ ಮಾನ್ಯತೆ ನೀಡಿದ ಮೂರು ಯುರೋಪ್ ದೇಶಗಳು

### ಸ್ಪೇನ್, ನಾರ್ವೆ, ಐರ್‌ಲ್ಯಾಂಡ್ ನಿರ್ಧಾರದಿಂದ ಇಸ್ರೇಲ್ ಮೇಲೆ ರಾಯಭಾರಿ ಒತ್ತಡ

ಬಾರ್ಸಿಲೋನಾ, ಮೇ 28 – ಪ್ಯಾಲೆಸ್ತೇನ್ ಪ್ರತ್ಯೇಕ ದೇಶ ಎಂದು ಅಧಿಕೃತ ಮಾನ್ಯತೆ ನೀಡುವುದಾಗಿ ಸ್ಪೇನ್, ನಾರ್ವೆ ಹಾಗೂ ಐರ್‌ಲ್ಯಾಂಡ್‌ಗಳು ಘೋಷಿಸಿವೆ.

ಈ ಘೋಷಣೆಯಿಂದ ಇಸ್ರೇಲ್ ಹಾಗೂ ಹಮಾಸ್ ನಡುವೆ ನಡೆಯುತ್ತಿರುವ ಸಂಘರ್ಷದ ಮೇಲೆ ಸದ್ಯಕ್ಕೆ ಯಾವುದೇ ಪರಿಣಾಮ ಬೀರುವುದಿಲ್ಲ. ಆದರೆ, ಇಸ್ರೇಲ್ ಮೇಲೆ ಸಮರ ನಿಲ್ಲಿಸುವ ಒತ್ತಡಗಳು ಹೆಚ್ಚಾಗಲಿವೆ.

ಮ್ಯಾಡ್ರಿಡ್‌ನಲ್ಲಿ ಮಾತನಾಡಿರುವ ಸ್ಪೇನ್ ಪ್ರಧಾನ ಮಂತ್ರಿ ಪೆಡ್ರೋ ಸ್ಯಾಂಚೆಜ್, ಇಸ್ರೇಲ್ ಹಾಗೂ ಪ್ಯಾಲೆಸ್ತೇನ್ ಜನತೆ ಶಾಂತಿ ಸಾಧಿಸಲು ನೆರವಾಗುವ ಸಲುವಾಗಿ ಈ ಐತಿಹಾಸಿಕ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದಿದ್ದಾರೆ.

ಐರ್‌ಲ್ಯಾಂಡ್ ಹಾಗೂ ನಾರ್ವೆಗಳು ನಂತರದಲ್ಲಿ ಇದೇ ರೀತಿಯ ನಿರ್ಧಾರಗಳನ್ನು ಘೋಷಿಸಿವೆ.

ಈ ನಿರ್ಧಾರವನ್ನು ಟೀಕಿಸಿರುವ ಇಸ್ರೇಲ್ ವಿದೇಶಾಂಗ ಸಚಿವ ಕಾಟ್ಜ್, ಯಹೂದಿಗಳ ನರಮೇಧ ಹಾಗೂ ಯಹೂದಿಗಳ ವಿರುದ್ಧದ ಸಮರ ಅಪರಾಧಗಳಿಗೆ ಸ್ಪೇನ್ ಸರ್ಕಾರ ಬೆಂಬಲ ನೀಡುತ್ತಿದೆ ಎಂದಿದ್ದಾರೆ.

ಐರ್‌ಲೆಂಡ್‌ನ ಸಂಸತ್ತು ಇರುವ ಲೀನ್‌ಸ್ಟರ್ ಹೌಸ್‌ನ ಹೊರಗೆ ಪ್ಯಾಲೆಸ್ತೇನ್ ಬಾವುಟ ಹಾರಿಸಲಾಯಿತು.

ವಿಶ್ವದ 140ರಷ್ಟು ದೇಶಗಳು ಪ್ಯಾಲೆಸ್ತೇನ್‌ಗೆ ಮಾನ್ಯತೆ ನೀಡಿವೆ. ಇದು ವಿಶ್ವಸಂಸ್ಥೆಯ ಒಟ್ಟು ಸದಸ್ಯ ದೇಶಗಳ ಮೂರನೇ ಎರಡರಷ್ಟಾಗಿದೆ. ಆದರೆ, ಪಶ್ಚಿಮದ ಯಾವುದೇ ಪ್ರಮುಖ ದೇಶಗಳು ಇದುವರೆಗೂ ಮಾನ್ಯತೆ ನೀಡಿರಲಿಲ್ಲ. ಈಗ ಯುರೋಪ್ ದೇಶಗಳು ಮಾನ್ಯತೆ ನೀಡಿರುವುದರಿಂದ, ಫ್ರಾನ್ಸ್ ಹಾಗೂ ಜರ್ಮನಿಗಳು ತಮ್ಮ ನಿಲುವು ಮರು ಪರಿಶೀಲಿಸಬೇಕೆಂಬ ಒತ್ತಡ ಬರಲಿದೆ.

ಗಾಜಾದ ರಫಾ ನಗರದ ಮೇಲೆ ಇಸ್ರೇಲ್ ತೀವ್ರ ದಾಳಿ ನಡೆಸುತ್ತಿರುವುದು ಯುರೋಪ್ ದೇಶಗಳ ಆಕ್ಷೇಪಕ್ಕೆ ಕಾರಣವಾಗಿದೆ. ಇದರಿಂದಾಗಿ ಯುರೋಪ್ ಹಾಗೂ ಇಸ್ರೇಲ್ ನಡುವಿನ ರಾಯಭಾರಿ ಸಂಬಂಧದ ಮೇಲೆ ಪರಿಣಾಮವಾಗಿದೆ.

ಯುರೋಪ್ ಒಕ್ಕೂಟದ ಸಭೆಯಲ್ಲಿ ಇಸ್ರೇಲ್ ಮೇಲೆ ನಿರ್ಬಂಧ ಹೇರುವ ಬಗ್ಗೆ ಮಹತ್ವದ ಚರ್ಚೆ ನಡೆದಿದೆ. ಇಸ್ರೇಲ್ ಮೇಲೆ ಆರ್ಥಿಕ ದಿಗ್ಬಂಧನ ಹೇರುವ ಬಗ್ಗೆ ಯುರೋಪ್ ಒಕ್ಕೂಟ ಪರಿಗಣಿಸಬೇಕು ಎಂದು ಐರ್‌ಲ್ಯಾಂಡ್ ವಿದೇಶಾಂಗ ಸಚಿವ ಮೈಖೆಲ್ ಮಾರ್ಟಿನ್ ಹೇಳಿದ್ದಾರೆ.

ಇಸ್ರೇಲ್ ಪ್ರಧಾನ ಮಂತ್ರಿ ಬೆಂಜಮಿನ್ ನೇತನ್ಯಾಹು ಹಾಗೂ ಹಮಾಸ್ ಉಗ್ರವಾದಿ ಸಂಘಟನೆಯ ನಾಯಕರ ವಿರುದ್ಧ ಬಂಧನದ ವಾರಂಟ್ ಹೊರಡಿಸಬೇಕು ಎಂದು ಅಂತರರಾಷ್ಟ್ರೀಯ ಅಪರಾಧಗಳ ನ್ಯಾಯಾಲಯದಲ್ಲಿ ವಾದ ಮಂಡಿಸಲಾಗಿದೆ. ಈ ವಾದಕ್ಕೆ ಯುರೋಪ್ ಒಕ್ಕೂಟದ ವಿದೇಶಾಂಗ ನೀತಿಗಳ ಮುಖ್ಯಸ್ಥ ಜೋಸೆಫ್ ಬೊರೆಲ್ ಬೆಂಬಲಿಸಿದ್ದಾರೆ.

ಅಕ್ಟೋಬರ್ 7ರಂದು ಇಸ್ರೇಲ್ ಮೇಲೆ ಹಮಾಸ್ ಉಗ್ರರು ದಾಳಿ ನಡೆಸಿ 1,200ಕ್ಕೂ ಹೆಚ್ಚು ಜನರನ್ನು ಹತ್ಯೆಗೈದಿದ್ದರು. 250 ಜನರನ್ನು ಒತ್ತೆಯಾಳುಗಳಾಗಿಟ್ಟುಕೊಂಡಿದ್ದರು. ನಂತರ ಇಸ್ರೇಲ್ ನಡೆಸಿದ ದಾಳಿಯಲ್ಲಿ 36 ಸಾವಿರ ಜನ ಸಾವನ್ನಪ್ಪಿರುವುದಾಗಿ ಗಾಜಾದ ಆರೋಗ್ಯ ಸಚಿವಾಲಯ ಹೇಳಿದೆ. ಆದರೆ, ಇವರಲ್ಲಿ ನಾಗರಿಕರು ಹಾಗೂ ಹೋರಾಟಗಾರರ ಸಂಖ್ಯೆ ಸ್ಪಷ್ಟವಾಗಿಲ್ಲ.

ಅಮೆರಿಕ ಹಾಗೂ ಬ್ರಿಟನ್ ಸೇರಿದಂತೆ ಹಲವು ದೇಶಗಳು ಸ್ವತಂತ್ರ ಪ್ಯಾಲೆಸ್ತೇನ್ ವಿಚಾರಕ್ಕೆ ಬೆಂಬಲಿಸುತ್ತಿವೆ. ಆದರೆ, ಈ ವಿಷಯ ಸಂಧಾನದ ಮೂಲಕ ಇತ್ಯರ್ಥವಾಗಬೇಕು ಎಂದು ಈ ದೇಶಗಳು ಪ್ರತಿಪಾದಿಸುತ್ತಿವೆ.

# ಪ್ಯಾನ್ ಕಾರ್ಡ್ - ಆಧಾರ್ ಕಾರ್ಡ್ ಜೋಡಣೆಗೆ ಸೂಚನೆ

**(1ನೇ ಪುಟದಿಂದ)** ಪಟ್ಟು ದರದಲ್ಲಿ ಟಿ.ಡಿ.ಎಸ್. ಕಡಿತಗೊಳಿಸಲಾಗುತ್ತದೆ. ಮೇ 31ರ ಒಳಗೆ ಜೋಡಣೆ ಮಾಡಿದ್ದಲ್ಲಿ ಟಿ.ಡಿ.ಎಸ್. ಕಡಿತಗೊಳಿಸುವ ಕ್ರಮ ತೆಗೆದುಕೊಳ್ಳುವುದಿಲ್ಲ ಎಂದು ಆದಾಯ ತೆರಿಗೆ ಇಲಾಖೆ ಕಳೆದ ತಿಂಗಳು ಸುತ್ತೋಲೆ ಹೊರಡಿಸಿತ್ತು.

# ರೈತರಿಂದ ವಿಚಾರವಂತಿಕೆಯ ಹೋರಾಟ ಅಗತ್ಯ

**(1ನೇ ಪುಟದಿಂದ)** ಗೆಲ್ಲಿಸಿ, ನಮಗೆ ಒಳ್ಳೆಯದಾ ಗುತ್ತದೆ ಎಂಬ ನಿರೀಕ್ಷೆ ಇಟ್ಟುಕೊಳ್ಳುವುದು ತಪ್ಪಾಗುತ್ತದೆ. ಇದರ ಬಗ್ಗೆ ರೈತರು ಗಂಭೀರ ವಾಗಿ ಚಿಂತಿಸುವ ಅಗತ್ಯವಿದೆ ಎಂದರು.

ರೈತರು ಸಂಘಟಿತರಾಗಿ ಹೋರಾಟ ನಡೆಸಿದಾಗ ಮಾತ್ರ ತಮ್ಮ ಬೇಡಿಕೆಗಳನ್ನು ಈಡೇರಿಸಲು ಹಾಗೂ ಅಭಿವೃದ್ಧಿ ಕಾಣಲು ಸಾಧ್ಯ ಎಂದು ಶಾಂತಕುಮಾರ್ ಹೇಳಿದರು.

80ರ ದಶಕದಲ್ಲಿ ರೈತರು ಪೊಲೀಸರಿಗೆ, ಗ್ರಾಮ ಲೆಕ್ಕಾಧಿಕಾರಿಗಳಿಗೆ, ಬ್ಯಾಂಕ್ ಅಧಿಕಾರಿಗಳಿಗೆ ಹೆದರುತ್ತಿದ್ದರು. ಸೊಸೈಟಿಯಲ್ಲಿ ಪಡೆದ ಸಾಲ ವಸೂಲಿಗೆ ಬಂದಾಗ ಮನೆ ಬಿಟ್ಟು ಹೋಡಿ ಹೋಗುತ್ತಿದ್ದ ಕಾಲವದು.

ಆದರೆ ಈಗ ಅಂತಹ ಪರಿಸ್ಥಿತಿ ಇಲ್ಲ. ಕಾಲ ಬದಲಾಗಿದೆ. ಅಧಿಕಾರಿಗಳನ್ನು ಧೈರ್ಯವಾಗಿ ಪ್ರಶ್ನಿಸಿ ನ್ಯಾಯ ಕೇಳುವ ಹಂತದಲ್ಲಿ ರೈತರಿದ್ದಾರೆ. ಇದಕ್ಕೆ ಕಾರಣ ಪ್ರೊ. ನಂಜುಂಡಸ್ವಾಮಿ ಅವರು. ಅವರು ತಮ್ಮ ಕಾನೂನು ಪಾಂಡಿತ್ಯವನ್ನು ಧಾರೆ ಎರೆದು, ರೈತರಿಗಾಗಿ ಶ್ರಮಿಸಿದರು.

ವೈಯಕ್ತಿಕವಾಗಿ ಯಾವುದೇ ಆಸ್ತಿ ಮಾಡದೆ, ಸಂಘಟನೆಗಾಗಿ ಶ್ರಮಿಸಿದ್ದರು. ಈ ಕಾರಣದಿಂದಾಗಿಯೇ ಇಂದು ರೈತರು ತಮಗೆ ಅನ್ಯಾಯವಾದರೆ ಧೈರ್ಯವಾಗಿ ಪ್ರಶ್ನಿಸುತ್ತಿದ್ದಾರೆ ಎಂದರು.

ರಾಜ್ಯದಲ್ಲಿ ನೂರಾರು ರೈತ ಸಂಘಟನೆಗಳಿವೆ. ಒಂದೊಂದು ಜಿಲ್ಲೆಯಲ್ಲೂ ಐದಾರು ರೈತ ಸಂಘಟನೆಗಳಿವೆ. ರೈತರು ಒಗ್ಗಟ್ಟಾದರೆ ತಮಗೆ ಕಷ್ಟ ಎಂದು ರಾಜಕಾರಣಿಗಳು ಸಂಘಟನೆಗಳನ್ನು ಒಡೆಯುವಲ್ಲಿ ಸಫಲರಾದರು. ಆದರೆ ಮುಂದೆಯೂ ಸಂಘಟನೆಗಳು ಒಗ್ಗಟ್ಟಾಗದಿದ್ದರೆ ತೀವ್ರ ಸಂಕಷ್ಟ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಒಕ್ಕೂಟದ ರಾಜ್ಯ ಕಾರ್ಯದರ್ಶಿ ಬಲ್ಲೂರು ರವಿಕುಮಾರ್ ಮಾತನಾಡಿ, ಹಲವಾರು ಜಿಲ್ಲೆಗಳಲ್ಲಿ ಬಗರ್ ಹುಕ್ಕುಂ, ಬರ ಪರಿಹಾರ ತಾರತಮ್ಯದ ಸಮಸ್ಯೆಗಳಿವೆ. ಪಂಪ್‌ಸೆಟ್ ಆಧಾರಿತ ಬೆಳೆಗಳಿಗೆ, ನೀರಾವರಿ ಹಾಗೂ ವರ್ಷಧ ಬೆಳೆಗಳಿಗೆ ಪರಿಹಾರ ನೀಡಿಲ್ಲ. ಇಲ್ಲಿವರೆಗೆ 25 ಲಕ್ಷ ರೈತರಿಗೆ ಮಾತ್ರ ಪರಿಹಾರ ಸಿಕ್ಕಿದೆ. 30 ಲಕ್ಷ ರೈತರು ಪರಿಹಾರ ವಂಚಿತರಾಗಿದ್ದಾರೆ. ಆದರೆ ಅಧಿಕಾರಿಗಳು ಮಾನದಂಡದ ಸಬೂಬು ಹೇಳುತ್ತಿದ್ದಾರೆ ಎಂದರು.

ರಾಜ್ಯಾದ್ಯಂತ ಜಿಲ್ಲಾವಾರು ಸಮಸ್ಯೆಗಳನ್ನು ಅರಿಯಬೇಕಿದೆ. ಈ ಹಿನ್ನೆಲೆಯಲ್ಲಿ ಬೇರೆ ಜಿಲ್ಲೆಗಳಿಗೆ ಬಂದಾಗ ರೈತರು ಸಹಕರಿಸಿ, ಸ್ಥಳೀಯ ಸಮಸ್ಯೆಗಳನ್ನು ತಿಳಿಸಬೇಕು ಎಂದರು.





ರೈತ ಸಂಘಟನೆಗಳಲ್ಲಿ ಶ್ರಮಿಸಿದ ಚಿಕ್ಕನಹಳ್ಳಿ ರೇವಣಸಿದ್ದಪ್ಪ, ಆವರಗೆರೆ ಬಸವರಾಜಪ್ಪ ಹಾಗೂ ರೈತ ಸಂಘದ ಕಾನೂನು ಸಲಹೆಗಾರ ಎಲ್.ಹೆಚ್. ಅರುಣ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಇದೇ ವೇಳೆ ಹಲವಾರು ವರ್ಷ ರೈತ ಸಂಘಟನೆಗಳಲ್ಲಿ ಶ್ರಮಿಸಿದ ಚಿಕ್ಕನಹಳ್ಳಿ ರೇವಣಸಿದ್ದಪ್ಪ, ಆವರಗೆರೆ ಬಸವರಾಜಪ್ಪ ಹಾಗೂ ರೈತ ಸಂಘದ ಕಾನೂನು ಸಲಹೆಗಾರ ಎಲ್.ಹೆಚ್. ಅರುಣ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ನ್ಯಾಮತಿಯ ಕರಿಬಸಪ್ಪಗೌಡ ಅವರನ್ನು ಹಸಿರು ಸೇನೆ ರಾಜ್ಯಾಧ್ಯಕ್ಷ ರನ್ನಾಗಿ ಘೋಷಿಸಲಾಯಿತು. ರೈತ ಮುಖಂಡರಾದ ಮಾಧುವ ರೆಡ್ಡಿ, ಚನ್ನಪ್ಪ ಪೂಜಾರ್, ಪ್ರಸಾದ್ ರಾಜಯೋಗಿ, ತಿರುಮಲೇಶ್, ಅಶೋಕ್ ಮಾಯಕೊಂಡ, ಅಣಬೇರು ಕುಮಾರ ಸ್ವಾಮಿ, ಬಾಡ ಹನುಮಂತಪ್ಪ, ಶಿವಮೂರ್ತಪ್ಪ, ಬಸವರಾಜಪ್ಪ ಹರಿಹರ, ಉಮೇಶ್ ನ್ಯಾಮತಿ, ಲೋಕೇಶ್ ಗೌಡ್ರು, ರಾಂಪುರದ ಬಸವರಾಜ್ ಇತರರು ಸಭೆಯಲ್ಲಿದ್ದರು.


**ದಾಖಲೆಗಳು ಕಳೆದಿವೆ**
ದಿನಾಂಕ 2023ರ ಜುಲೈ 13ರಂದು ಮಧ್ಯಾಹ್ನ 2.30ರ ಸಮಯದಲ್ಲಿ ದಾವಣಗೆರೆ ಸಬ್ ರಿಜಿಸ್ಟ್ರಾರ್ ಕಚೇರಿ ಬಳಿ ಜೆರಾಕ್ಸ್ ಮಾಡಿಸುವಾಗ ಹೆಚ್.ಎಸ್. ಸವಿತ, ಕನಕನಗರ, ಭದ್ರಾವತಿ ಇವರಿಗೆ ಸಂಬಂಧಿಸಿದ ನಿವೇಶನದ ಮೂಲ ದಾಖಲಾತಿಗಳಾದ ದಾನಪತ್ರ, ನೋಂದಣಿ ಪತ್ರ, ಆರ್‌ಸಿ, ಇ -ಸ್ವತ್ತು ದಾಖಲೆಗಳು (Reg.no. 14730/2017-18 CD NO.DVGD 469 Date 16.12.2017) ಕಳೆದಿರುತ್ತವೆ. ಯಾರಿಗಾದರೂ ಸಿಕ್ಕಲ್ಲಿ ತಲುಪಿಸುವಂತೆ ಕೋರಿದೆ.
ಮೊ.: 9972459636

**ಮನೆಗಳು ಬಾಡಿಗೆಗೆ ಇವೆ**
ದಾವಣಗೆರೆ ಆಂಜನೇಯ ಬಡಾವಣೆ, ಹೇಮಾವತಿ ಹಾಸ್ಟೆಲ್ ಹಿಂಭಾಗದ ಕಾರ್ನರ್ ಬಿಲ್ಡಿಂಗ್‌ನಲ್ಲಿ 2 BHK ಮನೆಗಳು ಬಾಡಿಗೆಗೆ ಇವೆ. ಸಂಪರ್ಕಿಸಿ :
94483 92975
99866 18266

**ಸೈಟುಗಳು ಮಾರಾಟಕ್ಕಿವೆ**
ಬನಂಶಕರಿ ಬಡಾವಣೆ, ಡಾಲರ್ಸ್ ಕಾಲೋನಿ, ಶಿವಪಾರ್ವತಿ ಗ್ಲಾಸ್ ಹೌಸ್ ಲೇಔಟ್, ಗೀತಂ ಕಾಲೇಜ್ ಹತ್ತಿರ, ಜೆ.ಹೆಚ್. ಪಟೇಲ್ ಬಡಾವಣೆ, ಹೈಟೆಕ್ ಹಿಂಭಾಗ, ಎರಗುಂಟೆ ಇನ್ವೆಸ್ಟ್ ಸೈಟ್ಸ್, ಉತ್ತಮ ದರದಲ್ಲಿ ದೊರೆಯುತ್ತವೆ. 30x40, 40x50, 40x60, 30x50 ಎಲ್ಲಾ ಅಳತೆಯ ಸೈಟ್‌ಗಳಿವೆ.
97315 12365

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಮಳಿಗೆ ಮಾರಾಟಕ್ಕೆ ಇದೆ**
ಡೋ.ನಂ. 80/6, ರೇಣುಕಾ ಮಂದಿರದ ಎದುರು, ಎವಿಕೆ ಕಾಲೇಜು ರಸ್ತೆ, ಪಿ.ಜೆ. ಬಡಾವಣೆ, 2ನೇ ಮುಖ್ಯರಸ್ತೆಯಲ್ಲಿ ಗ್ರೌಂಡ್ ಫ್ಲೋರ್ ಹಾಗೂ ಫಸ್ಟ್ ಫ್ಲೋರ್‌ನಲ್ಲಿ ಒಟ್ಟು 650 ಚದುರಡಿ ಇರುವ ಮಳಿಗೆ ಮಾರಾಟಕ್ಕೆ ಇದೆ.
93422 96777

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್‌ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ.
ಭೇಟಿ ಸಮಯ : ಸಂಜೆ 6.30 ರ ನಂತರ
ಶ್ರೀ ಗುರು ಎಂಟರ್‌ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ. ಜೆ. ಬಡಾವಣೆ ದಾವಣಗೆರೆ.

**ಸೈಟ್ ಮಾರಾಟಕ್ಕಿದೆ**
1) 30x48 (ಪಶ್ಚಿಮ) ಮಹಾಲಕ್ಷ್ಮಿ ಲೇಔಟ್
2) 30x45 (ಪಶ್ಚಿಮ) ಶಿವಕುಮಾರ ಬಡಾವಣೆ
3) 35x45 (ದಕ್ಷಿಣ) ಆಂಜನೇಯ ಬಡಾವಣೆ
4) 30x40 (ಪಶ್ಚಿಮ) ಸರಸ್ವತಿ ಬಡಾವಣೆ
5) 30x52 (ದಕ್ಷಿಣ) ವಿವೇಕಾನಂದ ಬಡಾವಣೆ
95385 65909

**Property Hub**
• EC
• E-swathu
• Building Licence
• Khatha Change
96118 66449

**WANTED**
Required Male Office Assistant
ANDANUR CHITS (R)
Ram & Co. Circle, Davanagere.

**ಬೇಕಾಗಿದ್ದಾರೆ**
ಹೋಲ್ ಸೇಲ್ ಅಂಗಡಿಯಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ.
ಸಂಪರ್ಕಿಸಿ:
72596 35931

**FOR RENT**
1) Ground floor - 2300 Sq.ft.
2) Cellar - 650 Sq.ft.
Commercial Space Available for rent in P.B Road Near DC Office.
81528 82277

**ಸೈಟುಗಳು ಮಾರಾಟಕ್ಕಿವೆ**
ಹರಿಹರ ಕೆ.ಹೆಚ್.ಬಿ. ಕಾಲೋನಿ, ಅಮರಾವತಿ ಹೌಸಿಂಗ್ ಕಾಲೋನಿ ಪಕ್ಕದಲ್ಲಿ 30x40 ಅಳತೆಯ 5 ಸೈಟುಗಳು ನೇರವಾಗಿ ಮಾರಾಟಕ್ಕಿವೆ.
98809-33630

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಶಿಕ್ಷಕಿಯರು ಬೇಕಾಗಿದ್ದಾರೆ**
D.Ed, BA, B.Ed, B.Sc, B.Ed, ಆಗಿರುವ ಶಿಕ್ಷಕಿಯರು ಬೇಕಾಗಿದ್ದಾರೆ. ಆಸಕ್ತರು ಈ ಕೆಳಕಂಡ ವಿಳಾಸದಲ್ಲಿ ಸಂಪರ್ಕಿಸಿ :
ಶ್ರೀ ಶ್ರೀನಿವಾಸ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ ಬಸಾಪುರ, ಬಂಬೂ ಬಜಾರ್ ರಸ್ತೆ, ದಾವಣಗೆರೆ.
78994 79966, 99453 24288

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ಬೇಕಾಗಿದ್ದಾರೆ**
ರಿಸೆಪ್ಷನಿಸ್ಟ್ ಹಾಗೂ ಅಕೌಂಟೆಂಟ್ ಕೆಲಸಕ್ಕೆ ಬೇಕಾಗಿದ್ದಾರೆ.
ವಿದ್ಯಾರ್ಹತೆ : PUC ಪಾಸಾಗಿರಬೇಕು.
88843 22266

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**Change of Name**
I **PAVITRA ANNAPPA DAIVAJNA** Resident OF # 67/3, 1st floor, "Sri Sogi Veerabhadreshwara Nilaya" Muddalli Thota, Near Deepak Badminton Academy, P.J. Extension, Davangere-577 006. I have Changed my name as. **PAVITRA GURUPRASAD SHET** Vide affidavit Dated 28.05.2024 sworn before Kalyanamma M.K. Notary Davangere City. In future all my dealings & transactions will be in my new name
Sd/- PAVITRA GURUPRASAD SHET

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಶಂಕರಲೀಲಾ ಫ್ಯುಯಲ್ ಸ್ಟೇಷನ್
ಆವರಗೆರೆ, ಜೈನ್ ಟೆಂಪಲ್ ಪಕ್ಕ, ದಾವಣಗೆರೆ.
90190 94446

**ಸೈಟು ಮಾರಾಟಕ್ಕಿವೆ**
30x40, 30x40 - ಚಿಗಟೇರಿ ಲೇಔಟ್
40x60 - ಎಸ್.ಎಸ್. ಲೇಔಟ್
30x50, 30x50 - ವಾಜಪೇಯಿ ಲೇಔಟ್
40x50 - ಡಾಲರ್ಸ್ ಕಾಲೋನಿ
40x60 - ಎಸ್.ಎಸ್. ಲೇಔಟ್
31x38, 17x60 - ಕಮರ್ಷಿಯಲ್ ಸೈಟ್
ಫೋನ್ : 99643 16777

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ.
ಬೆಳಿಗ್ಗೆ 11 ರಿಂದ ಸಂಜೆ 8ರ ಒಳಗೆ ಫೋನ್ ಮಾಡಿ ಸಂಪರ್ಕಿಸಿ:
91640 54547

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ.
ಸ್ಥಳ : ದೊಡ್ಡಬಾತಿ
88920 08800

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್ ಮತ್ತು ಆಯಾ ಬೇಕಾಗಿದ್ದಾರೆ.
ಸಂಪರ್ಕಿಸಿ : ಸಿ.ಜಿ.ಆಸ್ಪತ್ರೆ ಹಿಂಭಾಗ, ದಾವಣಗೆರೆ.
98450-35710, 77607-39990

**HIRING DIPLOMA**
Mechanical Engineers with 2 years Experience.
watsapp
74834 21094

**ಮೆಡಿಕಲ್ ಸ್ಟೋರ್ಸ್ ಮಾರಾಟಕ್ಕಿದೆ**
ದಾವಣಗೆರೆ ನಗರದ ನಿಟ್ಟುವಳ್ಳಿಯ ಡಿಸಿಎಂ ಲೈನ್‌ನಲ್ಲಿ, ಆರ್.ವಿ.ಕೆ ಶಾಲೆಯ ಎದುರುಗಡೆ ಇರುವ ಶ್ರೀ ಲಕ್ಷ್ಮೀ ವೆಂಕಟೇಶ್ವರ ಮೆಡಿಕಲ್ ಮತ್ತು ಜನರಲ್ ಸ್ಟೋರ್ಸ್ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ
8296172257, 8671814992

**ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ**
No. 1 ವಶೀಕರಣ ಸ್ಪೆಷಲಿಸ್ಟ್
ನೀವು ಇಷ್ಟಪಟ್ಟವರು ನಿಮ್ಮಂತಾಗಲು, ಮದುವೆ ವಿಳಂಬ, ದಾಂಪತ್ಯ ಸ್ತ್ರೀ-ಪುರುಷ ವಶೀಕರಣ, ನಿಮ್ಮ ಯಾವುದೇ ಸಮಸ್ಯೆಗಳನ್ನು 100% ಪರಿಹಾರ ಶತಃ ಸಿದ್ಧ.
(ಮನೆ) ಜಿ. ವಿ. ಭಟ್ಟರ್
2ನೇ ಹಂತ, ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆ
89716 99826

**WANTED LADY HR**
For Vistara Animation Institution min 2 years experience. Any degree. Interview Timing : 11Am on wards. Call :
87620 72063, 96860 25059
Address : SRISADA, 1sr Floor, MCC `B' Block, Dental College Road, Davanagere.

**ಹೋಟೆಲ್ ಬಾಡಿಗೆಗಿದೆ**
15x90ಅಳತೆಯ ಎಲ್ಲಾ ಸೌಕರ್ಯವುಳ್ಳ, ಬೋರ್‌ವೆಲ್, ಮುನ್ಸಿಪಲ್ ನೀರಿನ ಸೌಲಭ್ಯ ಹಾಗೂ ಸಾಮಾನುಗಳ ಸಮೇತ ಬಾಡಿಗೆಗೆ ಇದೆ. (ಸಸ್ಯಹಾರಿ ಹಾಗೂ ಮಾಂಸಹಾರಿಗೆ ಅನುಕೂಲವಿದೆ)
93417 10083

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಬೇಕಾಗಿದ್ದಾರೆ**
ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್
Above 40 years
ಅನುಭವವುಳ್ಳವರು ಡ್ರೈವರ್, ಅಂಗಡಿಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ.
63620 23451
97434 37003

**ಸೈಟು ಮಾರಾಟಕ್ಕಿದೆ**
35x50 ಅಳತೆಯ ಸೈಟ್ ನಂ. 6, ಅಮರಾವತಿ ಬಡಾವಣೆ, ಆರ್ಚ್ ಗೇಟ್ ಹತ್ತಿರ, 4ನೇ ಕ್ರಾಸ್, ಅಮರಾವತಿ ರಸ್ತೆ, 4ನೇ ಕ್ರಾಸ್, ಹರಿಹರ ಇಲ್ಲಿ ಸೈಟ್ ಮಾರಾಟಕ್ಕಿದೆ (1850/- ರೂ. ಚದುರಡಿ)
ಮಧ್ಯಾಹ್ನ 3 ಗಂಟೆಯ ನಂತರ ಸಂಪರ್ಕಿಸಿ :
98452 36274

# 10ಕ್ಕೂ ಹೆಚ್ಚು ಮನೆಗಳ ನೀರಿನ ತೊಟ್ಟಿಯಲ್ಲಿ ಲಾರ್ವಾ ಪತ್ತೆ



ಮಲೇಬೆನ್ನೂರು, ಮೇ 28- ಜಿ.ಬೇವಿನಹಳ್ಳಿ ಗ್ರಾಮದಲ್ಲಿ ಡೆಂಗ್ಯೂ ರೋಗದ ಲಕ್ಷಣಗಳು ಕಂಡು ಬಂದ ಹಿನ್ನೆಲೆಯಲ್ಲಿ ಮಂಗಳವಾರ ಟಿಹೆಚ್ಓ ಡಾ. ಖಾದರ್ ನೇತೃತ್ವದ ಆರೋಗ್ಯ ಇಲಾಖೆಯ ತಂಡ ಲಾರ್ವಾ ಸಮೀಕ್ಷೆ ನಡೆಸಿತು.

**ಜಿ. ಬೇವಿನಹಳ್ಳಿ ಗ್ರಾಮದ ಟಿಹೆಚ್ಓ ಭೇಟಿ : ಡೆಂಗ್ಯೂ ಬಗ್ಗೆ ಜನರಿಗೆ ಜಾಗೃತಿ**

ಗ್ರಾಮದಲ್ಲಿ ವಾರದ ಹಿಂದೆ ಅನಾರೋಗ್ಯದಿಂದ ಮೃತಪಟ್ಟ ಮಹಿಳೆಯೊಬ್ಬರಿಗೆ ಡೆಂಗ್ಯೂ ರೋಗದ ಲಕ್ಷಣಗಳಿದ್ದವು ಎಂಬ ಬಗ್ಗೆ ಅವರ ಮನೆಗೆ ಭೇಟಿ ನೀಡಿದ ಅಧಿಕಾರಿಗಳು ಮಾಹಿತಿ ಸಂಗ್ರಹಿಸಿದರು.

ಮೃತಪಟ್ಟ ಮಹಿಳೆಯ ಮನೆಯಲ್ಲಿ ಎಲ್ಲರಿಗೂ ಜ್ವರ ಬಂದಿತ್ತು ಎಂಬ ಮಾಹಿತಿ ಈ ವೇಳೆ ಗೊತ್ತಾಯಿತು. ಆದರೆ, ಇವರೆಲ್ಲರಿಗೂ ಡೆಂಗ್ಯೂ ಜ್ವರ ಬಂದಿತೋ ಅಥವಾ ಮಾಮೂಲಿ ಜ್ವರ ಬಂದಿತೋ ಎನ್ನುವ ಬಗ್ಗೆ ಅಧಿಕೃತವಾದ ಮಾಹಿತಿ ಲಭ್ಯವಾಗಲಿಲ್ಲ.

ನಂತರ ಈ ಮನೆಯ ಸುತ್ತಮುತ್ತಲಿನ ಜನರಿಗೆ ಡೆಂಗ್ಯೂ ಬಗ್ಗೆ ಜಾಗೃತಿ ಮೂಡಿಸಿ, ಮನೆಯ ಹೊರಗಡೆ ಇರುವ ನೀರಿನ ತೊಟ್ಟಿಯನ್ನು ಮುಚ್ಚಬೇಕು. ಮನೆಯ ಬಳಿ ಚರಂಡಿ ಅಥವಾ ತಗ್ಗು ಪ್ರದೇಶದಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಿ. ಟೈರ್, ಚಿಪ್ಪುಗಳನ್ನು ಮನೆಯ ಹತ್ತಿರ ಇಡಬೇಡಿ. ಯಾವುದೇ ರೀತಿಯ ಜ್ವರ, ಶೀತ, ಸುಸ್ತು ತರಹದ ಲಕ್ಷಣ ಕಂಡಲ್ಲಿ ತಕ್ಷಣ ಸರ್ಕಾರಿ ಆಸ್ಪತ್ರೆಗಳಿಗೆ ತೆರಳಿ ಚಿಕಿತ್ಸೆ ಪಡೆದುಕೊಳ್ಳುವ ಜೊತೆಗೆ ರಕ್ತ ಪರೀಕ್ಷೆ ಮಾಡಿಸಿಕೊಳ್ಳಿ ಎಂದು ಟಿಹೆಚ್ಓ ಡಾ. ಖಾದರ್ ಅವರು ಗ್ರಾಮಸ್ಥರಿಗೆ ತಿಳಿಸಿದರು.

ಗ್ರಾಮದಲ್ಲಿ ಈ ದಿನ ಒಟ್ಟು 14 ದಿನ ಆಶಾ ಕಾರ್ಯಕರ್ತರನ್ನು 7 ತಂಡಗಳನ್ನಾಗಿ ಮಾಡಿ, ಲಾರ್ವಾ ಸಮೀಕ್ಷೆ ಮಾಡಿಸುತ್ತಿದ್ದೇವೆ. ಇದುವರೆಗೆ 10 ಮನೆಗಳ ನೀರಿನ ತೊಟ್ಟಿಗಳಲ್ಲಿ ಲಾರ್ವಾ ಕಂಡು ಬಂದಿದ್ದು, ಅವುಗಳನ್ನು ನಾಶ ಪಡಿಸಿದ್ದೇವೆ ಎಂದು ತಾ. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ಉಮಣ್ಣ ತಿಳಿಸಿದರು.

ಕೊಕ್ಕನೂರು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಹರ್ಚಿತ್, ಆರೋಗ್ಯ ನಿರೀಕ್ಷಣಾಧಿಕಾರಿ ಚಂದ್ರಶೇಖರಯ್ಯ, ಆಶಾ ಕಾರ್ಯ ಕರ್ತರಾದ ಶಾಂತಮ್ಮ, ರಾಧಮ್ಮ, ಶೈಲಜಾ, ಸುನಂದ ಈ ವೇಳೆ ಹಾಜರಿದ್ದರು.

### ವಿಶ್ವದ 71 ಸ್ಥಳಗಳಲ್ಲಿ ಪ್ರತಿದಿನ 51,000 ಪೌಷ್ಟಿಕ ಆಹಾರ ಪೊಟ್ಟಣಗಳ ವಿತರಣೆ

# ಮಲಬಾರ್ ಗ್ರೂಪ್‌ನಿಂದ 'ಹಸಿವು ಮುಕ್ತ ಜಗತ್ತು' ಯೋಜನೆ ವಿಸ್ತರಣೆ

ದಾವಣಗೆರೆ, ಮೇ 28- ಪೌಷ್ಟಿಕ ಆಹಾರದ ಅಗತ್ಯವಿರುವ ನಿರ್ಗತಿಕರಿಗೆ ಪ್ರತಿದಿನ ಊಟವನ್ನು ಪೂರೈಕೆ ಮಾಡುವ ಮಲಬಾರ್ ಗ್ರೂಪ್‌ನ 'ಹಸಿವು ಮುಕ್ತ ಜಗತ್ತು' ನಿರ್ಮಾಣದ ಸಿಎಸ್‌ಆರ್ ಕಾರ್ಯಕ್ರಮವನ್ನು ಇನ್ನಷ್ಟು ಸ್ಥಳಗಳಿಗೆ ಮತ್ತು ವ್ಯಕ್ತಿಗಳಿಗೆ ವಿಸ್ತರಿಸಲು ನಿರ್ಧರಿಸಲಾಗಿದೆ.

ಪ್ರಸ್ತುತ ಈ ಮಹತ್ವಾಕಾಂಕ್ಷೆಯ ಕಾರ್ಯಕ್ರಮದಡಿ ಪ್ರತಿದಿನ 31,000 ಆಹಾರ ಪೊಟ್ಟಣಗಳನ್ನು ವಿತರಣೆ ಮಾಡಲಾಗುತ್ತಿದೆ. ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿ 2 - ಶೂನ್ಯ ಹಸಿವು ಕಾರ್ಯಕ್ರಮಕ್ಕೆ ನೆರವಾಗುವ ನಿಟ್ಟಿನಲ್ಲಿ ಮಲಬಾರ್ ಗ್ರೂಪ್ ಈ ಉಪಕ್ರಮವನ್ನು ಜಾರಿಗೆ ತಂದಿದೆ. ಇದರ ವಿಸ್ತರಣೆ ಭಾಗವಾಗಿ ಇನ್ನು ಮುಂದೆ ಪ್ರತಿದಿನ 51,000 ಪೌಷ್ಟಿಕ ಆಹಾರ ಪೊಟ್ಟಣಗಳನ್ನು ವಿತರಣೆ ಮಾಡಲಾಗುತ್ತದೆ.

ನಗರದ ಮಂಡಿಪೇಟೆಯಲ್ಲಿರುವ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನಲ್ಲಿ ಇಂದು ಆಯೋಜಿಸಿದ್ದ 'ವಿಶ್ವ ಹಸಿವು ಮುಕ್ತ ದಿನ'ದ ಕಾರ್ಯಕ್ರಮದಲ್ಲಿ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರ ಅಧ್ಯಕ್ಷತೆಯಲ್ಲಿ ಡಾ. ಪುಷ್ಪಲತಾ, ಪವಿತ್ರರಾಜ್ ಸೋಶಿಯಲ್ ವರ್ಕ್ ಮತ್ತು ಬಿ.ಹೆಚ್. ಮುನಿಯಪ್ಪ ಅವರು ಈ ವಿಸ್ತರಣಾ ಯೋಜನೆಗೆ ಹಸಿರು ನಿಶಾನೆ ತೋರಿದರು. ಸಂಸ್ಥೆಯ ಮುಖ್ಯಸ್ಥ ಬಾಸಿಲ್ ರಾಜನ್ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ವಿಶೇಷವಾಗಿ ಬೀದಿ ಬದಿಯಲ್ಲಿ ವಾಸ ಮಾಡುವವರು ಸೇರಿದಂತೆ ಆಹಾರದ ಅಗತ್ಯವಿರುವವರಿಗೆ ಪೌಷ್ಟಿಕ ಆಹಾರವನ್ನು ಒದಗಿಸುವುದು ಈ ಕಾರ್ಯಕ್ರಮದ ಪ್ರಮುಖ ಧ್ಯೇಯವಾಗಿದೆ.

ನಮ್ಮ ಸಿಎಸ್‌ಆರ್ ಚಟುವಟಿಕೆಗಳು ಕರ್ನಾಟಕದಲ್ಲಿ ಸಕಾರಾತ್ಮಕ ಬದಲಾವಣೆಗಳನ್ನು ತರುತ್ತಿವೆ. ಹಸಿವು ಮುಕ್ತ ಜಗತ್ತು ಯೋಜನೆಯನ್ನು ಕರ್ನಾಟಕದಲ್ಲಿ 2023 ರಲ್ಲಿ ಆರಂಭಿಸಲಾಯಿತು. ನಾವು 4,450 ಜನರಿಗೆ ಪ್ರತಿದಿನ ಒಂದು ಹೊತ್ತಿನ ಊಟ ನೀಡುತ್ತಿದ್ದೆವು. ಇನ್ನು ಮುಂದೆ 7,167 ಜನರಿಗೆ ಪ್ರತಿದಿನ ಊಟವನ್ನು ನೀಡಲಿದ್ದೇವೆ. ಈ ಮೂಲಕ ಕರ್ನಾಟಕದ 12 ಸ್ಥಳಗಳಲ್ಲಿ ವಾರ್ಷಿಕ 26,15,955 ಊಟವನ್ನು ನೀಡಲಿದ್ದೇವೆ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಎಂ.ಪಿ.ಅಹ್ಮದ್ ಅವರು, 'ನಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಈಗಲೂ ಒಂದು ಹೊತ್ತಿನ ಊಟಕ್ಕಾಗಿ ಪರದಾಟ ನಡೆಸುತ್ತಿರುವ ಇನ್ನೂ ಅನೇಕ ಜನರು ನಮ್ಮ ಸುತ್ತಮುತ್ತ ಇನ್ನೂ ಇದ್ದಾರೆ. ನಮ್ಮ ಜಗತ್ತಿನಲ್ಲಿ ಹಸಿವು ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಕಠಿಣ ಕೆಲಸ ಮಾಡುತ್ತಿರುವ ಸರ್ಕಾರಗಳು ಮತ್ತು ಏಜೆನ್ಸಿಗಳಿಗೆ ನೆರವಾಗುವ ನಿಟ್ಟಿನಲ್ಲಿ ನಾವು ಕಿರು ಕಾಣಿಕೆಯನ್ನು ಸಲ್ಲಿಸುತ್ತಿದ್ದೇವೆ' ಎಂದರು.

ಹಸಿವು ಮುಕ್ತ ಜಗತ್ತು ಕಾರ್ಯಕ್ರಮವನ್ನು ಅತ್ಯಂತ ಮಾನ್ಯತೆ ಹೊಂದಿರುವ ಸಾಮಾಜಿಕ ಕಲ್ಯಾಣ ಸಂಸ್ಥೆಯಾಗಿರುವ ಎನ್‌ಜಿಒ 'ಥನಾಲ್ ದಯಾ ರಿಹೆಬಿಲಿಟೇಶನ್ ಟ್ರಸ್ಟ್' ನೆರವಿನಲ್ಲಿ ಕಾರ್ಯರೂಪಕ್ಕೆ ತರಲಾಗುತ್ತಿದೆ. ನುರಿತ ಬಾಣಸಿಗರಿಂದ ವಿವಿಧ ಅತ್ಯಂತ ನೈರ್ಮಲ್ಯ ಪರಿಸರದಲ್ಲಿ ಸ್ಥಾಪಿಸಲಾಗಿರುವ ಆಧುನಿಕ ಅಡುಗೆ ಕೋಣೆಗಳಲ್ಲಿ ಪೌಷ್ಟಿಕ ಆಹಾರವನ್ನು ತಯಾರಿಸಲಾಗುತ್ತಿದೆ. ಮಲಬಾರ್ ಗ್ರೂಪ್ ಮತ್ತು ಥನಾಲ್‌ನ ಸ್ವಯಂ ಸೇವಕರು ಬೀದಿಬದಿ ಮತ್ತು ನಗರ ಪ್ರದೇಶಗಳಲ್ಲಿ ವಾಸಿಸುತ್ತಿರುವ ವ್ಯಕ್ತಿಗಳನ್ನು ಗುರುತಿಸಿ, ಅವರಿದ್ದಲ್ಲಿಗೇ ಆಹಾರವನ್ನು ತಲುಪಿಸುತ್ತಿದ್ದಾರೆ.

ಎನ್‌ಜಿಒ ಸ್ವಯಂ ಸೇವಕರು ಹಸಿವಿಗೆ ಕಾರಣವಾಗಿರುವ ಸಾಮಾಜಿಕ ಮತ್ತು ಆರ್ಥಿಕ ಕಾರಣಗಳನ್ನು ನಿರ್ಣಯ ಮಾಡಿ, ಫಲಾನುಭವಿಗಳನ್ನು ಸಮೀಕ್ಷೆ ಮಾಡುತ್ತಾರೆ. ಈ ಕಾರ್ಯಕ್ರಮದ ಭಾಗವಾಗಿ ಮಲಬಾರ್ ಗ್ರೂಪ್ ಥನಾಲ್ ಸಹಯೋಗದೊಂದಿಗೆ ಬಡ ಮತ್ತು ಅನಾಥ ವೃದ್ಧ ಮಹಿಳೆಯರನ್ನು ಗುರುತಿಸಿ, ಅವರಿಗೆ ಉಚಿತ ಆಹಾರ, ವಸತಿ ಮತ್ತು ಇತರೆ ಆರೋಗ್ಯ ಸೇವೆಗಳನ್ನು ಒದಗಿಸುವ 'ಅಜ್ಜಿ ಮನೆ' ಯೋಜನೆಯನ್ನು ಈಗಾಗಲೇ ಆರಂಭಿಸಿದೆ. ಇಂತಹ ಎರಡು ಅಜ್ಜಿ ಮನೆಗಳನ್ನು ಬೆಂಗಳೂರು ಮತ್ತು ಹೈದ್ರಾಬಾದ್ ನಗರಗಳಲ್ಲಿ ಸ್ಥಾಪಿಸಲಾಗಿದೆ.

ಚೆನ್ನೈ, ದೆಹಲಿ, ಕೋಲ್ಕೊತ್ತಾ, ಮುಂಬೈ ಮತ್ತು ಕೇರಳದ ಕೆಲವು ಆಯ್ದ ನಗರಗಳಲ್ಲಿ ಇದೇ ರೀತಿಯ ಮನೆಗಳನ್ನು ಆರಂಭಿಸಲು ಯೋಜನೆ ರೂಪಿಸಲಾಗಿದೆ. ಇದರಿಂದ ನಿರ್ಲಕ್ಷಿತ ಮತ್ತು ಅನಾಥ ಮಹಿಳೆಯರಿಗೆ ಗೌರವಯುತವಾದ ಬದುಕು ಸಾಗಿಸಲು ಅವಕಾಶ ದೊರೆಯಲಿದೆ. ಬೀದಿ ಮಕ್ಕಳ ಪ್ರಾಥಮಿಕ ಶಿಕ್ಷಣವನ್ನು ಬೆಂಬಲಿಸುವ ನಿಟ್ಟಿನಲ್ಲಿ ಗ್ರೂಪ್ ಮೈಕ್ರೋ ಲರ್ನಿಂಗ್ ಕಾರ್ಯಕ್ರಮವನ್ನೂ ಸಹ ಆರಂಭಿಸಿದೆ. ಇದರ ಹೊರತಾಗಿ, ಮಲಬಾರ್ ಗ್ರೂಪ್ ಇನ್ನಿತರೆ ಸಾಮಾಜಿಕ ಕಲ್ಯಾಣ ಮತ್ತು ಸಮಾಜ ಸೇವೆ ಚಟುವಟಿಕೆಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದೆ. ಪ್ರಮುಖವಾಗಿ ವೈದ್ಯಕೀಯ ಆರೈಕೆಗೆ ಹಣಕಾಸು ನೆರವು, ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಬೆಂಬಲ ಮತ್ತು ಬಡವರ ಮನೆಗಳ ನಿರ್ಮಾಣಕ್ಕೆ ಭಾಗಶಃ ಆರ್ಥಿಕ ನೆರವು ಸೇರಿದಂತೆ ಇನ್ನಿತರೆ ನೆರವಿನ ಯೋಜನೆಗಳನ್ನು ಜಾರಿಗೊಳಿಸಿದೆ. ಇಂತಹ ಸಮಾಜ ಸುಧಾರಣೆ ಯೋಜನೆಗಳಿಗಾಗಿ ಗ್ರೂಪ್ ತನ್ನ ವ್ಯವಹಾರದ ಲಾಭದಲ್ಲಿ ಶೇ.5 ರಷ್ಟನ್ನು ಮೀಸಲಿಟ್ಟಿದೆ. ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನ ಲಾಭಾಂಶದ ಭಾಗವೂ ಈ ಕಾರ್ಯಕ್ಕೆ ಬಳಕೆಯಾಗುತ್ತಿದೆ. ಇಂತಹ ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳಿಗೆ ಗ್ರೂಪ್ ಇದುವರೆಗೆ 246 ಕೋಟಿ ರೂ.ಗಳನ್ನು ವೆಚ್ಚ ಮಾಡಿದೆ.




**ದಾವಣಗೆರೆಯಲ್ಲಿ ಎಸ್ಸೆಸ್ ಅಧ್ಯಕ್ಷತೆಯಲ್ಲಿ ಹಸಿರು ನಿಶಾನೆ**

'ವಿಶ್ವ ಹಸಿವು ಮುಕ್ತ ದಿನ'ದ ದಾವಣಗೆರೆಯ ಕಾರ್ಯಕ್ರಮದಲ್ಲಿ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರ ಅಧ್ಯಕ್ಷತೆಯಲ್ಲಿ ಡಾ. ಪುಷ್ಪಲತಾ, ಪವಿತ್ರರಾಜ್ ಸೋಶಿಯಲ್ ವರ್ಕ್ ಮತ್ತು ಬಿ.ಹೆಚ್. ಮುನಿಯಪ್ಪ ಅವರು ವಿಸ್ತರಣಾ ಯೋಜನೆಗೆ ಹಸಿರು ನಿಶಾನೆ ತೋರಿದರು.

> ಮಲಬಾರ್ ಚಾರಿಟೇಬಲ್ ಟ್ರಸ್ಟ್ ವಿಶ್ವದ 71 ಸ್ಥಳಗಳಲ್ಲಿ 51,000 ಜನರಿಗೆ ಪ್ರತಿದಿನ ಊಟವನ್ನು ನೀಡಲಿದ್ದು, ವಾರ್ಷಿಕ 18.6 ಮಿಲಿಯನ್ ಊಟವನ್ನು ವಿತರಣೆ ಮಾಡಲಿದೆ. ಪ್ರಸ್ತುತ ಸಂಸ್ಥೆಯು ಭಾರತದ ಕೇಂದ್ರಾಡಳಿತ ಪ್ರದೇಶಗಳು ಸೇರಿದಂತೆ 16 ರಾಜ್ಯಗಳ 37 ನಗರಗಳಲ್ಲಿ ಈ ಯೋಜನೆಯನ್ನು ಜಾರಿಗೆ ತಂದಿದೆ. ಇದಲ್ಲದೇ, ಗಲ್ಫ್ ದೇಶಗಳಲ್ಲಿಯೂ ಕೆಲವು ಕೇಂದ್ರಗಳ ಮೂಲಕ ಆಹಾರ ಪೂರೈಕೆ ಮಾಡುತ್ತಿದೆ.
> ಯೋಜನೆಯ ವಿಸ್ತರಣೆ ಭಾಗವಾಗಿ ಇದೀಗ 16 ರಾಜ್ಯಗಳ 70 ಕ್ಕೂ ಹೆಚ್ಚು ನಗರಗಳಲ್ಲಿ ಅಗತ್ಯವಿರುವ ವ್ಯಕ್ತಿಗಳಿಗೆ ಪೌಷ್ಟಿಕ ಆಹಾರವನ್ನು ವಿತರಣೆ ಮಾಡಲಿದೆ. ಈ ಯೋಜನೆಯಲ್ಲದೇ, ಗ್ರೂಪ್ ವಿಶ್ವದಲ್ಲಿ ಅತಿ ದೊಡ್ಡ ಮಟ್ಟದ ಚಿನ್ನದ ಗಣಿ ಇರುವ ಆಫ್ರಿಕಾದ ಝಾಂಬಿಯಾದಲ್ಲಿ ಶಾಲಾ ಮಕ್ಕಳಿಗೆ ಇದೇ ಯೋಜನೆಯನ್ನು ಜಾರಿಗೊಳಿಸುವ ಯೋಜನೆ ರೂಪಿಸಿದೆ.
>
> -ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್

# 'ನಮ್ಮೆಲ್ಲರ ನಡಿಗೆ ಹಾಸನದ ಕಡೆಗೆ' ಇಂದು ಹಾಸನದತ್ತ ಪ್ರಯಾಣ

ದಾವಣಗೆರೆ, ಮೇ 28- ಸಂಸದ ಪ್ರಜ್ವಲ್ ರೇವಣ್ಣ ಅವರ ಬಂಧನ ಮತ್ತು ಹೆಣ್ಣು ಮಕ್ಕಳ ಘನತೆಯ ರಕ್ಷಣೆಗೆ ಆಗ್ರಹಿಸಿ, ಪ್ರಗತಿಪರ ಸಂಘಟನೆಗಳ ಒಕ್ಕೂಟದ ವತಿಯಿಂದ ನಾಡಿದ್ದು ದಿನಾಂಕ 30 ರಂದು 'ನಮ್ಮೆಲ್ಲರ ನಡಿಗೆ ಹಾಸನದ ಕಡೆಗೆ' ಹಾಸನ ಚಲೋ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಿಐಟಿಯು ಮುಖಂಡ ಕೆ.ಹೆಚ್. ಆನಂದರಾಜ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಾಳೆ ದಿನಾಂಕ 29 ರ ಬುಧವಾರ ರಾತ್ರಿ ದಾವಣಗೆರೆಯಿಂದ ಹಾಸನಕ್ಕೆ ತೆರಳಿ ಮೇ 30 ರಂದು ಬೆಳಿಗ್ಗೆ 10.30 ಕ್ಕೆ ಹಾಸನ ಮಹಾರಾಜ ಪಾರ್ಕ್‌ನಿಂದ ಡಿಸಿ ಕಚೇರಿಯವರೆಗೆ ಮೆರವಣಿಗೆ ಮೂಲಕ ಸಾಗಿ, ನಂತರ ಬೃಹತ್ ಬಹಿರಂಗ ಸಭೆ ನಡೆಸಲಾಗುವುದು. ಸಭೆಯಲ್ಲಿ ಸುಮಾರು 10 ಸಾವಿರ ಜನ ಸೇರುವ ನಿರೀಕ್ಷೆ ಇದೆ ಎಂದು ಹೇಳಿದರು.

ಗೊತ್ತಿದ್ದು ಗೊತ್ತಿದ್ದೂ ಪ್ರಜ್ವಲ್ ಎಂಬ ಕಾಮ ಪಿಪಾಸುವನ್ನು ಪೋಷಿಸಿ ಬೆಳೆಸಿದ ದೇವೇಗೌಡ ಕುಟುಂಬ ಮತ್ತು ಅಧಿಕಾರದ ದುರಾಸೆಗೆ ಟಿಕೆಟ್ ನೀಡಿ ಸಮರ್ಥಿಸಿಕೊಂಡ ಮೋದಿ ಹಾಗೂ ಬಿಜೆಪಿ ನಾಡಿನ ಮಹಿಳೆಯರಲ್ಲಿ ಕ್ಷಮೆ ಕೇಳಬೇಕು. ಯಾವುದೇ ರಾಜಿಗೆ ಅವಕಾಶ ಇಲ್ಲದಂತೆ ಪ್ರಜ್ವಲ್ ರೇವಣ್ಣ ಪ್ರಕರಣದ ತನಿಖೆ, ಕ್ರಮ, ವಿಚಾರಣೆಯನ್ನು ರಾಜ್ಯ ಸರ್ಕಾರ ತ್ವರಿತಗತಿಯಲ್ಲಿ ಮುನ್ನಡೆಸಬೇಕು. ಎಲ್ಲಿದ್ದರೂ ಬಿಡದೇ ಆತನನ್ನು ಕೇಂದ್ರ ಸರ್ಕಾರ ಹಿಡಿದು ತರಬೇಕೆಂದು ಆಗ್ರಹಿಸಿದರು.

ಬದುಕು ಛಿದ್ರಗೊಂಡಿರುವ ಮಹಿಳೆಯರಿಗೆ ಆತ್ಮವಿಶ್ವಾಸ ತುಂಬುವ ನಿಟ್ಟಿನಲ್ಲಿ ಮಹಿಳಾ ಆಯೋಗ ಮತ್ತು ಸರ್ಕಾರ ವಿಶ್ವಾಸಪೂರ್ಣ ಹೆಜ್ಜೆಗಳನ್ನು ಇಡಬೇಕು. ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯಗಳನ್ನು ನಿಯಂತ್ರಿಸಲು ಸರ್ಕಾರವು ಸಮಗ್ರ ಹಾಗೂ ಪರಿಣಾಮಕಾರಿ ಕಾರ್ಯ ಯೋಜನೆ ರೂಪಿಸಿ, ಸಮರೋಪಾದಿಯಲ್ಲಿ ಕಾರ್ಯೋನ್ಮುಖರಾಗಬೇಕೆಂದು ಹೇಳಿದರು. ಹೆಣ್ಣುಮಕ್ಕಳ ಬದುಕು ಮತ್ತು ಘನತೆ ಕಾಪಾಡುವುದು ನಮ್ಮೆಲ್ಲರ ಆದ್ಯತೆಯಾಗ ಬೇಕು. ಸಮಾಜವು ಮೌನ ಮುರಿದು ಲಿಂಗ ಸಮಾನತೆಗಾಗಿ ಧ್ವನಿ ಎತ್ತಬೇಕೆಂದು ಒತ್ತಾಯಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಮಧು ತೊಗಲೇರಿ, ಪವಿತ್ರ, ಮಮತ, ಸುರೇಶ್, ಅರವಿಂದ್ ಉಪಸ್ಥಿತರಿದ್ದರು.

# ಹಾನಿಗೊಳಗಾದ ರೈತರ ಬೆಳೆ ಸಾಲ ಸಂಪೂರ್ಣ ಮನ್ನಾ ಮಾಡಲು ಆಗ್ರಹ

ದಾವಣಗೆರೆ, ಮೇ 28- ಎನ್‌ಡಿಆರ್‌ಎಫ್ ಮಾನದಂಡ ತಿದ್ದುಪಡಿ ಮಾಡಿ, ಬೆಳೆ ನಷ್ಟದ ಸಂಪೂರ್ಣ ಹಣ ನೀಡಬೇಕು. ಇಲ್ಲದಿದ್ದರೆ ಬರ, ಅತಿವೃಷ್ಟಿ, ಮಳೆ ಹಾನಿಗೊಳಗಾದ ರೈತರ ಬೆಳೆ ಸಾಲವನ್ನು ಸಂಪೂರ್ಣ ಮನ್ನಾ ಮಾಡುವ ನೀತಿಯನ್ನು ಜಾರಿಗೆ ತರಬೇಕೆಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

> ಕೇಂದ್ರ ಸರ್ಕಾರಕ್ಕೆ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಮನವಿ

ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳೆ ನಷ್ಟ ಪರಿಹಾರವನ್ನು ಭಿಕ್ಷೆ ರೂಪದಲ್ಲಿ ನೀಡುತ್ತಾರೆ. ಪರಿಹಾರ ವಿತರಣೆ ಬಗ್ಗೆ ಅಧಿಕಾರದಲ್ಲಿರುವ ಮಂತ್ರಿಗಳು ವೈಭವೀಕರಿಸಿ ಹೇಳುತ್ತಾರೆ. ಇದು ರೈತರ ಕಣ್ಣಿಗೆ ಮಣ್ಣೆರಚುವ ತಂತ್ರ ಎಂದು ಕಿಡಿಕಾರಿದರು.

ಹೈನುಗಾರಿಕೆ ಮಾಡುವ ರೈತರಿಗೆ ಹಾಲಿನ ಪ್ರೋತ್ಸಾಹ ಧನ ಲೀಟರ್‌ಗೆ ಐದು ರೂ.ಗಳನ್ನು ಎಂಟು ತಿಂಗಳ ಹಣ 750 ಕೋಟಿ ರೂ. ಬಿಡುಗಡೆ ಆಗಿಲ್ಲ. ಕೂಡಲೇ ಬಿಡುಗಡೆ ಮಾಡಿ, ಹೈನುಗಾರಿಕೆ ರೈತರನ್ನು ರಕ್ಷಿಸಬೇಕು. ಪಶುಗಳ ತಿಂಡಿ, ಆಹಾರ ಬೆಲೆ ದುಬಾರಿಯಾಗಿದೆ. ಇದರಿಂದ ರೈತರು ಸಂಕಷ್ಟ ಅನುಭವಿಸುತ್ತಿದ್ದಾರೆಂದರು.

ರಾಜ್ಯದಲ್ಲಿ ಶೇ. 30 ರಷ್ಟು ಕಬ್ಬು ಬೆಳೆ ಒಣಗಿ ಹೋಗಿದೆ. ಉತ್ಪಾದನೆ ಮತ್ತಷ್ಟು ಕಡಿಮೆಯಾಗುವ ಸಾಧ್ಯತೆ ಇದೆ. ಬರ ಪರಿಹಾರ ನಷ್ಟದಲ್ಲಿ ಕಬ್ಬಿನ ಬೆಳೆಯನ್ನು ಪರಿಗಣಿಸಬೇಕು. ಕಬ್ಬು ಬೆಲೆ ನಾಶವಾಗಿರುವ ರೈತರಿಗೆ ಬರ ಪರಿಹಾರ ಸಿಗುವಂತಾಗಬೇಕೆಂದು ಹೇಳಿದರು.

ಬರದಿಂದ ತತ್ತರಿಸಿದ ರೈತರಿಗೆ ಕೃಷಿ ಚಟುವಟಿಕೆಗಳನ್ನು ಆರಂಭಿಸಲು ಗುಣಮಟ್ಟದ ರಸಗೊಬ್ಬರ, ಬಿತ್ತನೆ ಬೀಜ ಸಿಗುವಂತೆ ಕೃಷಿ ಇಲಾಖೆ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಜಿಲ್ಲೆಯಲ್ಲಿ ಭದ್ರಾ ಜಲಾಶಯದಿಂದ ನೀರು ಬಿಡುತ್ತೇವೆಂದು ಹೇಳಿ ಹುಸಿಗೊಳಿಸಿದ ಕಾರಣ, ಐದು ಸಾವಿರ ಎಕರೆ ಕಬ್ಬು ಬೆಳೆ ನಾಶವಾಗಿದೆ. ಅಡಿಕೆ ತೋಟದ ಬೆಳೆಗಳಾದ ಮಾವು, ಪಪ್ಪಾಯಿ ಇನ್ನಿತರೆ ಬೆಳೆಗಳು ನಾಶವಾಗಿವೆ.ಅಕಾಲಿಕ ಮಳೆಗೆ ಭತ್ತದ ಬೆಳೆ ಕೂಡ ನಾಶವಾಗಿದೆ. ರಾಜ್ಯ ಸರ್ಕಾರ ಮಳೆಯಾಶ್ರಿತ ಪ್ರದೇಶಗಳಿಗೆ ಮಾತ್ರ ಪರಿಹಾರ ನೀಡಿದೆ. ಪಂಪ್‌ಸೆಟ್ ಆಧರಿತ ಹಾಗೂ ಭದ್ರಾ ಕಾಲುವೆ ಆಧರಿತ ಬೆಳೆಗಳು ಹೆಚ್ಚುವರಿಯಾಗಿ ಜಿಲ್ಲೆಯಲ್ಲಿ 20 ಸಾವಿರ ಹೆಕ್ಟೇರ್ ಬೆಳೆ ನಾಶವಾಗಿದೆ. ಎಲ್ಲಾ ಬೆಳೆಗಳಿಗೂ ಕನಿಷ್ಠ 30 ಸಾವಿರ ರೂ. ಪರಿಹಾರ ನೀಡಬೇಕೆಂದರು.

ಗ್ರಾಮೀಣ ಬ್ಯಾಂಕ್, ರೈತರನ್ನು ಭಿಕ್ಷುಕರಂತೆ ಕಾಣುವುದಲ್ಲದೇ, ಕಿರುಕುಳ, ವಂಚನೆ ಮಾಡುತ್ತಿದೆ. ಬ್ಯಾಂಕಿನ ಸಾಲ ನೀತಿ ಬದಲಾಗಬೇಕು.ಕೃಷಿ ಜಮೀನಿನ ಮೌಲ್ಯಕ್ಕೆ ಅನುಗುಣವಾಗಿ ಸಾಲ ನೀಡುವ ವ್ಯವಸ್ಥೆ ಜಾರಿಗೊಳ್ಳಬೇಕು ಎಂದು ಹೇಳಿದರು.

ರಾಜ್ಯದಲ್ಲಿ 223 ತಾಲ್ಲೂಕುಗಳನ್ನು ಬರ ಪೀಡಿತ ಎಂದು ಘೋಷಣೆ ಮಾಡಿ, 70 ಲಕ್ಷ ರೈತರ ಪೈಕಿ 27 ಲಕ್ಷ ರೈತರಿಗೆ ಮಾತ್ರ ಪರಿಹಾರ ನೀಡಿ, ಶೇ.60 ರಷ್ಟು ರೈತರನ್ನು ರಾಜ್ಯ ಸರ್ಕಾರ ವಂಚಿಸಿದೆ. ಕೂಡಲೇ ಅದನ್ನು ಸರಿಪಡಿಸಬೇಕೆಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರೈತ ಸಂಘದ ಪದಾಧಿಕಾರಿಗಳಾದ ಬಲ್ಲೂರು ರವಿಕುಮಾರ್, ಅಂಜಿನಪ್ಪ ಪೂಜಾರ್, ಮಾಧವ ರೆಡ್ಡಿ ಬಳ್ಳಾರಿ, ಸುರೇಶ್ ಪಾಟೀಲ್, ಬಸವರಾಜ್ ರಾಂಪುರ, ಶಿವಕುಮಾರ್ ಉಪಸ್ಥಿತರಿದ್ದರು.

# ನಗರದ ವಿಶ್ವವಿದ್ಯಾನಿಲಯ ದೃಶ್ಯಕಲಾ ವಿದ್ಯಾಲಯದಲ್ಲಿ ಇಂದು ಭಿತ್ತಿ ಚಿತ್ರ ಶಿಬಿರ

ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯದ ವತಿಯಿಂದ ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ನಡೆಯುತ್ತಿರುವ 7 ದಿನಗಳ ಭಿತ್ತಿಚಿತ್ರ ಕಲಾ ಶಿಬಿರದಲ್ಲಿ ಇಂದು ಮುಂಜಾನೆ 6.30ಕ್ಕೆ ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯದ ಬೋಧನಾ ಸಹಾಯಕ ಡಾ. ಎಂ.ಕೆ. ಗಿರೀಶ್ ಕುಮಾರ್ ಅವರು ಧ್ವಜಾರೋಹಣ ನೆರವೇರಿಸುವರು.

ಸಂಜೆ 5.30ಕ್ಕೆ ವಿಶೇಷ ಉಪನ್ಯಾಸ ನಡೆಯಲಿದ್ದು, ಘನ ತ್ಯಾಜ್ಯ ನಿರ್ವಹಣೆ ವಿಷಯ ಕುರಿತು ದಾವಣಗೆರೆ ವಿಶ್ವವಿದ್ಯಾನಿಲಯದ ಪರಿಸರ ವಿಜ್ಞಾನ ಅಧ್ಯಯನ ವಿಭಾಗದ ಡಾ. ಎಸ್. ಜೆ. ವೀರೇಶ್ ಅವರು ಉಪನ್ಯಾಸ ನೀಡುವರು. ದಾವಣಗೆರೆ ವಿಶ್ವವಿದ್ಯಾನಿಲಯದ ಕಂಪ್ಯೂಟರ್ ವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಯು. ಕುಮಾರ ಸಿದ್ದಮಲ್ಲಪ್ಪ ಅವರು ಮುಖ್ಯ ಅತಿಥಿಗಯಾಗಿದ್ದಾರೆ.

## 'ಶಾರದಾ ಪುರಸ್ಕಾರ' ಪ್ರಶಸ್ತಿಗೆ ಆಹ್ವಾನ

ದಾವಣಗೆರೆ, ಮೇ 28 - ಶ್ರೀಮತಿ ಪ್ರೇಮಾ ಅರುಣಾಚಲ ಎನ್. ರೇವಣಕರ್ ಪ್ರತಿಷ್ಠಾನದಿಂದ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಶೇ. 85 ರಷ್ಟು ಮತ್ತು ಅದಕ್ಕೂ ಹೆಚ್ಚು ಅಂಕ ಪಡೆದ ದೈವಜ್ಞ ಸಮಾಜ ಬಾಂಧವರ ವಿದ್ಯಾರ್ಥಿ-ವಿದ್ಯಾ ರ್ಥಿನಿಯರಿಗೆ 'ಶಾರದಾ ಪುರಸ್ಕಾರ-2024' ರಾಜ್ಯ ಪ್ರಶಸ್ತಿಯನ್ನು ನೀಡಲಾಗುವುದು ಎಂದು ಪ್ರತಿಷ್ಠಾನದ ಸಂಸ್ಥಾಪಕ ನಲ್ಲೂರು ಅರುಣಾಚಲ ಎನ್.ರೇವಣಕರ್ ತಿಳಿಸಿದ್ದಾರೆ.

ವಿವರಕ್ಕೆ 9341969084, 8147263552 ರಲ್ಲಿ ಸಂಪರ್ಕಿಸಬಹುದು ಎಂದು ಪ್ರತಿಷ್ಠಾನದ ನಿರ್ದೇಶಕರಾದ ನಲ್ಲೂರು ಲಕ್ಷ್ಮಣ್‌ರಾವ್ ರೇವಣಕರ್ ವಿನಂತಿಸಿದ್ದಾರೆ.

## ಹರಿಹರದಲ್ಲಿ ಇಂದು ಫಸ್ಟ್ ಸ್ಟೆಪ್ ಸ್ಕೂಲ್ ಉದ್ಘಾಟನೆ

ಕೈಗಾರಿಕೋದ್ಯಮಿ ಎಂ. ಬಸಪ್ಪ ಅವರು ಹರಿಹರದ ವಿ.ಆರ್. ಕುಲಕರ್ಣಿ ಬಡಾವಣೆಯಲ್ಲಿ ನೂತನವಾಗಿ ಸ್ಥಾಪಿಸಿರುವ ಫಸ್ಟ್ ಸ್ಟೆಪ್ ಸ್ಕೂಲ್ ಇಂದು ಮಧ್ಯಾಹ್ನ 12 ಗಂಟೆಗೆ ಉದ್ಘಾಟನೆಗೊಳ್ಳಲಿದೆ.

ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಈ ಶಾಲೆಯ ಉದ್ಘಾಟನೆಯನ್ನು ನೆರವೇರಿಸಲಿದ್ದಾರೆ.

# ಸುಶ್ರಾವ್ಯ ಸಂಗೀತ ವಿದ್ಯಾಲಯದ 'ಕನ್ನಡದಾರತಿ' ಗೀತಗಾಯನ ತರಬೇತಿ

ದಾವಣಗೆರೆ, ಮೇ 28- ನಮ್ಮ ಚೆಲುವ ಕನ್ನಡ ನಾಡು 'ಕರ್ನಾಟಕ' ಎಂದು ಮರುನಾಮಕರಣಗೊಂಡು 50 ವರ್ಷಗಳಾಗಿದ್ದು, ಕರ್ನಾಟಕದ ಈ ಸುವರ್ಣ ಸಂಭ್ರಮದ ಅಂಗವಾಗಿ ವರ್ಷ ಪೂರ್ತಿ ಕನ್ನಡದ ಹಬ್ಬವನ್ನು ಆಚರಿಸಲಾಗುತ್ತಿದೆ.

ಈ ಸಂಭ್ರಮವನ್ನು ಅರ್ಥಪೂರ್ಣಗೊಳಿಸಲು ನಗರದ ಸುಶ್ರಾವ್ಯ ಸಂಗೀತ ವಿದ್ಯಾಲಯವು 'ಕನ್ನಡದಾರತಿ' ಎಂಬ ವಿನೂತನ ಪರಿಕಲ್ಪನೆಯೊಂದನ್ನು ಯೋಜಿಸಿದೆ. ಇದರ ಅಡಿಯಲ್ಲಿ ವರ್ಷಪೂರ್ತಿ ಕನ್ನಡ ನಾಡು-ನುಡಿ ಮಹತ್ವವನ್ನು ಬಿಂಬಿಸುವ 50 ಆಯ್ದ ಗೀತೆಗಳ ಗಾಯನ ತರಬೇತಿ ಹಮ್ಮಿಕೊಳ್ಳಲಾಗಿದೆ. ಪ್ರತಿ ಶಿಬಿರದಲ್ಲಿ 5 ಗೀತೆಗಳ ತರಬೇತಿ ನೀಡಲಿದ್ದು ಒಟ್ಟು 10 ಶಿಬಿರಗಳನ್ನು ಆಯೋಜಿಸಲಾಗುವುದು.

ಪ್ರಥಮ ತರಬೇತಿ ಶಿಬಿರ ಕನ್ನಡದಾರತಿ-1 'ಸಾವಿರದ ಶರಣವ್ವ ಕನ್ನಡದ ತಾಯೆ' ಎಂಬ ಶೀರ್ಷಿಕೆಯಡಿಯಲ್ಲಿ ನಡೆಯಲಿದ್ದು, ಈ ಶಿಬಿರದಲ್ಲಿ ಕನ್ನಡದ ಪ್ರಸಿದ್ಧ ಕವಿಗಳ 5 ಗೀತೆಗಳನ್ನು ಕರೋಕೆಯೊಂದಿಗೆ ಹಾಡುವ ತರಬೇತಿಯನ್ನು ನೀಡಲಾಗಿದೆ.

ಉಳಿದ 9 ಶಿಬಿರಗಳನ್ನು ಶಾಲಾ-ಕಾಲೇಜು ಮಕ್ಕಳಿಗೆ ಹಾಗೂ ಸಂಘ-ಸಂಸ್ಥೆಗಳ ಸದಸ್ಯರಿಗೆ ಏರ್ಪಡಿಸಲು ಯೋಜಿಸಿದ್ದು, ಆಸಕ್ತರು ತಮ್ಮ ಸಂಸ್ಥೆಗಳಲ್ಲಿ ಆಯೋಜಿಸಬಹುದಾಗಿದೆ.

ಪ್ರತಿ ಶಿಬಿರ 2 ದಿನ ನಡೆಯಲಿದ್ದು, ಈ ಶಿಬಿರದಲ್ಲಿ 5 ಗೀತೆಗಳ ಗಾಯನ ತರಬೇತಿ ನೀಡಲಾಗುವುದು. ದಾವಣಗೆರೆಯ ಯಾವುದೇ ಸರ್ಕಾರಿ/ಅನುದಾನಿತ/ಅನುದಾನ ರಹಿತ ಶಾಲೆ, ಪಿಯುಸಿ ಅಥವಾ ಪದವಿ ಕಾಲೇಜುಗಳು ಈ ಶಿಬಿರವನ್ನು ಆಯೋಜಿಸಬಹುದಾಗಿದೆ. ಮಹಿಳಾ ಸಂಘಟನೆಗಳಿಗೂ ಅವಕಾಶವಿದೆ. ದಾವಣಗೆರೆ ಸುತ್ತ ಮುತ್ತಲಿನ ಹಳ್ಳಿಗಳಲ್ಲಿರುವ ಶಾಲಾ ಕಾಲೇಜುಗಳು ಇದರ ಪ್ರಯೋಜನ ಪಡೆಯಬಹುದಾಗಿದೆ.

ಸುಶ್ರಾವ್ಯ ಸಂಗೀತ ವಿದ್ಯಾಲಯ ನಿರ್ದೇಶಕರಾದ ಶ್ರೀಮತಿ ಯಶಾ ದಿನೇಶ್ ಅವರು ಗಾಯನದ ತರಬೇತಿಯನ್ನು ನೀಡಲಿದ್ದಾರೆ. ವಿವರಗಳಿಗೆ 9449808886ಗೆ ಸಂದೇಶದ ಮೂಲಕ ಸಂಪರ್ಕಿಸಬಹುದು.

## ನಾಡಿದ್ದು ಜಿಲ್ಲಾ ಮಟ್ಟದ ಕ್ರಿಕೆಟ್ ಟೂರ್ನಿ

**ರಾಣೇಬೆನ್ನೂರು**

ರಾಣೇಬೆನ್ನೂರು, ಮೇ 28- ಇಲ್ಲಿನ ಕಾಕಿ ಜನಸೇವಾ ಸಂಸ್ಥೆ ಹಾಗೂ ಜೆಸಿಐ ಸಂಯುಕ್ತಾಶ್ರಯದಲ್ಲಿ ಶ್ರೀನಿವಾಸ ಕಾಕಿ ಹುಟ್ಟುಹಬ್ಬದ ಪ್ರಯುಕ್ತ ಹುಣಸಿಕಟ್ಟೆ ರಸ್ತೆಯ ಪಂಪಾ ನಗರದಲ್ಲಿ ನಾಡಿದ್ದು ದಿನಾಂಕ 31ರಂದು ಜಿಲ್ಲಾಮಟ್ಟದ ಕ್ರಿಕೆಟ್ ಟೂರ್ನಮೆಂಟ್ ಆಯೋಜಿಸಲಾಗಿದೆ. ಪ್ರಥಮ ಬಹುಮಾನವಾಗಿ 55 ಸಾವಿರ, ದ್ವಿತೀಯ 33 ಸಾವಿರ ಹಾಗೂ ತೃತೀಯ 22 ಸಾವಿರ ನಗದು ಬಹುಮಾನ ನೀಡಲಾಗುವುದು. ಆಸಕ್ತರು ತಂಡದ ಹೆಸರು ನೋಂದಾಯಿಸಬಹುದು.

## ವಿಧಾನ ಪರಿಷತ್ ಚುನಾವಣೆ, ಮದ್ಯ ಮಾರಾಟ ನಿಷೇಧ

ದಾವಣಗೆರೆ, ಮೇ 28 - ಆಗ್ನೇಯ ಶಿಕ್ಷಕರ ಕ್ಷೇತ್ರ, ನೈರುತ್ಯ ಪದವೀಧರ, ಶಿಕ್ಷಕರ ಕ್ಷೇತ್ರಕ್ಕೆ ಚುನಾವಣೆ ನಡೆಯಲಿರುವ ಹಿನ್ನೆಲೆಯಲ್ಲಿ ಮುಕ್ತ, ಶಾಂತಿಯುತ ನಿಷ್ಪಕ್ಷಪಾತವಾಗಿ ಚುನಾವಣೆ ನಡೆಯಬೇಕೆಂಬ ಉದ್ದೇಶದಿಂದ ಮತದಾನ ನಡೆಯುವ ದಿನಗಳಂದು ಜಿಲ್ಲೆಯಾದ್ಯಂತ ಶುಷ್ಕ ದಿವಸವೆಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಡಾ.ಎಂ.ವಿ.ವೆಂಕಟೇಶ್ ಆದೇಶಿಸಿದ್ದಾರೆ.

ಜಿಲ್ಲಾದ್ಯಂತ ಜೂನ್ 1 ರ ಸಂಜೆ 4 ಗಂಟೆಯಿಂದ ಜೂನ್ 3 ರ ಸಂಜೆ 6 ಗಂಟೆಯವರೆಗೆ ಎಲ್ಲಾ ಮದ್ಯದಂಗಡಿ, ಬಾರ್ ಮತ್ತು ರೆಸ್ಟೋರೆಂಟ್, ಹೋಟೆಲ್, ಕ್ಲಬ್, ಡಾಬಾ, ಛತ್ರ ಇನ್ನಿತರೆ ಸ್ಥಳಗಳಲ್ಲಿ ಮದ್ಯ ಮಾರಾಟ ಮತ್ತು ಸರಬರಾಜು ಹಾಗೂ ಮದ್ಯಪಾನವನ್ನು ನಿಷೇಧಿಸಲಾಗಿರುತ್ತದೆ.

# ಎನ್ನೆಸ್ಸೆಸ್ ವಿದ್ಯಾರ್ಥಿಗಳಿಂದ ಸದೃಢ ದೇಶ ಕಟ್ಟಲು ಸಾಧ್ಯ

## ದಾವಣಗೆರೆ ವಿವಿಯ ಯೋಗ ವಿಜ್ಞಾನ ಅಧ್ಯಯನ ವಿಭಾಗದ ಡಾ. ಶಿವವೀರ ಕುಮಾರ್ ಚಂಡ್ರಕಿಮಠ

ದಾವಣಗೆರೆ, ಮೇ 28- ಎನ್ನೆಸ್ಸೆಸ್ ವಿದ್ಯಾರ್ಥಿಗಳಿಂದ ಸದೃಢ ದೇಶ ಕಟ್ಟಲು ಸಾಧ್ಯ ಎಂದು ದಾವಣಗೆರೆ ವಿವಿಯ ಯೋಗ ವಿಜ್ಞಾನ ಅಧ್ಯಯನ ವಿಭಾಗದ ಡಾ. ಶಿವವೀರ ಕುಮಾರ್ ಚಂಡ್ರಕಿಮಠ ಅಭಿಪ್ರಾಯಪಟ್ಟರು.

ನಗರದ ದೃಶ್ಯಕಲಾ ಮಹಾವಿದ್ಯಾಲಯದ ಸಭಾಂಗಣದಲ್ಲಿ ರಾಷ್ಟ್ರೀಯ ಸೇವಾ ಯೋಜನಾ ವಿಭಾಗದ ಆಶ್ರಯದಲ್ಲಿ ಮಂಗಳವಾರ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಎನ್‌ಎಸ್‌ಎಸ್ ಶಿಬಿರವು ವಿದ್ಯಾರ್ಥಿಗಳಿಗೆ ಶಿಸ್ತು ಮತ್ತು ಸೇವಾ ಮನೋಭಾವನೆ ಕಲಿಸುತ್ತದೆ ಮತ್ತು ಸಮಾಜದಲ್ಲಿ ಉತ್ತಮ ವ್ಯಕ್ತಿಯಾಗಿಸಲು ಸಹಾಯ ಮಾಡಲಿದೆ ಎಂದು ಹೇಳಿದರು.

ಭಿತ್ತಿಚಿತ್ರದ ಸಹಾಯದಿಂದ ಗ್ರಾಮೀಣ ಭಾಗದಲ್ಲಿ ಆರೋಗ್ಯ ಕಾಳಜಿಯ ಬಗ್ಗೆ ಜಾಗೃತಿ ಮೂಡಿಸುವ ಪ್ರಯತ್ನ ಮಾಡಬೇಕು ಎಂದು ದೃಶ್ಯಕಲಾ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದೇ ಎನ್‌ಎಸ್‌ಎಸ್ ಉದ್ದೇಶವಾಗಿದ್ದು,ಈ ನಿಟ್ಟಿನಲ್ಲಿ ಉತ್ತಮ ಆರೋಗ್ಯವಂತರು ರಕ್ತದಾನ ಮಾಡುವಂತೆ ಶಿವವೀರ ಕುಮಾರ್ ಕರೆ ನೀಡಿದರು.

ಶೈಕ್ಷಣಿಕ ಜೀವನ ಮುಗಿದ ನಂತರವೂ ಶಿಬಿರದಿಂದ ಕಲಿತ ಮೌಲ್ಯಗಳನ್ನು ಮರೆಯದೇ ಸಮಾಜದ ಸೇವೆಯಲ್ಲಿ ತೊಡಗುವ ಮೂಲಕ ದೇಶಕ್ಕೆ ಉತ್ತಮ ನಾಗರಿಕರಾಗುವಂತೆ ಕಿವಿಮಾತು ಹೇಳಿದರು.

'ಭಿತ್ತಿಚಿತ್ರಕಲೆ' ಕುರಿತು ಉಪನ್ಯಾಸ ನೀಡಿದ ದೃಶ್ಯಕಲಾ ವಿವಿಯ ಬೋಧನಾ ಸಹಾಯಕ ದತ್ತಾತ್ರೇಯ ಎನ್.ಭಟ್ ಅವರು, 'ಭಾರತದಲ್ಲಿ ಭಿತ್ತಿಚಿತ್ರ ಕಲೆಗೆ ಪುರಾತನ ಕಾಲದಿಂದಲೂ ಪಾರಂಪರಿಕ ಇತಿಹಾಸವಿದೆ' ಎಂದು ಹೇಳಿದರು.

ಪುಸ್ತಕ ಮತ್ತು ತಾಳೆಗರಿ ಇಲ್ಲದ ಕಾಲದಲ್ಲಿ ಭಿತ್ತಿಚಿತ್ರಗಳು ಹೆಚ್ಚು ಪ್ರಚಲಿತದಲ್ಲಿದ್ದವು. ಸುಮಾರು 4 ರಿಂದ 18ನೇ ಶತಮಾನದವರೆಗೆ ಈ ಕಲಾಕೃತಿಗಳು ಕಂಡು ಬರುತ್ತವೆ ಎಂದರು.

ಸ್ಥಳೀಯ ಸಂಸ್ಕೃತಿ ಹಾಗೂ ಆಚರಣೆಯ ಪ್ರತಿರೂಪದಂತೆ ಭಿತ್ತಿಚಿತ್ರಗಳು ರಚನೆಯಾಗಿರುತ್ತವೆ ಎಂದ ಅವರು, ಚಿತ್ರಸೂತ್ರ ಅಧ್ಯಾಯದಲ್ಲಿದ್ದ ಭಿತ್ತಿಚಿತ್ರ ಕಲೆ ರಚಿಸುವ ವಿಧಾನವನ್ನು ವಿವರಿಸಿದರು.

ಪ್ರಸಕ್ತ ದಿನಗಳಲ್ಲಿ ನಮ್ಮ ಅಜ್ಞಾನ ಮತ್ತು ಅಲಕ್ಷ್ಯದಿಂದ ಈ ಸುಂದರ ಚಿತ್ರ ಕಲೆ ನಾಶವಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಪುರಾತನ ಇತಿಹಾಸ ಹೊಂದಿದ ಇಂತಹ ಕಲೆಯನ್ನು ಉಳಿಸಿ - ಬೆಳಸಿದರೇ ಮುಂದಿನ ಪೀಳಿಗೆಗೆ ಅನುಕೂಲವಾಗಲಿದೆ ಎಂದು ಆಶಯ ವ್ಯಕ್ತಪಡಿಸಿದರು.

ಶಿಬಿರಾಧಿಕಾರಿ ಡಾ. ಸತೀಶ್ ಕುಮಾರ್ ಪಿ ವಲ್ಲೇಪುರೆ, ಸಹ ಶಿಬಿರಾರ್ಥಿ ಗಿರೀಶ್ ಕುಮಾರ್ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.


**ವನಿತಾ ಸಮಾಜ (ರಿ.) ದಾವಣಗೆರೆ.**

**ಮೇಲ್ಕಂಡ ಸಂಸ್ಥೆ ಅಡಿಯಲ್ಲಿ ಕೆಳಕಂಡ ವಸತಿ ನಿಲಯಗಳು ಕಾರ್ಯ ನಿರ್ವಹಿಸುತ್ತಿವೆ.**

**ಆಶ್ರಯ**
60 ವರ್ಷ ಮೇಲ್ಪಟ್ಟ ಹಿರಿಯ ವನಿತೆಯರಿಗೆ ಉಚಿತವಾಗಿ ಊಟ, ವಸತಿ ನೀಡಿ ನೋಡಿಕೊಳ್ಳಲಾಗುವುದು - 94806 87273

**ವಾತ್ಸಲ್ಯ**
50 ವರ್ಷ ಮೇಲ್ಪಟ್ಟ ಹಿರಿಯ ವನಿತೆಯರು ಸ್ವತಂತ್ರವಾಗಿ ಮತ್ತು ಸ್ವಾವಲಂಬಿಗಳಾಗಿ ತಮ್ಮ ಸಂಧ್ಯಾಕಾಲವನ್ನು ಕಳೆಯಲು, ಅಡುಗೆ ಮಾಡಿಕೊಳ್ಳಲು ಅನುಕೂಲ ಇರುವ Attach Bathroom ಇರುವ ಕೊಠಡಿಗಳನ್ನು ಅತೀ ಕಡಿಮೆ ದರದಲ್ಲಿ ಬಾಡಿಗೆಗೆ ನೀಡಲಾಗುವುದು. 99805 21025

**ಶಿಲ್ಪಾಲಯ**
ವಿದ್ಯಾರ್ಥಿನಿಯರಿಗಾಗಿ ನಡೆಯುವ ವಸತಿ ನಿಲಯ. 99805 21025

**ಪ್ರೇಮಾಲಯ**
ಅನಾಥ ಅಥವಾ ಏಕಪೋಷಕರು ಇರುವ ಹೆಣ್ಣು ಮಕ್ಕಳಿಗಾಗಿ ಉಚಿತ ಊಟ, ವಸತಿ, ವಿದ್ಯಾಭ್ಯಾಸ ನೀಡಿ ನೋಡಿಕೊಳ್ಳಲಾಗುವುದು 98444 05553

**ಸ್ನೇಹಾಲಯ**
ಕಾರ್ಯನಿರತ ಹೆಣ್ಣು ಮಕ್ಕಳಿಗಾಗಿ ನಡೆಯುವ ವಸತಿ ನಿಲಯ - 94481 15466

ಮೇಲ್ಕಂಡ ವಸತಿ ನಿಲಯಗಳು ಊರಿನ ಮಧ್ಯಭಾಗದ ಎಂಸಿಸಿ 'ಎ' ಬ್ಲಾಕ್‌ನಲ್ಲಿದ್ದು, ಇತ್ತೀಚೆಗೆ ನವೀಕರಿಸಲಾಗಿದೆ. ಸುರಕ್ಷತೆಗಾಗಿ ಸುತ್ತಲು ಕಾಂಪೌಂಡ್ ಇದ್ದು, ಸೋಲಾರ್ ನೀರಿನ ಹಾಗೂ ಇತರೆ ಸೌಲಭ್ಯಗಳನ್ನು ಹೊಂದಿರುತ್ತವೆ. ಆಸಕ್ತರು ಮೇಲೆ ನಮೂದಿಸಿರುವ ನಂಬರನ್ನು ಸಂಪರ್ಕಿಸಬೇಕಾಗಿ ಕೋರಲಾಗಿದೆ.

# ಸ್ವ ಉದ್ಯೋಗ ರೂಪಿಸಿಕೊಂಡ ರೂಪಾಗೆ ಪ್ರಧಾನಿ ಮೋದಿಯಿಂದ ಪ್ರಶಂಸನಾ ಪತ್ರ





ದಾವಣಗೆರೆ, ಮೇ 28- ತಾಲ್ಲೂಕಿನ ದೊಡ್ಡಬಾತಿ ಗ್ರಾಮದ ಎ. ರೂಪ ಎಂಬ ಗೃಹಿಣಿಯೊಬ್ಬರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಪ್ರಶಂಸನಾ ಪತ್ರವೊಂದನ್ನು ನೀಡಿ ಗೌರವಿಸಿದ್ದಾರೆ.

ದೊಡ್ಡಬಾತಿ ಸಮೃದ್ಧಿ ಸಂಜೀವಿನಿ ಗ್ರಾ.ಪಂ. ಮಟ್ಟದ ಒಕ್ಕೂಟದ ಭಾಗ್ಯಲಕ್ಷ್ಮಿ ಸ್ವ ಸಹಾಯ ಗುಂಪಿನ ರೂಪಾ ಅವರು 'ಪಿಎಂ ಸ್ವನಿಧಿ' ಯೋಜನೆಯಡಿ ಸಾಲ ಪಡೆದು ಆರಂಭಿಸಿರುವ ಸ್ವ ಉದ್ಯೋಗ ಬೆಂಬಲಿಸಿ, ಪ್ರಧಾನ ಮಂತ್ರಿಗಳು ಈ ಪತ್ರ ಬರೆದಿದ್ದಾರೆ.

2022ರ ಮೇ 10ರಂದು ರೂಪ ಅವರು ಸ್ವ ಉದ್ಯೋಗ ಆರಂಭಿಸಿದ್ದರು. ಮೊದಲ ವರ್ಷ ಮನೆಯಲ್ಲಿಯೇ ಆಹಾರೋತ್ಪನ್ನ ತಯಾರಿಸುತ್ತಿದ್ದ ಅವರು, ನಂತರ ದೊಡ್ಡಬಾತಿ ರಸ್ತೆಯ ಮಳಿಗೆಯಲ್ಲಿ ಅಂಗಡಿ ಆರಂಭಿಸಿ ಮಾರಾಟ ಆರಂಭಿಸಿದ್ದರು.

ರೊಟ್ಟಿ, ಚಟ್ನಿ ಪುಡಿ, ಹಪ್ಪಳ, ಉಪ್ಪಿನಕಾಯಿ ಮೊದಲಾದ ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡುವ ರೂಪ ಇದೀಗ ಐವರಿಗೆ ಉದ್ಯೋಗ ನೀಡಿದ್ದಾರೆ. ಪ್ರತಿ ತಿಂಗಳಿಗೆ ಸುಮಾರು ಒಂದೂವರೆ ಲಕ್ಷದಷ್ಟು ವ್ಯಾಪಾರವಾಗಿ 30 ರಿಂದ 40 ಸಾವಿರ ರೂ. ಉಳಿ ತಾಯವಾಗುತ್ತದೆ ಎಂದು ರೂಪ ಪತ್ರಿಕೆಯೊಂದಿಗೆ ತಮ್ಮ ಯಶೋಗಾಥೆ ವಿವರಿಸಿದರು.

**ಹರ್ಷ:** ಪ್ರಧಾನ ಮಂತ್ರಿಗಳು ನಮ್ಮಂತಹ ಬಡ ಹೆಣ್ಣು ಮಕ್ಕಳನ್ನು ಗುರುತಿಸಿ ಸಾಲದ ರೂಪದಲ್ಲಿ ಸಹಾಯ ಮಾಡಿ, ಅಭಿನಂದಾ ಪತ್ರ ಕಳುಹಿಸುವ ಮೂಲಕ ಪ್ರೋತ್ಸಾಹಿಸುತ್ತಿರುವುದು ಖುಷಿ ತಂದಿದೆ ಎಂದು ರೂಪ ಇದೇ ವೇಳೆ ಹರ್ಷ ವ್ಯಕ್ತಪಡಿಸಿದರು.

**ಮಾರುಕಟ್ಟೆ ಸಮಸ್ಯೆ:** ನಾವು ಎಷ್ಟು ಬೇಕಾದರೂ ಆಹಾರ ಖಾದ್ಯಗಳನ್ನು ತಯಾರಿಸಲು ಸಿದ್ಧರಿದ್ದೇವೆ. ಆದರೆ ಮಾರುಕಟ್ಟೆ ಸಮಸ್ಯೆ ಇದೆ. ತಯಾರಿಸಿದ ಖಾದ್ಯ ಮಾರಾಟ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ರೂಪ ನಿರಾಸೆ ವ್ಯಕ್ತಪಡಿಸಿದರು.

ಸ್ವಸಹಾಯ ಸಂಘಗಳಿಗೆ ನೆರವು ನೀಡುವ ಬಗ್ಗೆ ಜನಪ್ರತಿನಿಧಿಗಳು ಹೇಳುತ್ತಾರೆ. ಆದರೆ ಮಾರುಕಟ್ಟೆ ಕಲ್ಪಿಸಿ ಕೊಡುವುದಿಲ್ಲ. ಸ್ವಾವಲಂಬಿಯಾಗಲು ಹೊರಟ ಪ್ರತಿ ಮಹಿಳೆಯರ ಸಮಸ್ಯೆಯೂ ಇದಾಗಿದೆ. ಆದ್ದರಿಂದ ಅಧಿಕಾರಿಗಳು, ಜನಪ್ರತಿನಿಧಿಗಳು ಈ ಬಗ್ಗೆ ಗಮನ ಹರಿಸುವಂತೆ ಅವರು ಮನವಿ ಮಾಡಿದರು.

# ಪ್ರಜ್ವಲ್ ಪೆನ್‌ಡ್ರೈವ್ ಹಂಚಿಕೆ ಪ್ರಕರಣದ ಪ್ರಮುಖ ಆರೋಪಿಗಳು ಎಸ್‌ಐಟಿ ವಶಕ್ಕೆ

ಬೆಂಗಳೂರು, ಮೇ 28 - ಹಾಸನ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಪೆನ್‌ಡ್ರೈವ್ ಹಂಚಿಕೆ ಪ್ರಕರಣದ ಪ್ರಮುಖ ಆರೋಪಿಗಳಾದ ನವೀನ್ ಗೌಡ ಮತ್ತು ಚೇತನ್ ಅವರನ್ನು ಎಸ್‌ಐ ಟಿ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ನಿರೀಕ್ಷಣಾ ಜಾಮೀನು ಅರ್ಜಿ ವಿಚಾರಣೆ ಹೈಕೋರ್ಟ್‌ನಲ್ಲಿ ಇದ್ದ ಕಾರಣ ನವೀನ್ ಮತ್ತು ಚೇತನ್ ತಮ್ಮ ಸ್ನೇಹಿತ ಶ್ಯಾಮ್ ಸುಂದರ್ ಜೊತೆ ನ್ಯಾಯಾಲಯಕ್ಕೆ ಬಂದ ಸಂದರ್ಭದಲ್ಲಿ ಇವರನ್ನು ವಶಕ್ಕೆ ಪಡೆಯಲಾಯಿತು.

ನ್ಯಾಯಾಲಯದಿಂದ ಹೊರಬಂದು ವಾಹನ ಪಾರ್ಕಿಂಗ್ ಪ್ರದೇಶದಲ್ಲಿದ್ದಾಗ ಆರೋಪಿಗಳ ಜೊತೆಗೆ ಸ್ನೇಹಿತನನ್ನೂ ವಶಕ್ಕೆ ತೆಗೆದುಕೊಂಡಿದ್ದಾರೆ.

ಪ್ರಜ್ವಲ್‌ನ ಎಡಿಟೆಡ್ ಅಶ್ಲೀಲ ವಿಡಿಯೋಗಳನ್ನು ಹರಿಬಿಟ್ಟು ತಲೆ ಮರೆಸಿಕೊಂಡಿದ್ದರು ಎಂಬ ಆರೋಪ ಇವರ ಮೇಲಿದೆ.

ನವೀನ್ ಮತ್ತು ಇತರರ ವಿರುದ್ಧ ಪ್ರಜ್ವಲ್ ರೇವಣ್ಣ ಅವರ ಚುನಾವಣಾ ಏಜೆಂಟ್ ಪೂರ್ಣಚಂದ್ರ ತೇಜಸ್ವಿ ಏಪ್ರಿಲ್ 23ರಂದು ಹಾಸನ ಕೇಂದ್ರ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿದ್ದರು. ಏಪ್ರಿಲ್ 21ರ ಸಂಜೆ ಯಿಂದ ಈ ಆರೋಪಿಗಳು ಸಿಡಿ ಮತ್ತು ಪೆನ್‌ಡ್ರೈವ್, ಗೋಡೆ ಬರಹ ಹಾಗೂ ಪೋಸ್ಟರ್‌ಗಳನ್ನು ಹಂಚಿದ್ದರು.

ಪ್ರಜ್ವಲ್ ರೇವಣ್ಣ ಅವರ ಬಗ್ಗೆ ಅಶ್ಲೀಲ ಭಾವಚಿತ್ರ ಮತ್ತು ವಿಡಿಯೋಗಳನ್ನು ತಯಾರಿಸಿಕೊಂಡು ಹಾಸನ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮನೆ ಮನೆಗೆ ತೆರಳಿ ಮೊಬೈಲ್‌ಗಳಲ್ಲಿ ತೋರಿಸಿ ಮತ್ತು ಹಂಚಿಕೆ ಮಾಡಿ ಜನರ ದಿಕ್ಕು ತಪ್ಪಿಸಿ ಅಭ್ಯರ್ಥಿ ಪರವಾಗಿ ಮತದಾನ ಮಾಡದಂತೆ ಪ್ರಚೋದಿಸುತ್ತಿದ್ದಾರೆ. ಹಾಗೂ ಚುನಾವಣೆಯಲ್ಲಿ ನ್ಯಾಯಯುತ ಮತದಾನ ಆಗುವುದನ್ನು ತಪ್ಪಿಸುವ ಸಲುವಾಗಿ ದುಷ್ಕೃತ್ಯವನ್ನು ಎಸಗುತ್ತಿರುವ ಮೇಲ್ಕಂಡವರ ವಿರುದ್ಧ ಕಾನೂನು ಕ್ರಮಕೈಗೊಳ್ಳಬೇಕೆಂದು ದೂರು ನೀಡಿದ್ದರು.

ಇದಾದ ನಂತರ ಅಶ್ಲೀಲ ಸಿಡಿ ಮತ್ತು ಪೆನ್‌ಡ್ರೈವ್‌ಗಳನ್ನು ಹಂಚಿಕೆ ಮಾಡಿದ ಆರೋಪ ಪ್ರಕರಣದ ತನಿಖೆಯನ್ನು ಪೊಲೀಸರಿಂದ ಎಸ್‌ಐಟಿಗೆ ವರ್ಗಾವಣೆ ಮಾಡಲಾಗಿತ್ತು.

ತದನಂತರ ಇವರು ನಿರೀಕ್ಷಣಾ ಜಾಮೀನು ಕೋರಿ ವಿಚಾರಣಾ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಅರ್ಜಿ ವಜಾಗೊಂಡ ಹಿನ್ನೆಲೆಯಲ್ಲಿ ಹೈಕೋರ್ಟ್‌ನಲ್ಲಿ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು.

ಪ್ರಕರಣ ದಾಖಲಾದ ನಂತರ ಆರೋಪಿಗಳು ತಲೆ ಮರೆಸಿಕೊಂಡಿದ್ದರು, ಇವರು ಶಕ್ತಿಸೌಧದಲ್ಲೇ ರಾಜಾರೋಷವಾಗಿ ಓಡಾಡಿಕೊಂಡಿದ್ದಾರೆಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಆರೋಪಿಸಿದ್ದರು.

ಪೆನ್‌ಡ್ರೈವ್ ಪ್ರಕರಣಕ್ಕೆ ಸಂಬಂಧಿಸಿದಂತೆ 6 ಮತ್ತು 7ನೇ ಆರೋಪಿಗಳನ್ನೂ ಎಸ್‌ಐಟಿ ಈಗಾಗಲೇ ವಶಕ್ಕೆ ಪಡೆದಿದೆ.

ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣದ ಪ್ರಮುಖ ಆರೋಪಿ ಪ್ರಜ್ವಲ್ ರೇವಣ್ಣ ಇದೇ 31ಕ್ಕೆ ಎಸ್‌ಐಟಿ ಮುಂದೆ ಹಾಜರಾಗುವುದಾಗಿ ನೀಡಿದ ಹೇಳಿಕೆ ಬೆನ್ನಲ್ಲೇ ಈ ಆರೋಪಿಗಳ ಬಂಧನ ಕುತೂಹಲ ಮೂಡಿಸಿದೆ.

## ನಗರದಲ್ಲಿ ಇಂದು - ನಾಳೆ ಆಧುನಿಕ ಹೈನುಗಾರಿಕೆ ತರಬೇತಿ

ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಇಂದು ಮತ್ತು ನಾಳೆ ಆಧುನಿಕ ಹೈನುಗಾರಿಕೆ ತರಬೇತಿ ನಡೆಯಲಿದೆ. ಆಸಕ್ತರು ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರ (ದೂರವಾಣಿ 08192-233787) ವನ್ನು ಸಂಪರ್ಕಿಸಬಹುದು.

# ಬಿತ್ತನೆ ಬೀಜದ ಬೆಲೆ ಏರಿಕೆ ವಾಪಸ್ ಪಡೆಯಲು ಆಗ್ರಹ

ಬೆಂಗಳೂರು, ಮೇ 28 - ಬಿತ್ತನೆ ಬೀಜದ ಬೆಲೆಯಲ್ಲಿನ ಏರಿಕೆಯನ್ನು ಹಿಂಪಡೆ ಯುವಂತೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ಆಗ್ರಹಿಸಿದ್ದಾರೆ. ಸತತ ಬರದಿಂದ ಕಂಗೆಟ್ಟ ರೈತನಿಗೆ ಪೂರ್ವ ಮುಂಗಾರು ಮಳೆ ಆಶಾದಾಯಕವಾಗಿದ್ದರೂ ಬಿತ್ತನೆ ಬೀಜದ ಬೆಲೆಯಿಂದ ಕೃಷಿಕ ಕಂಗಾಲಾಗಿದ್ದಾನೆ.

ಎಲ್ಲಾ ಬಿತ್ತನೆ ಬೀಜಗಳ ಬೆಲೆಯನ್ನು ಸರ್ಕಾರ ಶೇಕಡ 60ರಷ್ಟು ಹೆಚ್ಚಳ ಮಾಡಿದೆ ಎಂದು ಕಿಡಿಕಾರಿದ್ದಾರೆ.

ಕೃಷಿ ಇಲಾಖೆಯಿಂದ ರಿಯಾಯಿತಿ ದರದಲ್ಲಿ ಲಭ್ಯವಿದ್ದ ಬಿತ್ತನೆ ಬೀಜದ ಬೆಲೆ ಏರಿಕೆಯಾದ ಪರಿಣಾಮ, ಮುಕ್ತ ಮಾರುಕಟ್ಟೆಯಲ್ಲಿಯೂ ದರ ದುಪ್ಪಟ್ಟಾಗಿದೆ. ಸರ್ಕಾರ ತಕ್ಷಣ ಬಿತ್ತನೆ ಬೀಜದ ದರ ಇಳಿಕೆಗೆ ಕ್ರಮ ಕೈಗೊಳ್ಳಬೇಕು ಮತ್ತು ಮುಕ್ತ ಮಾರುಕಟ್ಟೆಯಲ್ಲಿ ದರ ಏರಿಕೆಗೆ ನಿಯಂತ್ರಣ ವಿಧಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

## ಮಹಾನಗರ ಪಾಲಿಕೆಯ ವಲಯ ಕಚೇರಿಗಳಿಗೆ ವಾರ್ಡ್‌ಗಳ ಸ್ಥಳಾಂತರ

ದಾವಣಗೆರೆ, ಮೇ 28 - ಸಾರ್ವಜನಿಕರಿಗೆ ಅನುಕೂಲವಾಗುವ ಹಿತದೃಷ್ಟಿಯಿಂದ ಹಾಗೂ ಮಹಾನಗರ ಪಾಲಿಕೆಯ ಸುಗಮ ಆಡಳಿತ ಹಿತದೃಷ್ಟಿಯಿಂದ ದಾವಣಗೆರೆ ಮಹಾನಗರ ಪಾಲಿಕೆಯ ವಲಯ ಕಚೇರಿಗೆ ಸಂಬಂಧಿಸಿದಂತೆ ಕೆಲವು ವಾರ್ಡ್‌ಗಳನ್ನು ಸ್ಥಳಾಂತರ ಮಾಡಲಾಗಿದೆ.

**ಸ್ಥಳಾಂತರಗೊಳಿಸಿದ ವಿವರ:-** ವಲಯ ಕಚೇರಿ-02 ರಲ್ಲಿದ್ದ ವಾರ್ಡ್ ನಂ- 18, 19 ಮತ್ತು 20 ನ್ನು ವಲಯ ಕಚೇರಿ-1ಕ್ಕೆ ಸ್ಥಳಾಂತರಿಸಲಾಗಿದೆ. ವಲಯ ಕಚೇರಿ- 03 ರಲ್ಲಿದ್ದ ವಾರ್ಡ್ ನಂ-31 ಮತ್ತು 41 ನ್ನು ವಲಯ ಕಚೇರಿ-2 ಕ್ಕೆ ಸ್ಥಳಾಂತರಗೊಳಿಸಲಾಗಿದೆ ಎಂದು ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ ತಿಳಿಸಿದ್ದಾರೆ.

## ಮಿಜೋರಾಂ : ಮಳೆ, ಭೂಕುಸಿತದಿಂದ 23 ಸಾವು

ಐಜಾವ್ಲ್, ಮೇ 28 – ಮಿಜೋರಾಂ ಐಜಾವ್ಲ್ ಜಿಲ್ಲೆಯಲ್ಲಿ ಕಲ್ಲು ಗಣಿ ಕುಸಿದು 13 ಜನ ಸಾವನ್ನಪ್ಪಿದ್ದಾರೆ ಹಾಗೂ ಆರು ಜನ ಕಾಣೆಯಾಗಿದ್ದಾರೆ. ರೆಮಲ್ ಚಂಡಮಾರುತದ ಕಾರಣದಿಂದ ಸುರಿದ ಧಾರಾಕಾರ ಮಳೆಯಿಂದ ಈ ಕುಸಿತವಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಕಲ್ಲು ಗಣಿ ಕುಸಿತ ಹಾಗೂ ಮಳೆ ಸಂಬಂಧದ ಘಟನೆಗಳಿಂದ ರಾಜ್ಯದಲ್ಲಿ ಒಟ್ಟು 23 ಸಾವುಗಳು ಸಂಭವಿಸಿವೆ. ಭೂಕುಸಿತದ ನಂತರ ಹಲವರು ನಾಪತ್ತೆಯಾಗಿದ್ದಾರೆ.

ರಾಜ್ಯದ ರಾಜಧಾನಿ ಐಜಾವ್ಲ್‌ನ ಹಲವೆಡೆ ಉಂಟಾದ ಭೂಕುಸಿತದ ಕಾರಣದಿಂದ ಹಲವರು ಕಾಣೆಯಾಗಿದ್ದಾರೆ. ಭೂಕುಸಿತದ ಕಾರಣದಿಂದ ರಾಜಧಾನಿ ದೇಶದ ಇತರೆ ಭಾಗಗಳ ಸಂಪರ್ಕ ಕಡಿದುಕೊಂಡಿದೆ.

## ಯೋಗ್ಯವಾದ ತೆಂಗು, ಅಡಿಕೆ ಸಸಿ ಲಭ್ಯ

ದಾವಣಗೆರೆ ಮೇ 28 - ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಆವರಗೊಳ್ಳ, ಬುಳ್ಳಾಪುರ, ವ್ಯಾಸಗೊಂಡನಹಳ್ಳಿ, ಗರಗ, ಬೇಲಿಮಲ್ಲೂರು, ಕಡರನಾಯಕನಹಳ್ಳಿ ಹಾಗೂ ಎಕ್ಕೆಗೊಂದಿ ತೋಟಗಾರಿಕೆ ಕ್ಷೇತ್ರಗಳಲ್ಲಿ ಉತ್ತಮ ತಳಿಯ ನಾಟಿಗೆ ಯೋಗ್ಯವಾದ ತೆಂಗು, ಅಡಿಕೆ ಸಸಿಗಳು ಲಭ್ಯವಿರುತ್ತವೆ. ಆಸಕ್ತ ರೈತರು ಇಲಾಖೆ ನಿಗದಿಪಡಿಸಿದ ದರದಂತೆ ಮೇಲಿನ ಕ್ಷೇತ್ರಗಳಿಂದ ಸಸಿಗಳನ್ನು ಖರೀದಿಸಬಹುದು. ವಿವರಕ್ಕೆ ದೂರವಾಣಿ 9591771724, 9448581142, 8296357345 ಸಂಪರ್ಕಿಸಲು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ರಾಘವೇಂದ್ರ ಪ್ರಸಾದ್ ತಿಳಿಸಿದ್ದಾರೆ.

# ಚಂಚಲ ಮನಸ್ಸು ಸತ್ಯವನ್ನು ಗ್ರಹಿಸುವುದಿಲ್ಲ



ದಾವಣಗೆರೆ, ಮೇ 27- ಚಂಚಲ ಮನಸ್ಸು ಸತ್ಯವನ್ನು ಗ್ರಹಿಸಲು ಸಾಧ್ಯವಿಲ್ಲ, ಸತ್ಯವನ್ನು ಗ್ರಹಿಸದೇ ಪರಮಾತ್ಮನನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ, ಚಿತ್ತದ ಏಕಾಗ್ರತೆಯೇ ಇದಕ್ಕೆ ಪರಿಹಾರ ಎಂದು ಹಿರಿಯ ಪತ್ರಕರ್ತ ಎಚ್.ಬಿ. ಮಂಜುನಾಥ ಹೇಳಿದರು.


ಸಾಲಿಗ್ರಾಮ ಕೂಟ ಮಹಾ ಜಗತ್ತಿನ ದಾವಣಗೆರೆ ಅಂಗ ಸಂಸ್ಥೆ ವತಿಯಿಂದ ನಗರದ ಶ್ರೀ ಕೃಷ್ಣ ಕಲಾ ಮಂದಿರದಲ್ಲಿ ಮೊನ್ನೆ ಏರ್ಪಾಡಾಗಿದ್ದ ಶ್ರೀ ನರಸಿಂಹ ಜಯಂತಿ ಕಾರ್ಯಕ್ರಮ ದಲ್ಲಿ ಪಾಲ್ಗೊಂಡು ಅವರು ಉಪನ್ಯಾಸ ನೀಡಿದರು.

ಶಾಸ್ತ್ರಾಧ್ಯಯನವಾಗಲೀ, ಭಕ್ತಿ ಸಮರ್ಪಣೆಯೇ ಆಗಲೀ, ಭಗವದ್ ಸಾಕ್ಷಾತ್ಕಾರಕ್ಕಾಗಲೀ, ಸತ್ಯಾನ್ವೇಷಣೆಗಾಗಲೀ ಚಿತ್ತ ಏಕಾಗ್ರತೆ ಅವಶ್ಯ, ಇದು ಉಂಟಾದಾಗ ಯಾವುದೂ ನಮಗೆ ಕಷ್ಟ ಮತ್ತು ದುಸ್ತರ ಎನಿಸುವುದಿಲ್ಲ, ಅಧ್ಯಯನವೇ ಆಗಲಿ, ಧ್ಯಾನವೇ ಆಗಲಿ, ಆರಾಧನೆಯೇ ಆಗಲಿ, ಭಜನೆ, ಶ್ರವಣವೇ ಆಗಲಿ ಏಕಾಗ್ರತೆಯಿಂದ ಮಾತ್ರ ಮನನ ಸಾಧ್ಯ ಎಂಬುದನ್ನು ಸ್ವಾರಸ್ಯಕರ ಉದಾಹರಣೆಗಳ ಸಹಿತ ವಿವರಿಸಿದರು.

ಕೂಟ ಮಹಾ ಜಗತ್ತು ದಾವಣಗೆರೆ ಅಂಗ ಸಂಸ್ಥೆಯ ನೂತನ ಅಧ್ಯಕ್ಷ ಮೋತಿ ಎನ್. ರಾಘವೇಂದ್ರ, ಪದಾಧಿಕಾರಿಗಳಾದ ಕೆ. ಶಿವರಾಮ ಕಾರಂತ, ಬಾಲಕೃಷ್ಣ ವೈದ್ಯ, ಸುಬ್ರಹ್ಮಣ್ಯ ಹೊಳ್ಳ, ಶ್ರೀನಿವಾಸ ಕಾರಂತ, ಮೋತಿ ಪಿ. ಪರಮೇಶ್ವರ್ ರಾವ್, ಕೇಶವಮೂರ್ತಿ ಕಾರಂತ, ಮೋತಿ ಆರ್. ಸುಬ್ರಮಣ್ಯ, ಗುರು ಪ್ರಸಾದ್ ಮುಂತಾದವರು ಭಾಗವಹಿಸಿದ್ದರು.

ರೋಹಿಣಿ ಹೊಳ್ಳ ಮತ್ತು ಸಂಗಡಿಗರು ಭಜನೆ ನೆರವೇರಿಸಿದರೆ, ಹರೀಶ್ ಹೊಳ್ಳ ಮುಂತಾದವರು ಪೂಜೆಯನ್ನೂ, ಹರೀಶ್ ಐತಾಳ್ ತಂಡದವರು ಚೆಂಡೆ ಸೇವೆಯನ್ನೂ ನೆರವೇರಿಸಿದರು.

## ಪ್ರಚಾರದ ನಂತರ ಪ್ರಧಾನಿಯಿಂದ ಕನ್ಯಾಕುಮಾರಿಯಲ್ಲಿ ಧ್ಯಾನ



ನವದೆಹಲಿ, ಮೇ 28 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಲೋಕಸಭಾ ಚುನಾವಣಾ ಅಭಿಯಾನ ಪೂರ್ಣಗೊಂಡ ನಂತರ ಕನ್ಯಾಕುಮಾರಿಯಲ್ಲಿರುವ ಸ್ವಾಮಿ ವಿವೇಕಾನಂದ ಶಿಲಾ ಸ್ಮಾರಕಕ್ಕೆ ಭೇಟಿ ನೀಡಿ ಅಲ್ಲಿ ಧ್ಯಾನ ಮಾಡಲಿದ್ದಾರೆ.

ಮೇ 30ರ ಸಂಜೆಯಿಂದ ಜೂನ್ 1ರ ಸಂಜೆಯವರೆಗೆ ಅಲ್ಲಿನ ಧ್ಯಾನ ಮಂಟಪದಲ್ಲಿ ಅವರು ಧ್ಯಾನ ಮಾಡಲಿದ್ದಾರೆ. 2019ರ ಲೋಕಸಭಾ ಚುನಾವಣೆಯ ಪ್ರಚಾರ ಪೂರ್ಣಗೊಂಡ ನಂತರ ಮೋದಿ ಅವರು ಕೇದಾರನಾಥ ಗುಹೆಯಲ್ಲಿ ಧ್ಯಾನ ಮಾಡಿದ್ದರು. ಸ್ವಾಮಿ ವಿವೇಕಾನಂದ ಅವರು ಭಾರತವನ್ನು ಸಂಚರಿಸಿದ ನಂತರ, ಕನ್ಯಾಕುಮಾರಿಯ ಶಿಲೆಯ ಮೇಲೆ ಮೂರು ದಿನ ಧ್ಯಾನ ಮಾಡಿದ್ದರು.

ವಿವೇಕಾನಂದ ಅವರು ಅಭಿವೃದ್ಧಿ ಹೊಂದಿದ ಭಾರತದ ದೂರದೃಷ್ಟಿ ಹೊಂದಿದ್ದರು. ಹೀಗಾಗಿ ಪ್ರಧಾನಿ ಈ ಸ್ಥಳವನ್ನು ಧ್ಯಾನಕ್ಕೆ ಆಯ್ಕೆ ಮಾಡಿಕೊಂಡಿದ್ದಾರೆ ಎಂದು ಬಿಜೆಪಿ ನಾಯಕರು ತಿಳಿಸಿದ್ದಾರೆ.

## ಇಂಡಿಗೋ ವಿಮಾನಕ್ಕೆ ಬಾಂಬ್ ಬೆದರಿಕೆ

ನವದೆಹಲಿ, ಮೇ 28 – ವಾರಣಾಸಿಗೆ ತೆರಳುತ್ತಿದ್ದ ಇಂಡಿಗೋ ವಿಮಾನಕ್ಕೆ ಬಾಂಬ್ ಬೆದರಿಕೆ ಎದುರಾಗಿತ್ತು. ಆದರೆ, ತಪಾಸಣೆಯ ನಂತರ ಹುಸಿ ಬೆದರಿಕೆ ಎಂಬುದು ಕಂಡು ಬಂದಿದೆ.

ಬೆದರಿಕೆ ಕರೆ ಬಂದ ನಂತರ ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿದ್ದ ವಿಮಾನದಿಂದ 176 ಪ್ರಯಾಣಿಕರನ್ನು ಕೆಳಗಿಳಿಸಲಾಯಿತು. ವಿಮಾನ ಹೊರಡುವ ಸಿದ್ಧತೆಯಲ್ಲಿದ್ದ ಸಂದರ್ಭದಲ್ಲಿ, ವಿಮಾನದ ಶೌಚಾಲಯದಲ್ಲಿ ಬೆದರಿಕೆಯ ಪತ್ರ ಕಂಡು ಬಂದಿತ್ತು.


**ಕೈಲಾಸ ಶಿವಗಣಾರಾಧನೆ ಆಹ್ವಾನ**



ಶ್ರೀಮತಿ ಶಾಂತ ಎನ್.ಆರ್. ಚಂದ್ರಪ್ಪ
ದಾವಣಗೆರೆ ನಗರದ ಎಂ.ಸಿ.ಸಿ. 'ಬಿ' ಬ್ಲಾಕ್,
7ನೇ ಮೇನ್, 5ನೇ ಕ್ರಾಸ್, # 3000/2ರ ವಾಸಿ
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 25-05-2024ರ ಶನಿವಾರ
ಬೆಳಿಗ್ಗೆ 6.30ಕ್ಕೆ ನನ್ನ ಪೂಜ್ಯ ಪತಿಯವರಾದ
ಡಾ. ಎನ್. ಆರ್. ಚಂದ್ರಪ್ಪ
(Rtd. Prof. & HOD Dept. of Microbiology, JJM Medical College)
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಶಿವಗಣಾರಾಧನೆಯನ್ನು
ದಿನಾಂಕ 29-05-2024ನೇ ಬುಧವಾರ ಮಧ್ಯಾಹ್ನ 12 ಗಂಟೆಗೆ
ಹದಡಿ ರಸ್ತೆಯಲ್ಲಿರುವ ಎಸ್.ಎಸ್. ಕಲ್ಯಾಣ ಮಂಟಪ (ಮಿನಿ ಚೌಟ್ರಿ)
ಇಲ್ಲಿ ನೆರವೇರಿಸಲಿದ್ದು, ತಾವುಗಳು ಆಗಮಿಸಿ, ಲಿಂಗೈಕ್ಯರ ಆತ್ಮಕ್ಕೆ
ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ಶಾಂತ ಎನ್.ಆರ್. ಚಂದ್ರಪ್ಪ
ಶ್ರೀಮತಿ ಶ್ರೀ ನಂದಿನಿ ಮಹೇಶ್ ಮತ್ತು ಮಕ್ಕಳು USA
ಶ್ರೀಮತಿ ಶ್ರೀ ಸರ್ವಮಂಗಳ ಜಯಂತ್ ಮತ್ತು ಮಕ್ಕಳು USA
ನಾರಮ್ಮನವರ ವಂಶಸ್ಥರು, ಮುದೇಗೌಡ್ರು ವಂಶಸ್ಥರು, ಬಂಧು-ಮಿತ್ರರು.


**ಭದ್ರಾ ಜಲಾಶಯ**

ನೀರಿನ ಮಟ್ಟ : 117 ಅಡಿ 2 ಇಂಚು
ಒಳ ಹರಿವು : 984 ಕ್ಯೂಸೆಕ್ಸ್
ಹೊರ ಹರಿವು : 579 ಕ್ಯೂಸೆಕ್ಸ್
ಕಳೆದ ವರ್ಷ : 137 ಅಡಿ 7 ಇಂಚು

## ಛತ್ತೀಸ್‌ಘಡ : 15 ನಕ್ಸಲರ ಬಂಧನ

ದಂತೇವಾಡ, ಮೇ 28 – ಛತ್ತೀಸ್‌ಘಡದ ದಂತೇವಾಡ ಜಿಲ್ಲೆಯಲ್ಲಿ ಐ.ಇ.ಡಿ. ಸ್ಫೋಟ ಸಂಭವಿಸಿದ ನಂತರ 15 ನಕ್ಸಲರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಭದ್ರತಾ ಸಿಬ್ಬಂದಿ ಶೋಧ ಕಾರ್ಯಾಚರಣೆ ನಡೆಸುವಾಗ ನಕ್ಸಲರು ಸ್ಫೋಟ ನಡೆಸಿದ್ದರು. ಆದರೆ, ಸ್ಫೋಟದಲ್ಲಿ ಯಾರೂ ಗಾಯಗೊಂಡಿರಲಿಲ್ಲ. ನಂತರ ಗುಮಲ್ನರ್ ಹಳ್ಳಿಯಲ್ಲಿ ನಕ್ಸಲರನ್ನು ಬಂಧಿಸಲಾಗಿದೆ. ಬಂಧಿತರಲ್ಲಿ ಬಹುತೇಕರು ನಿಷೇಧಿತ ಸಿಪಿಐ (ಮಾವೋ) ಸಂಘಟನೆಗೆ ಸೇರಿದವರು.


ಅಭಿವೃದ್ಧಿ ಮದುವೆ ಸಮಾರಂಭಗಳ ಪ್ರಯುಕ್ತ
ಸಿಲ್ಕ್ ಇಂಡಿಯ® 2024
Last 5 Days
ಭಾರತದ ಎಲ್ಲಾ ರಾಜ್ಯಗಳಿಂದ ಪರಿಶುದ್ಧ ರೇಷ್ಮೆ ಸೀರೆಗಳು ಹಾಗೂ ರೇಷ್ಮೆ ಉತ್ಪನ್ನಗಳು
ಬಿಹಾರ್ : ತಸ್ಸರ್ ರೇಷ್ಮೆ ಸೀರೆಗಳು, ಸ್ಟೋಲ್ಸ್, ಶಾಲುಗಳು ಕರ್ನಾಟಕ : ಕ್ರೇಪ್, ಶಿಫಾನ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು ತಮಿಳುನಾಡು : ಕಾಂಚಿಪುರಂ ಸಿಲ್ಕ್ ಮತ್ತು ಮದುವೆ ಸೀರೆಗಳು ಆಂಧ್ರ ಪ್ರದೇಶ : ಧರ್ಮಾವರಂ ಸೀರೆಗಳು, ಉಪ್ಪಡಾ ಮತ್ತು ಪೂಚಂಪಲ್ಲಿ ಸೀರೆಗಳು ಉತ್ತರ ಪ್ರದೇಶ : ಬನಾರಸ್ ಮತ್ತು ಟೆಂಪಲ್ ಬಾರ್ಡರ್‌ಉಳ್ಳ ಮುಲ್‌ಬಾರಿ ಸಿಲ್ಕ್, ಲಕ್ನೋ ಚಿಕಾನ್ ಕಸೂತಿ, ಮಹಾರಾಷ್ಟ್ರ : ಡಿಸೈನರ್ ಎಂಬ್ರಾಯಿಡರಿ ಸೀರೆ ಮತ್ತು ಡ್ರೆಸ್ ಒರಿಸ್ಸಾ : ಸಂಬಲ್‌ಪುರಿ, ಇಕ್ಕತ್, ಬೋಂಕೈ ಸೀರೆಗಳು, ಹ್ಯಾಂಡ್‌ಲೂಮ್ ಸಿಲ್ಕ್ ಕಾಟನ್ ಚತ್ತೀಸ್‌ಘಡ್ : ರಾ ಸಿಲ್ಕ್ ಮತ್ತು ಕೋಸಾ ಸೀರೆಗಳು ಮಧ್ಯ ಪ್ರದೇಶ : ಮಹೇಶ್ವರಿ ಮತ್ತು ಚಂದೇರಿ ಸಿಲ್ಕ್ ಪಶ್ಚಿಮ ಬಂಗಾಳ : ಢಾಕ ಸೀರೆಗಳು, ಬಲ್‌ಚೂರಿ ರೇಷ್ಮೆ, ಮತ್ತು ಕಾಂತ ಎಂಬ್ರಾಯಿಡರಿ ಸೀರೆಗಳು ಜಮ್ಮು ಮತ್ತು ಕಾಶ್ಮೀರ : ಚಿನಾನ್, ಟೆಡ್ಡಿ ರೇಷ್ಮೆ ಸೀರೆಗಳು, ಪಶ್ಮೀನಾ ಸೀರೆಗಳು, ಸ್ಟೋಲ್ಸ್, ಶಾಲುಗಳು ರಾಜಾಸ್ಥಾನ್ : ಕೋಟಾ ಸಿಲ್ಕ್, ಕೈ ಅಚ್ಚಿನ ಸೀರೆಗಳು ...
24 ಮೇ ಯಿಂದ 2 ಜೂನ್ 2024 ರವರೆಗೆ | ಸಮಯ : ಬೆಳಿಗ್ಗೆ 10.30 ರಿಂದ ಸಂಜೆ 8.30 ರವರೆಗೆ
ಹೋಟೆಲ್ ಪೂಜಾ ಇಂಟರ್‌ನ್ಯಾಷಿನಲ್
ಪಿ.ಬಿ. ರಸ್ತೆ, ದಾವಣಗೆರೆ
up to 30% Discount
Entry Free | All Credit & Debit Cards Accepted | Contact : 63641 65152
Organised by : abhivruddhi






Courses offered

School of Basic Science & Applied Science
BSc Major (M,CS), Minor (P/S/E)
BSc Major (S,CS), Minor (P/M/E)
BSc Major (P,M), Minor (CS/S/E)
BSc Major (P,C), Minor (CS/M/E)
BSc Major (C,CS), Minor (P/M/E)
BSc Major (B,Z), Minor (C/EC/CS/S)
BSc Major (C,Z), Minor (B/EC/CS/S)
BSc Major (C,B), Minor (B/MB/CS/S)
BSc Major (BT), Minor (CS/BC)
BSc Major (FST), Minor (Z/C/CS)
BSc Major (MB), Minor (Z/BC/CS)

School of Commerce
B.Com Accounting & Taxation
B.Com Banking & Insurance
B.Com Accounting & Finance
B.Com General

School of Computer Application
BCA General
B.Sc., Data Science
B.Sc., AI & Data Analytics
B.Sc., Computer Science

School of Management
BBA Digital Marketing and Social Media
BBA Business Analytics
BBA Human Resource Management
BBA Marketing and Sales

10 University Rank Holders | 34 University Blues | 04 Excellent Education Awards | 208 Placements in 2023-24

What are you waiting for For Admission ▾
BCA - 9141158736 B.Com - 9740070661
B.Sc., - 8088446909 BBA - 9739496820


KA/SK/DVG-028/2024-2026. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas